ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 11 ಭಾನುವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 264 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮನರೇಗಾದಲ್ಲಿನ ಬ್ರಹ್ಮಾಂಡ ಭ್ರಷ್ಟಾಚಾರ ತಡೆಗೆ

ವಿಬಿ ಜಿ-ರಾಮ್-ಜಿ ಜಾರಿ

■ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಸಮರ್ಥನೆ ■ ಗ್ರಾಮೀಣ ಬಡವರು ಕೃಷಿ ಕೂಲಿ ಕಾರ್ಮಿಕರಿಗೆ ಅನುಕೂಲ ಕಲ್ಪಿಸಲು ಈ ನಿರ್ಧಾರ ■ ಅಭಿವೃದ್ಧಿ ವಿಷಯದಲ್ಲಿ ರಾಜ್ಯ ಸರ್ಕಾರಗಳ ಜವಾಬ್ದಾರಿ ಹೆಚ್ಚಿಸುವ ಉದ್ದೇಶ ■ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಸುಧಾರಣೆ ಅಷ್ಟೇ ■ ತಾ.ಪಂ, ಜಿಪಂ ಚುನಾವಣೆ ನಡೆಸಲು ಯೋಗ್ಯತೆ ಇಲ್ಲದ ರಾಜ್ಯ ಸರ್ಕಾರ ಈ ಮೂಲಕ ಗೊಂದಲ ಸೃಷ್ಟಿ

ಬೆಂಗಳೂರು, ಜ.10(ಕೆಎಂಶಿ)– ಗ್ರಾಮೀಣ ಬಡವರು, ಕೃಷಿ ಕೂಲಿ ಕಾರ್ಮಿಕರಿಗೆ ಅನುಕೂಲ ಮಾಡಿಕೊಡಲೆಂದು ಜಾರಿಗೆ ತಂದಿದ್ದ ಉದ್ಯೋಗ ಖಾತ್ರಿ ಯೋಜನೆಯಲ್ಲಿ ನಡೆಯುತ್ತಿದ್ದ ಬ್ರಹ್ಮಾಂಡ ಭ್ರಷ್ಟಾಚಾರ ತಡೆಗಟ್ಟಿ, ಅಭಿವೃದ್ಧಿ ಕಾಮಗಾರಿಗಳಲ್ಲಿ ರಾಜ್ಯ ಸರ್ಕಾರಗಳ ಜವಾಬ್ದಾರಿ ಹೆಚ್ಚಿಸುವ ಉದ್ದೇಶದಿಂದ ಪ್ರಧಾನಿ ನರೇಂದ್ರ ಮೋದಿ ಮನರೇಗಾ ಯೋಜನೆಗೆ ಹೊಸ ರೂಪ ಕೊಟ್ಟಿದ್ದಾರೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಇಂದಿಲ್ಲಿ ಸಮರ್ಥಿಸಿಕೊಂಡಿದ್ದಾರೆ.

ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್.ಅಶೋಕ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನೊಳಗೊಂಡ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮನರೇಗಾ ಯೋಜನೆಯನ್ನು ವಿರೋಧಿಸುತ್ತಿರುವ ರಾಜ್ಯ ಕಾಂಗ್ರೆಸ್ ಸರ್ಕಾರವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.

ವಿಧಾನಮಂಡಲದ ಅಧಿವೇಶನ ನಡೆಸಿ, ಕೇಂದ್ರ ಸರ್ಕಾರ ಜಾರಿಗೆ ತಂದಿರುವ ನೂತನ ಉದ್ಯೋಗ ಖಾತ್ರಿ ಯೋಜನೆ ವಿಬಿ–ಜಿ–ರಾಮ್–ಜಿ ವಿರುದ್ಧ ನಿರ್ಣಯ ಕೈಗೊಳ್ಳುವುದರಿಂದ ಯಾವುದೇ ಬದಲಾವಣೆ ಆಗದು. ▶ 6ನೇ ಪುಟಕ್ಕೆ



ಬೆಂಗಳೂರಿನಲ್ಲಿ ಶನಿವಾರ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮಾತನಾಡಿದರು. ಚಿತ್ರದಲ್ಲಿ ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್.ಅಶೋಕ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಇದ್ದಾರೆ.

ಸಿದ್ದರಾಮಯ್ಯ ಲೀಸ್ ಬೇಸ್ಡ್ ಸಿಎಂ !

ಬೆಂಗಳೂರು, ಜ.10– ಸಿದ್ದರಾಮಯ್ಯ ಒಬ್ಬ 'ಲೀಸ್ ಬೇಸ್ಡ್(ಗುತ್ತಿಗೆ ಆಧಾರಿತ) ಮುಖ್ಯಮಂತ್ರಿ' ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಗುಡುಗಿದ್ದು, ಇದನ್ನು ಸಮರ್ಥಿಸಿಕೊಂಡಿರುವ ಬಿಜೆಪಿ ನಾಯಕರು ತಮ್ಮದೇ ರೀತಿಯಲ್ಲಿ ವ್ಯಾಖ್ಯಾನ ಮಾಡಿದ್ದಾರೆ.

ಸಿದ್ದರಾಮಯ್ಯನವರು ದೇವರಾಜ ಅರಸು ಅವರ ದಾಖಲೆ ಮುರಿದ ಬಗ್ಗೆ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ ಕೇಂದ್ರ ಸಚಿವ ಕುಮಾರಸ್ವಾಮಿ, ಡಿ.ದೇವರಾಜ ಅರಸು ದಾಖಲೆ ಮುರಿದೆ ಅಂತಾ ಹೇಳ್ತಿದ್ದಾರೆ. ಹಿಂದೆ ಇಂದಿರಾಗಾಂಧಿ ವಿರುದ್ಧ ಅರಸು ಸೆಡ್ಡು ಹೊಡೆದು ನಿಂತಿದ್ದರು. ಈಗ ಇವರು ರಾಹುಲ್ ಗಾಂಧಿ ಯಾವಾಗ ಹೋಗು ಅಂತಾರೆ ಎಂದು ಕಾಯುತ್ತಿದ್ದಾರೆ ಎಂದು ಟಾಂಗ್ ನೀಡಿದ್ದಾರೆ.

ಕುಮಾರಸ್ವಾಮಿ ಅವರ ಹೇಳಿಕೆಯನ್ನು ಸಮರ್ಥಿಸಿಕೊಂಡಿರುವ ವಿಪಕ್ಷ ನಾಯಕ ಆರ್.ಅಶೋಕ್, ಇದು ಬರೀ ಲೀಸ್ ಅಲ್ಲ ಪಕ್ಕಾ ಲೀಸ್ ಅಗ್ರಿಮೆಂಟ್. ಯಾವಾಗ ಬೇಕಾದರೂ ▶ 6ನೇ ಪುಟಕ್ಕೆ

ಹೊಸ ಕಾಯ್ದೆ ವಿರುದ್ಧ ಹೋರಾಡ್ತೇವೆ...



ಬೆಂಗಳೂರು, ಜ.10(ಕೆಎಂಶಿ)–ರಾಜ್ಯಕ್ಕೆ ಎಷ್ಟೇ ಅನ್ಯಾಯವಾದರೂ ಕೇಂದ್ರ ಸರ್ಕಾರ ಮಾಡಿದ್ದನ್ನೆಲ್ಲಾ ಸಮರ್ಥಿಸಿಕೊಳ್ಳುವುದು ಬಿಜೆಪಿಯವರ ಮಹಾ ತಪ್ಪು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕರ್ನಾಟಕಕ್ಕೆ ಅನ್ಯಾಯವಾದದ್ದನ್ನೆಲ್ಲಾ ಬಿಜೆಪಿ ನ್ಯಾಯ ಎನ್ನುವುದು ಮಹಾ ಅಪರಾಧ. ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯ ನೂತನ ಕಾಯ್ದೆ ಕುರಿತು ಚರ್ಚೆಗೆ ಕೇಂದ್ರ ಸಚಿವ ಕುಮಾರಸ್ವಾಮಿ ಆಹ್ವಾನಿಸಿದ್ದು, ಚರ್ಚೆಗೆ ನಾವೂ ಸಿದ್ಧವಾಗಿದ್ದು, ದೊಡ್ಡ ಆಂದೋಲನವನ್ನೇ ಮಾಡುತ್ತೇವೆ ಎಂದರು.

ಬಿಜೆಪಿ–ಜೆಡಿಎಸ್‌ನವರು ಕೇವಲ ಸುಳ್ಳು ಹೇಳುತ್ತಾರೆ, ಕರ್ನಾಟಕ ಗಡಿ ಭಾಗದ ಕೇರಳ ಶಾಲೆಗಳಲ್ಲಿ ಮಲಯಾಳಂ ಭಾಷೆ ಕಲಿಕೆ ಕಡ್ಡಾಯಗೊಳಿಸಿರುವ ಬಗ್ಗೆ ಆ ರಾಜ್ಯದ ಮುಖ್ಯಮಂತ್ರಿಗೆ ಪತ್ರ ಬರೆದಿದ್ದು, ಹೋರಾಟ ಮಾಡುತ್ತೇವೆ ಎಂದರು. ದ್ವೇಷ ಭಾಷಣ ತಡೆಗೆ ಸಂಬಂಧಿಸಿದ ಮಸೂದೆ ಕುರಿತು ರಾಜ್ಯಪಾಲರನ್ನು ಭೇಟಿ ಮಾಡಿ ವಿವರಣೆ ನೀಡಲಾಗುವುದು. ಕರ್ನಾಟಕದಲ್ಲಿ ಬಾಂಗ್ಲಾ ವಲಸಿಗರು ಹೆಚ್ಚಾಗಿದ್ದಾರೆ ಎಂಬ ಬಗ್ಗೆ ಹೆಸರುಗಳನ್ನು ನೀಡುವಂತೆ ಮುಖ್ಯಮಂತ್ರಿ ಸವಾಲು ಹಾಕಿದರು.

ವರಸೆ ಬದಲಿಸಿದ ಕೇರಳ

ಕನ್ನಡಿಗರಿಗೆ ಮಲಯಾಳಂ ಕಡ್ಡಾಯ ಅಲ್ಲ

ಬೆಂಗಳೂರು,ಜ.10–ಕೇರಳದ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಮಲಯಾಳಂ ಕಲಿಕೆ ಕಡ್ಡಾಯಕ್ಕೆ ಸಂಬಂಧಿಸಿದಂತೆ ಕೇರಳ ಸರ್ಕಾರ 'ಮಲಯಾಳ ಭಾಷಾ ಮಸೂದೆ 2025'ಗೆ (Kerala Malayalam Bill) ಅನುಮೋದನೆ ನೀಡಿತ್ತು. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್‌ಗೆ ಪತ್ರ ಬರೆದಿದ್ದರು. ಇದೀಗ ಸಿಎಂ ಸಿದ್ದರಾಮಯ್ಯ ಪತ್ರಕ್ಕೆ ಕೇರಳ ಸಿಎಂ ಪಿಣರಾಯಿ ಪ್ರತಿಕ್ರಿಯೆ ನೀಡಿದ್ದು, ಹೊರರಾಜ್ಯ, ವಿದೇಶಿ ವಿದ್ಯಾರ್ಥಿಗಳಿಗೆ ಮಲಯಾಳಂ ಪರೀಕ್ಷೆ ಕಡ್ಡಾಯ ಅಲ್ಲ ಎಂದು ಹೇಳಿದ್ದಾರೆ. 9, 10ನೇ ತರಗತಿ, ಪಿಯುಸಿಗೆ ಮಲಯಾಳಂ ಪರೀಕ್ಷೆ ಕಡ್ಡಾಯಗೊಳಿಸಿಲ್ಲ ಎಂದೂ ತಮ್ಮ ಎಕ್ಸ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ.



ಮಸೂದೆಯಲ್ಲಿ ಭಾಷಾ ಅಲ್ಪಸಂಖ್ಯಾತರ ಹಕ್ಕುಗಳನ್ನು ರಕ್ಷಿಸಲಾಗಿದೆ. ಕನ್ನಡ, ತಮಿಳು ಮಾತನಾಡುವ ಭಾಷಾ ಅಲ್ಪಸಂಖ್ಯಾತರ ಹಕ್ಕು ರಕ್ಷಣೆಗಾಗಿ ಈ ಮಸೂದೆಯನ್ನು ತರಲಾಗಿದೆ. ಹಕ್ಕು ರಕ್ಷಣೆಗೆ ಮಸೂದೆಯ ಸೆಕ್ಷನ್ 7ರಲ್ಲಿ ರಕ್ಷಣಾತ್ಮಕ ನಿಯಮ ಅಳವಡಿಕೆ ಮಾಡಲಾಗಿದೆ. ಸಚಿವಾಲಯ, ಇಲಾಖೆ ಮುಖ್ಯಸ್ಥರ ಜೊತೆ ಪತ್ರ ವ್ಯವಹಾರವನ್ನು ಕೂಡ ತಮ್ಮ ಭಾಷೆಯಲ್ಲೇ ನಡೆಸಬಹುದು ಎಂದು ಹೇಳಿದ್ದಾರೆ. ಕಚೇರಿಗಳಲ್ಲೂ ತಮ್ಮ ಮಾತೃಭಾಷೆಯಲ್ಲೇ ಪತ್ರ ವ್ಯವಹಾರಕ್ಕೆ ಅವಕಾಶ ನೀಡಲಾಗಿದೆ. ಜೊತೆಗೆ ಕೇರಳ ಸಚಿವಾಲಯ ಹಾಗೂ ಕಚೇರಿಗಳು ನಿಮ್ಮ ಭಾಷೆಯಲ್ಲೇ ಉತ್ತರಿಸುತ್ತವೆ ಎಂದು ಹೇಳಿದ್ದಾರೆ.

ರಾಷ್ಟ್ರೀಯ ಶಿಕ್ಷಣ ಪಠ್ಯಕ್ರಮದ ಅನ್ವಯ ಲಭ್ಯವಿರುವ ಭಾಷೆಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಭಾರತೀಯ ಸಂವಿಧಾನದ 346 ಮತ್ತು 347ನೇ ವಿಧಿಗಳು ಹಾಗೂ 1963ರ ಅಧಿಕೃತ ಭಾಷಾ ಕಾಯ್ದೆಗೆ ಈ ಭಾಷಾ ನೀತಿ ಅನುಗುಣವಾಗಿದೆ. ಕೇರಳ ಸರ್ಕಾರ ಒಕ್ಕೂಟ ವ್ಯವಸ್ಥೆಯ ಹಕ್ಕುಗಳನ್ನು ಎತ್ತಿ ಹಿಡಿಯುತ್ತಿದೆ. ಪ್ರತಿಯೊಬ್ಬ ನಾಗರಿಕನ ಭಾಷಾ ಗುರುತನ್ನು ರಕ್ಷಿಸಲು ಕೇರಳ ಸರ್ಕಾರ ಬದ್ಧ ಎಂದು ಹೇಳಿದ್ದಾರೆ.

ಫೆ.1ರ ಭಾನುವಾರವೇ ಕೇಂದ್ರ ಬಜೆಟ್ ಮಂಡನೆ

ಜ.29ಕ್ಕೆ ಆರ್ಥಿಕ ಸಮೀಕ್ಷೆ ಮಂಡನೆ!

ನವದೆಹಲಿ: 2025–26ರ ಕೇಂದ್ರ ಬಜೆಟ್ ಅನ್ನು ಫೆಬ್ರವರಿ 1ರಂದು ಭಾನುವಾರ ಸಂಸತ್ತಿನಲ್ಲಿ ಮಂಡಿಸಲಾಗುವುದು. ಜ.29ರಂದು ಮುಖ್ಯ ಆರ್ಥಿಕ ಸಲಹೆಗಾರ ವಿ.ಅನಂತ ನಾಗೇಶ್ವರನ್ ಆರ್ಥಿಕ ಸಮೀಕ್ಷೆ ಮಂಡಿಸಲಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಮಾಹಿತಿ ಹಂಚಿಕೊಂಡಿದ್ದಾರೆ. ಸಂಸತ್ತಿನ ಬಜೆಟ್ ಅಧಿವೇಶನ ಜ.28ರಂದು ಆರಂಭವಾಗಲಿದ್ದು, ಏ.2ರವರೆಗೆ ಮುಂದುವರಿಯುತ್ತದೆ. ವಾಡಿಕೆಯಂತೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು 28ರಂದು ಲೋಕಸಭಾ ಹಾಗೂ ರಾಜ್ಯಸಭಾ ಸದಸ್ಯರ ಜಂಟಿ ಅಧಿವೇಶನವನ್ನುದ್ದೇಶಿಸಿ ಭಾಷಣ ಮಾಡಲಿದ್ದಾರೆ. ಭಾರತ ಸರ್ಕಾರದ ಶಿಫಾರಸಿನ ಮೇರೆಗೆ ಮುರ್ಮು ಅವರು ಬಜೆಟ್ ಅಧಿವೇಶನಕ್ಕಾಗಿ ಸಂಸತ್ತಿನ ಎರಡೂ ಸದನಗಳನ್ನು ಕರೆಯಲು ಅನುಮೋದನೆ ನೀಡಿದ್ದಾರೆ ಎಂದು ತಿಳಿಸಿದ್ದಾರೆ.

ಅಧಿವೇಶನದ ಮೊದಲ ಹಂತವು ಜ.28ರಿಂದ ಫೆ.13ರವರಗೆ, ಎರಡನೇ ಹಂತ ಮಾ.9ರಿಂದ ಏ.2ರವರೆಗೆ ನಡೆಯಲಿದೆ ಎಂದು ತಿಳಿಸಿದ್ದಾರೆ.

ಮೈಸೂರಲ್ಲಿ ಶೀತ–ಗಾಳಿ ನಡುವೆ ತುಂತುರು ಮಳೆ

ಮೈಸೂರು,ಜ.10(ಪಿಎಂ)– ಮೈಸೂರು ನಗರದ ಬಹುತೇಕ ಭಾಗದಲ್ಲಿ ಶನಿವಾರ ಸಂಜೆ ಕೆಲಕಾಲ ತುಂತುರು ಮಳೆಯಾಗಿದ್ದು, ಶೀತಗಾಳಿ ಹಾಗೂ ಚಳಿಯ ಜೊತೆಗೆ ಸಂಜೆ ವೇಳೆ ಸುರಿದ ಮಳೆ ಮತ್ತಷ್ಟು ತಂಪಾದ ವಾತಾವರಣ ಉಂಟು ಮಾಡಿತು.

ಚುಮು–ಚುಮು ಚಳಿ ನಡುವೆ ಮಳೆಯಾದ ಕಾರಣ ತಂಪಾದ ವಾತಾವರಣ ಸೃಷ್ಟಿಯಾಗಿತ್ತು. ಸಂಜೆ ಸುಮಾರು 6ರ ವೇಳೆಗೆ ತುಂತುರು ಮಳೆಯಾಯಿತು.

ದೇಶದಲ್ಲೇ ಮಹಿಳೆಯರಿಗೆ ಬೆಂಗಳೂರು ಸೇಫ್

●ಅವತಾರ್ ಗ್ರೂಪ್ ನಡೆಸಿದ ಸಮೀಕ್ಷೆಯಲ್ಲಿ ಬೆಂಗಳೂರಿಗೆ 53.29 ಅಂಕ ●ಗೃಹ ಸಚಿವ ಡಾ.ಪರಮೇಶ್ವರ್ ದಿಲ್‌ಖುಷ್





ಬೆಂಗಳೂರು, ಜ.10– ಮಹಿಳೆಯರ ವಾಸಕ್ಕೆ ಬೆಂಗಳೂರು, ದೇಶದಲ್ಲೇ ಅತ್ಯಂತ ಸುರಕ್ಷಿತ ನಗರವಾಗಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೇಳಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಹಿಳೆಯರ ವಾಸಕ್ಕೆ ದೇಶದ ಸುರಕ್ಷಿತ ನಗರಗಳ ಪಟ್ಟಿಯಲ್ಲಿ ಬೆಂಗಳೂರು ನಗರ ಮೊದಲನೇ ಸ್ಥಾನದಲ್ಲಿರುವುದು ನಿಜಕ್ಕೂ ಹೆಮ್ಮೆಯ ವಿಚಾರ ಎಂದು ತಿಳಿಸಿದರು.

ಚೆನ್ನೈ ಮೂಲದ ಅವತಾರ್ ಗ್ರೂಪ್, ನಗರಗಳ ಸುರಕ್ಷತೆ, ತಂತ್ರಜ್ಞಾನ, ಮೂಲಸೌಕರ್ಯ ಸೇರಿದಂತೆ ಕೆಲವು ಮಾನದಂಡಗಳನ್ನು ಇಟ್ಟುಕೊಂಡು ಪ್ರಕಟಿಸಿರುವ 'ಭಾರತದಲ್ಲಿ ಮಹಿಳೆಯರಿಗಾಗಿ ಅತ್ಯುತ್ತಮ ನಗರಗಳು' ಪಟ್ಟಿಯಲ್ಲಿ ಬೆಂಗಳೂರು ನಗರ 53.29 ಅಂಕಗಳನ್ನು ಪಡೆದು ಮೊದಲನೇ ಸ್ಥಾನದಲ್ಲಿದೆ. ಇದಕ್ಕೆ ಕಾರಣಿಭೂತರಾದ ಎಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದರು. ಈ ಬಾರಿಯ ಹೊಸ ವರ್ಷದ ಸಂಭ್ರಮಾಚರಣೆ ವೇಳೆ ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ, ಯಾರಿಗೂ ▶ 6ನೇ ಪುಟಕ್ಕೆ

ಸ್ವಚ್ಛ ಸರ್ವೇಕ್ಷಣೆಯಲ್ಲಿ ಅಗ್ರ ಸ್ಥಾನ ಪಡೆಯಲು


ಮೈಸೂರು ನಗರಪಾಲಿಕೆ ವ್ಯವಸ್ಥಿತ ಯೋಜನೆ

ಫೆ.15ಕ್ಕೆ ಮೈಸೂರಿಗೆ ಕೇಂದ್ರದ ಸ್ವಚ್ಛ ಸರ್ವೇಕ್ಷಣಾ ತಂಡ ಭೇಟಿ

● ಈ ಬಾರಿ ಮೊದಲ ಸ್ಥಾನ ಪಡೆಯಲು ಪಣ ● ಜ.13ರಿಂದ ಸಂಘ ಸಂಸ್ಥೆಗಳ ಪ್ರತಿನಿಧಿಗಳ ಸಭೆ ● ಸ್ವಚ್ಛ ಸರ್ವೇಕ್ಷಣೆ ಮಾರ್ಗಸೂಚಿ ಮನವರಿಕೆ



ಮೈಸೂರು, ಜ.10(ಬಿಎಲ್‌ಯು)–ಕೇಂದ್ರ ಸರ್ಕಾರದ ಈ ಬಾರಿಯ ಸ್ವಚ್ಛ ಸರ್ವೇಕ್ಷಣೆಯಲ್ಲಿ ಶತಾಯ–ಗತಾಯ ದೇಶದಲ್ಲೇ ಅಗ್ರಸ್ಥಾನ ಪಡೆಯಲು ಮೈಸೂರು ನಗರಪಾಲಿಕೆ ವ್ಯವಸ್ಥಿತ ಹಾಗೂ ಪರಿಣಾಮಕಾರಿ ಕಾರ್ಯಕ್ರಮ ರೂಪಿಸಿದೆ.



ಸ್ವಚ್ಛ ಸರ್ವೇಕ್ಷಣೆ ಮೌಲ್ಯಮಾಪನಕ್ಕೆ ಕೇಂದ್ರ ಸರ್ಕಾರ ರಚಿಸಿರುವ ತಂಡ, ಫೆಬ್ರವರಿ 15ರಂದು ಸಾಂಸ್ಕೃತಿಕ ನಗರಿ ಮೈಸೂರಿಗೆ ಆಗಮಿಸಲಿದ್ದು, ಇದಕ್ಕೆ ಎಲ್ಲಾ ತಯಾರಿ ಮಾಡಿಕೊಳ್ಳಲಾಗಿದೆ. ಕೇಂದ್ರ ಸರ್ಕಾರದ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ ಸ್ವಚ್ಛ ಸರ್ವೇಕ್ಷಣೆಯನ್ನು ಆರಂಭಿಸಿದಾಗ 2015–16ರಲ್ಲಿ ಸಾಂಸ್ಕೃತಿಕ ನಗರಿ ಮೈಸೂರು ಇಡೀ ದೇಶದಲ್ಲೇ ಸ್ವಚ್ಛ ನಗರಿಯಾಗಿ ▶ 6ನೇ ಪುಟಕ್ಕೆ

ಪೌರಕಾರ್ಮಿಕರಿಗೆ ಎರಡು ಪಾಳಿಯಲ್ಲಿ ಕೆಲಸ

“ಸ್ವಚ್ಛ ಸರ್ವೇಕ್ಷಣೆಗೆ ಪೌರ ಕಾರ್ಮಿಕರನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಗುವುದು. ಅದಕ್ಕಾಗಿ ಎರಡು ಪಾಳಿಯಲ್ಲಿ ಅವರಿಂದ ಸ್ವಚ್ಛತಾ ಕಾರ್ಯ ಕೈಗೊಳ್ಳಲು ತೀರ್ಮಾನ ಮಾಡಲಾಗಿದೆ. ಮೈಸೂರು ನಗರಪಾಲಿಕೆಯಲ್ಲಿ ಖಾಯಂ ಹಾಗೂ ಹೊರ ಗುತ್ತಿಗೆಯ 1,765 ಪೌರಕಾರ್ಮಿಕರಿದ್ದಾರೆ. ಇವರಲ್ಲಿ ಒಂದು ತಂಡವನ್ನು ಬೆಳಿಗ್ಗೆ 6ರಿಂದ 4 ಗಂಟೆವರೆಗೆ ಹಾಗೂ ಮಧ್ಯಾಹ್ನ 2ರಿಂದ ರಾತ್ರಿವರೆಗೆ ಮತ್ತೊಂದು ತಂಡವನ್ನು ಸ್ವಚ್ಛತೆಗೆ ನಿಯೋಜಿಸಲು ಪಾಲಿಕೆ ಅಧಿಕಾರಿಗಳು ನಿರ್ಧರಿಸಿದ್ದಾರೆ. ಪೌರ ಕಾರ್ಮಿಕರು ಸ್ವಚ್ಛತಾ ಕಾರ್ಯ ಕೈಗೊಳ್ಳುವ ಸಂದರ್ಭದಲ್ಲಿ ಮೇಲ್ವಿಚಾರಣೆಗಾಗಿ ಸೂಪರ್‌ವೈಸರ್‌ಗಳನ್ನು ಕೂಡ ನಿಯೋಜನೆ ಮಾಡಲಾಗುವುದು. ಯಾವ ಯಾವ ರಸ್ತೆಗಳಿಗೆ ಯಾವ ಪೌರಕಾರ್ಮಿಕರು ಎಂಬ ಪಟ್ಟಿಯನ್ನೂ ಈಗಾಗಲೇ ಸಿದ್ಧ ಮಾಡಿಕೊಳ್ಳಲಾಗಿದೆ.

–ಕೆ.ಎಸ್.ಮೃತ್ಯುಂಜಯ, ಎಇಇ ಮತ್ತು ಸ್ವಚ್ಛ ಭಾರತ ಮಿಷನ್ ನೋಡಲ್ ಅಧಿಕಾರಿ

ಇದು ಇಡೀ ವಿಶ್ವದ ದೊಡ್ಡ ಸಮೀಕ್ಷೆ

ದೇಶದಲ್ಲಿ ಸ್ವಚ್ಛತೆಯನ್ನು ಕಾಪಾಡಲು ಕೇಂದ್ರ ಸರ್ಕಾರ ರೂಪಿಸಿರುವ ಸ್ವಚ್ಛ ಸರ್ವೇಕ್ಷಣೆ ಅಭಿಯಾನ ಇಡೀ ವಿಶ್ವದಲ್ಲೇ ದೊಡ್ಡ ಸಮೀಕ್ಷೆಯಾಗಿದೆ. ಸ್ವಚ್ಛತೆ ಕಾಪಾಡಲು ನಗರಗಳ ನಡುವೆ ಆರೋಗ್ಯಕರ ಸ್ಪರ್ಧೆಯನ್ನು ಉತ್ತೇಜಿಸಲು ಈ ಅಭಿಯಾನ ಹಮ್ಮಿಕೊಳ್ಳಲಾಗಿದೆ.

ರಸ್ತೆಗಳ ಸ್ವಚ್ಛತೆ, ಮನೆ ಮನೆ ಕಸ ಸಂಗ್ರಹಣೆ, ಕಸ ವಿಲೇವಾರಿ, ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ಘಟಕಗಳು, ಕುಡಿಯುವ ನೀರಿನ ಗುಣಮಟ್ಟ ಸೇರಿದಂತೆ ಇತರೆ ವಿಚಾರಗಳ ಡೇಟಾ ಸಂಗ್ರಹಿಸಿ ಮೌಲ್ಯಮಾಪನ ಮಾಡಲಾಗುತ್ತದೆ. ಈ ಮೂಲಕ ಇಡೀ ಭಾರತ ದೇಶವನ್ನು ಸ್ವಚ್ಛ ಹಾಗೂ ಬಯಲು ಶೌಚ ಮುಕ್ತ ನಗರವಾಗಿಸುವ ಗುರಿ ಹೊಂದಲಾಗಿದೆ.

ಜನಸಂಖ್ಯೆಗೆ ಅನುಗುಣವಾಗಿ ನಗರಗಳನ್ನು ವರ್ಗೀಕರಿಸಿ ರ್‍ಯಾಂಕಿಂಗ್ ನೀಡಲಾಗುತ್ತದೆ. ಇಂತಹ ಮಹತ್ವದ ಸ್ವಚ್ಛ ಸರ್ವೇಕ್ಷಣೆ ಅಭಿಯಾನದಲ್ಲಿ ಮೈಸೂರು ಎರಡು ಬಾರಿ ಪ್ರಥಮ ಸ್ಥಾನ ಪಡೆದಿದೆ.

ಈ ಬಾರಿ ಮತ್ತೆ ಮೈಸೂರಿನ ಮುಕುಟಕ್ಕೆ ಸ್ವಚ್ಛ ಸರ್ವೇಕ್ಷಣೆಯ ಅಗ್ರ ಸ್ಥಾನದ ಗರಿ ಮುಡಿಸಿಕೊಳ್ಳಲು ಪಾಲಿಕೆ ವ್ಯವಸ್ಥಿತ ಯೋಜನೆ ರೂಪಿಸಿದೆ. ಇದು ಪಾಲಿಕೆಯ ಜವಾಬ್ದಾರಿ ಮಾತ್ರವಾಗದೆ ನಗರದ ಎಲ್ಲಾ ಜನರ ಹೊಣೆ ಎಂದು ಅರಿತು ಸ್ವಚ್ಛತೆ ಕಾಪಾಡಬೇಕಿದೆ.

ಇಲವಾಲ ಬಳಿ ಮೆಗಾ ಸಿಲ್ಕ್ ಕ್ಲಸ್ಟರ್

10 ಎಕರೆಯಲ್ಲಿ 49.19 ಕೋಟಿ ವೆಚ್ಚದಲ್ಲಿ ಯೋಜನೆ ಅನುಷ್ಠಾನ; ಫೆಬ್ರವರಿ ತಿಂಗಳಲ್ಲಿ ಟೆಂಡರ್ ಪ್ರಕ್ರಿಯೆ

ಮೈಸೂರು, ಜ.10 (ಆರ್‌ಕೆ)– ಮೈಸೂರು ಹೊರ ವಲಯದ ಇಲವಾಲ ಬಳಿ ಬಹುನಿರೀಕ್ಷಿತ ಮೆಗಾ ಸಿಲ್ಕ್ ಕ್ಲಸ್ಟರ್ ಯೋಜನೆ ಜಾರಿಯಾಗಲಿದೆ.

ಕೇಂದ್ರ ಪುರಸ್ಕೃತ ಮೈಸೂರು ಚಾಮುಂಡೇಶ್ವರಿ ಮೆಗಾ ಸಿಲ್ಕ್ ಕ್ಲಸ್ಟರ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ (MCMSCPL) ಯೋಜನೆಯನ್ನು ರಾಜ್ಯ ಸರ್ಕಾರದ ಜವಳಿ ಇಲಾಖೆ ಅನುಷ್ಠಾನ ಗೊಳಿಸುತ್ತಿದೆ. ಕೇಂದ್ರದ ಜವಳಿ ಸಚಿವಾಲಯವು 29.5 ಕೋಟಿ ರೂ. ನೀಡಿದ್ದು, ರಾಜ್ಯ ಸರ್ಕಾರವು ತನ್ನ ಪಾಲು 10.5 ಕೋಟಿ ರೂ. ನೀಡುತ್ತಿದೆ. ಉಳಿದ 10.5 ಕೋಟಿ ರೂ.ಗಳನ್ನು ಸ್ಪೆಷಲ್ ಪರ್ಪಸ್ ವೆಹಿಕಲ್ (SPV) ನ 24 ಸದಸ್ಯರು ಷೇರು ಬಂಡವಾಳವಾಗಿ ತೊಡಗಿಸಲಿದ್ದಾರೆ.

ಈ ಹಿಂದೆ 2017ರಲ್ಲಿ ಸಂಸದರಾಗಿದ್ದ ಪ್ರತಾಪ್‌ಸಿಂಹ ಅವಧಿಯಲ್ಲಿ ಈ ಸಿಲ್ಕ್ ಕ್ಲಸ್ಟರ್ ಯೋಜನೆಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಯೋಜನೆಯನ್ನು ಕರ್ನಾಟಕ ರಾಜ್ಯ ಜವಳಿ ಮೂಲ ಸೌಕರ್ಯ ಮತ್ತು ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸುತ್ತಿದ್ದು, ಮೈಸೂರು ತಾಲೂಕು, ಇಲವಾಲ ಹೋಬಳಿ, ಹುಯಿಲಾಳು ಮತ್ತು ಬೊಮ್ಮೇನಹಳ್ಳಿ ನಡುವಿನ 10.12 ಎಕರೆ ಭೂಮಿಯನ್ನು



ಸರ್ಕಾರವು ಜಿಲ್ಲಾಧಿಕಾರಿಗಳ ಮೂಲಕ ಕಲ್ಪಿಸಿದೆ. ಅದರಲ್ಲಿ 24 ಮಂದಿ ಸ್ಪೆಷಲ್ ಪರ್ಪಸ್ ವೆಹಿಕಲ್ ಸದಸ್ಯರಿಗೆ ತಲಾ 4500 ಚದರಡಿಯಲ್ಲಿ ಶೆಡ್‌ಗಳನ್ನು ನಿರ್ಮಿಸಿ 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿದೆ. ಅಲ್ಲದೇ 18 ಸಾವಿರ ಚದರಡಿ ವಿಸ್ತೀರ್ಣದಲ್ಲಿ ಕಾಮನ್ ಫೆಸಿಲಿಟಿ ಸೆಂಟರ್ (CFC) ನಿರ್ಮಿಸಲಾಗುವುದು.

ಈ ಸೆಂಟರ್‌ನಲ್ಲಿ ರೇಷ್ಮೆ ನೇಯ್ಗೆದಾರರಿಗೆ ಅಗತ್ಯವಿರುವ ಎಲ್ಲಾ ಸೌಕರ್ಯಗಳನ್ನು ಒದಗಿಸಲಾಗುವುದು. ಅದನ್ನು ಬಳಸಿಕೊಂಡು ರೇಷ್ಮೆ ಉತ್ಪಾದನೆ ಮಾಡಿ, ಮಾರುಕಟ್ಟೆ ಸಿದ್ಧಿಸಿಕೊಂಡು, ಅದರಲ್ಲಿ ಬರುವ ಲಾಭದಲ್ಲಿ ಷೇರು ಬಂಡವಾಳಕ್ಕೆ ತೊಡಗಿಸಲು, ಬ್ಯಾಂಕ್‌ನಿಂದ ಪಡೆದಿರುವ ಸಾಲ ತೀರಿಸಲು ಅವಕಾಶ ಕಲ್ಪಿಸಿಕೊಡಲಾಗಿದೆ. ಭೋಗ್ಯಕ್ಕೆ ಪಡೆದಿರುವ ಭೂಮಿಯು ವಸತಿ ವಲಯಕ್ಕೆ ಸೇರಿದ್ದರಿಂದ ಅದನ್ನು ಸರ್ಕಾರದಿಂದ ಕೈಗಾರಿಕಾ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ (Change of Land Use) ಮಾಡಿಸಿ, ಎಸ್‌ಪಿವಿ ಸದಸ್ಯರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಪ್ರಸ್ತುತ ಮೈಸೂರು ಅಭಿವೃದ್ಧಿ ಪ್ರಾಧಿಕಾರ) ದಿಂದ ನಕ್ಷೆ ಅನುಮೋದನೆಯನ್ನು ಪಡೆದಿದ್ದಾರೆ.

ಈ ಯೋಜನೆ ಅನುಷ್ಠಾನಕ್ಕೆ ಮುಂದಿನ ತಿಂಗಳು ಗ್ಲೋಬಲ್ ಟೆಂಡರ್ ಕರೆಯಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದು ಎಸ್‌ಪಿವಿ ಸದಸ್ಯರಲ್ಲೊಬ್ಬರಾದ ಗುರುಸಿದ್ದಯ್ಯ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಇವಿ ಚಾರ್ಜಿಂಗ್ ಸ್ಟೇಷನ್‌ಗಳಲ್ಲಿ ಸೆಸ್ಕ್‌ಗೆ ರಾಜ್ಯದಲ್ಲೇ 2ನೇ ಸ್ಥಾನ

ಮೈಸೂರು, ಜ. 10 (ಆರ್‌ಕೆ)–ಎಲೆಕ್ಟ್ರಿಕ್ ವಾಹನ (ಇವಿ)ಗಳಿಗೆ ಚಾರ್ಜ್ ಮಾಡುವ ಸ್ಟೇಷನ್‌ಗಳ ಸಂಖ್ಯೆಯಲ್ಲಿ ಮೈಸೂರಿನ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್)ವು ಕರ್ನಾಟಕ ರಾಜ್ಯದಲ್ಲಿ 2ನೇ ಸ್ಥಾನದಲ್ಲಿದೆ.

ಬೆಂಗಳೂರು ವಿದ್ಯುತ್ ಸರಬರಾಜು ನಿಗಮ ನಿಯಮಿತ (ಬೆಸ್ಕಾಂ) ಇವಿ ಚಾರ್ಜಿಂಗ್ ಸ್ಟೇಷನ್‌ಗಳ ಸಂಖ್ಯೆಯಲ್ಲಿ ಮೊದಲನೇ ಸ್ಥಾನದಲ್ಲಿದೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ, ಕೋಲಾರ, ತುಮಕೂರು, ಚಿತ್ರದುರ್ಗ, ಚಿಕ್ಕಬಳ್ಳಾಪುರ ಹಾಗೂ ದಾವಣಗೆರೆ ಜಿಲ್ಲೆಗಳನ್ನೊಳಗೊಂಡ ಬೆಸ್ಕಾಂ ವ್ಯಾಪ್ತಿಯಲ್ಲಿ ಒಟ್ಟು 2,900 ಇವಿ ಚಾರ್ಜಿಂಗ್ ಸ್ಟೇಷನ್‌ಗಳನ್ನು ಅಳವಡಿಸಲಾಗಿದ್ದು, ರಾಜ್ಯದಲ್ಲಿ ಅತೀ ಹೆಚ್ಚು ಸಂಖ್ಯೆಯ ಚಾರ್ಜಿಂಗ್ ಸ್ಟೇಷನ್‌ಗಳನ್ನೊಳಗೊಂಡು ಪ್ರಥಮ ಸ್ಥಾನದಲ್ಲಿದೆ.

ಸೆಸ್ಕ್ ವ್ಯಾಪ್ತಿಯಲ್ಲಿ ಮೈಸೂರು, ಚಾಮರಾಜನಗರ, ಕೊಡಗು, ಹಾಸನ ಹಾಗೂ ಮಂಡ್ಯ ಜಿಲ್ಲೆಗಳು ಬರಲಿದ್ದು ಒಟ್ಟು ಈವರೆಗೆ 400 ಎಲೆಕ್ಟ್ರಿಕ್ ವಾಹನಗಳ ಚಾರ್ಜಿಂಗ್ ಸ್ಟೇಷನ್‌ಗಳು ಕಾರ್ಯ ನಿರ್ವಹಿಸುತ್ತಿವೆ. ಮೈಸೂರಿನ ವಿಜಯನಗರ ಎರಡನೇ ಹಂತದಲ್ಲಿರುವ ನಿಗಮದ ಕಾರ್ಪೊರೇಟ್ ಕಚೇರಿ ಆವರಣದಲ್ಲಿ ಹಾಗೂ ಕುವೆಂಪುನಗರದ ಸೆಸ್ಕ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಕಚೇರಿ ಆವರಣದಲ್ಲಿ ಮಾತ್ರ ನಮ್ಮ ನಿಗಮದಿಂದ ಇವಿ ಚಾರ್ಜಿಂಗ್ ಸ್ಟೇಷನ್‌ಗಳನ್ನು ಅಳವಡಿಸಿದ್ದು ಉಳಿದ ಸ್ಟೇಷನ್‌ಗಳನ್ನು ಖಾಸಗಿಯವರು ಅಳವಡಿಸಿ ನಿರ್ವಹಿಸುತ್ತಿದ್ದಾರೆ ಎಂದು ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲರಾಜು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ರಾಜ್ಯದಲ್ಲಿ ಬೆಂಗಳೂರು ಅತಿ ಹೆಚ್ಚು ಚಾರ್ಜಿಂಗ್ ಸ್ಟೇಷನ್ ಹೊಂದಿರುವ ಬೆಸ್ಕಾಂ ಆಗಿದ್ದು, ಮೈಸೂರಿನ ಸೆಸ್ಕ್ 400 ಸ್ಟೇಷನ್‌ಗಳೊಂದಿಗೆ ರಾಜ್ಯದಲ್ಲಿ 2ನೇ ಸ್ಥಾನದಲ್ಲಿದೆ. ಮಾಲ್‌ಗಳು,



ಇವಿ ಬಸ್‌ಗೆ ಸೆಸ್ಕ್‌ನಿಂದ ಚಾರ್ಜಿಂಗ್ ಮಾಡುತ್ತಿರುವುದು.

ಪೆಟ್ರೋಲ್ ಬಂಕ್‌ಗಳು, ಹೈವೇ ಹೋಟೆಲ್–ರೆಸ್ಟೋರೆಂಟ್‌ಗಳಲ್ಲಿ ಖಾಸಗಿ ವ್ಯಕ್ತಿಗಳು ಸೆಸ್ಕ್‌ನಿಂದ ಅನುಮತಿ ಪಡೆದು ಇವಿ ಚಾರ್ಜಿಂಗ್ ಸ್ಟೇಷನ್‌ಗಳನ್ನು ಅಳವಡಿಸಿಕೊಂಡು ಕಾರ್ಯ ನಿರ್ವಹಿಸುತ್ತಿವೆ ಎಂದೂ ತಿಳಿಸಿದರು.

ಖಾಸಗಿಯವರು ಜಾಗ ಹೊಂದಿದ್ದರೆ ಅವರಿಗೆ ಇವಿ ಸ್ಟೇಷನ್ ಸ್ಥಾಪಿಸಲು ಅನುಮತಿ ಕೊಡುತ್ತೇವೆ. ಅವರಿಂದ ಪ್ರತಿ ಯೂನಿಟ್ ವಿದ್ಯುತ್‌ಗೆ 5 ರೂ. ಶುಲ್ಕ ಪಡೆಯುತ್ತೇವೆ. ಇತ್ತೀಚೆಗೆ ಎಲೆಕ್ಟ್ರಿಕ್ ದ್ವಿಚಕ್ರ ವಾಹನ, ಕಾರು, ಆಟೋ, ಮಿನಿ ಬಸ್ ಹಾಗೂ ಬಸ್‌ಗಳು ಹೆಚ್ಚಿನ ಸಂಖ್ಯೆಯಲ್ಲಿ ರಸ್ತೆಗಿಳಿಯುತ್ತಿವೆ. ಹಾಗಾಗಿ ಇವಿ ಚಾರ್ಜಿಂಗ್ ಸ್ಟೇಷನ್‌ಗಳಿಗೆ ಬೇಡಿಕೆ ಹೆಚ್ಚಾಗಿದೆ ಎಂದು ತಿಳಿಸಿದರು.

ಯಾಚೇನಹಳ್ಳಿಯಲ್ಲಿ 'ಅವಧೂತ ಮಾದಪ್ಪ', 'ದಿ ಕಾಪಿ' ಕೃತಿ ನಾಳೆ ಲೋಕಾರ್ಪಣೆ

ಮೈಸೂರು, ಜ.10(ಜಿಎ)–ಮಂಡ್ಯದ ಎಂಆರ್‌ಎ ಪ್ರಕಾಶನದ ಪ್ರಥಮ ವಾರ್ಷಿಕೋತ್ಸವ, 'ಅವಧೂತ ಮಾದಪ್ಪ' ಮತ್ತು 'ದಿ ಕಾಪಿ' ಕೃತಿ ಲೋಕಾರ್ಪಣೆ ಹಾಗೂ ಎಂ.ಆರ್‌ಎಂಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಟಿ. ನರಸೀಪುರ ತಾಲೂಕಿನ ಯಾಚೇನಹಳ್ಳಿಯಲ್ಲಿರುವ ಶ್ರೀರಾಮಕೃಷ್ಣ ಸೇವಾ ಕೇಂದ್ರ ಪ್ರೌಢಶಾಲೆಯ ವಿಶ್ವ ಮಾನವ ವೇದಿಕೆಯಲ್ಲಿ ಜ.12ರಂದು ಏರ್ಪಡಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಪ್ರಕಾಶಕ ಚಂದ್ರಶೇಖರ ದ.ಕೋ.ಹಳ್ಳಿ ಈ ವಿಷಯ ತಿಳಿಸಿ, ಅಂದು ಮಧ್ಯಾಹ್ನ 2 ಗಂಟೆಗೆ ಯಾಚೇನಹಳ್ಳಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ವೈ.ಎನ್. ಶಂಕರೇಗೌಡ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ದಿವ್ಯ ಸಾನ್ನಿಧ್ಯವನ್ನು ಶ್ರೀರಾಮಕೃಷ್ಣ ಸೇವಾ ಕೇಂದ್ರದ ಅಧ್ಯಕ್ಷ ನಾದಾನಂದನಾಥ ಸ್ವಾಮಿ ವಹಿಸಲಿದ್ದಾರೆ. ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಪೀಠಾಧಿಪತಿಗಳಾದ ಶ್ರೀ ಡಾ.ನಿಶ್ಚಲಾನಂದನಾಥ ಸ್ವಾಮೀಜಿ 'ಅವಧೂತ ಮಾದಪ್ಪ' ಮತ್ತು 'ದಿ ಕಾಪಿ' ಕೃತಿ ಬಿಡುಗಡೆ ಮಾಡಲಿದ್ದಾರೆ. ಅಧ್ಯಕ್ಷತೆಯನ್ನು ಎಂ.ಆರ್.ಎ ಪ್ರಕಾಶಕರಾದ ಮಂಜುಮುತ್ತೇಗೆರೆ ವಹಿಸಲಿದ್ದಾರೆ ಎಂದರು.

'ದಿ ಕಾಪಿ' ಕೃತಿ ಕುರಿತು ಮಂಡ್ಯ ವಿವಿ ಉಪನ್ಯಾಸಕರಾದ ಉಮೇಶ್ ದಡಮಹಳ್ಳಿ ಮಾತನಾಡುವರು. ಕಾರ್ಯಕ್ರಮದಲ್ಲಿ ಕೆ.ಪಿ. ಮೃತ್ಯಂಜಯ, ಗಣೇಶ್ ಅಮೀನಗಡ ಅವರಿಗೆ ಎಂಆರ್‌ಎಂ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಈ ವೇಳೆ ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಚನ್ನಾಜಮ್ಮ ಅವರನ್ನು ಅಭಿನಂದಿಸಲಾಗುವುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ರುದ್ರಗೌಡ ಮುರಾಳ, ಉಮೇಶ್ ದಡಮಹಳ್ಳಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಉಚಿತ ಆರೋಗ್ಯ ತಪಾಸಣಾ ಶಿಬಿರ


ಮೈಸೂರು,ಜ.10–ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ವೀರಶೈವ ಸಜ್ಜನ ಸಂಘದ ಸಂಯುಕ್ತಾಶ್ರಯದಲ್ಲಿ ಜ.13ರಂದು ಬೆಳಗ್ಗೆ 9.30 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಮಂಡಿ ಮೊಹಲ್ಲಾ, ಕಬೀರ್ ರಸ್ತೆ, ಮಂಡಿ ಪೊಲೀಸ್ ಸ್ಟೇಷನ್ ಹತ್ತಿರವಿರುವ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಹೆಚ್.ಎಸ್. ಬಸವರಾಜ್, ಮೊ. 94487 53597, ಎಂ.ಎನ್.ಜೈಪ್ರಕಾಶ್, ಮೊ. 99161 55453, 94487 38657 ಸಂಪರ್ಕಿಸಿ.


ಕಾಸರಗೋಡು ಶಾಲೆಗಳಲ್ಲಿ ಮಲೆಯಾಳಂ ಕಡ್ಡಾಯಗೊಳಿಸಿರುವುದಕ್ಕೆ ಖಂಡನೆ

ಮೈಸೂರು, ಜ.10(ಜಿಎ)–ಕೇರಳದಲ್ಲಿ ಆಡಳಿತ ನಡೆಸುತ್ತಿರುವ ಕಮ್ಯುನಿಸ್ಟ್ ಸರ್ಕಾರ ಕಾಸರಗೋಡು ಕನ್ನಡ ಶಾಲೆಗಳು ಹಾಗೂ ಕಾಲೇಜುಗಳಲ್ಲಿ ಮಲೆಯಾಳಂ ಕಡ್ಡಾಯಗೊಳಿಸಿರುವುದು ಖಂಡನೀಯವಾಗಿದೆ ಎಂದು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ವಕ್ತಾರ ಎಸ್. ರಾಜೇಶ್ ಕಿಡಿಕಾರಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಸರಗೋಡು ಜಿಲ್ಲೆಯ 180 ಶಾಲಾ–ಕಾಲೇಜುಗಳಲ್ಲಿ ಸುಮಾರು 80 ಸಾವಿರ ಕನ್ನಡ ಭಾಷಿಗ ವಿದ್ಯಾರ್ಥಿಗಳಿದ್ದಾರೆ. ಹೀಗಾಗಿ ಇವರ ಹಿತ ಕಾಪಾಡುವುದು ರಾಷ್ಟ್ರಪತಿಗಳ ಕರ್ತವ್ಯವಾಗಿದೆ. ಅಲ್ಲಿನ ಸರ್ಕಾರದ ಕನ್ನಡ ಭಾಷಾ ವಿರೋಧಿ ನೀತಿ ಸಂವಿಧಾನ ವಿರೋಧಿಯಾಗಿದೆ. ರಾಷ್ಟ್ರಪತಿಗಳು ಕೂಡಲೇ ಮಧ್ಯಪ್ರವೇಶಿಸಿ ಅಲ್ಲಿನ ಸಮಸ್ಯೆ ಬಗೆಹರಿಸಬೇಕೆಂದು ಆಗ್ರಹಿಸಿದರು. ಗೋಷ್ಠಿಯಲ್ಲಿ ಮೈಸೂರು ಬಸವಣ್ಣ, ಸಯ್ಯದ್ ಫಾರೂಕ್, ನಂಜುಂಡಸ್ವಾಮಿ ಇದ್ದರು.


ನಾಳೆ ವಿಶೇಷ ಸ್ವಾತಿ ಪೂಜೆ





ಮೈಸೂರು,ಜ.10–ನಗರದ ಕಾಳಿದಾಸ ರಸ್ತೆಯಲ್ಲಿರುವ ಇತಿಹಾಸ ಪ್ರಸಿದ್ಧ ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಜ.12ರಂದು ಸೋಮವಾರ 'ಸ್ವಾತಿ' ನಕ್ಷತ್ರದ ಪ್ರಯುಕ್ತ ವಿಶೇಷ ಪೂಜೆ ಆಯೋಜಿಸಲಾಗಿದೆ. ಅಂದು ಬೆಳಿಗ್ಗೆ 9ರಿಂದ ಸಂಕಲ್ಪದೊಂದಿಗೆ ಪ್ರಾರಂಭವಾಗಿ ಮಧ್ಯಾಹ್ನ 1.30ಕ್ಕೆ ಮಹಾಮಂಗಳಾರತಿ, ತೀರ್ಥ ಪ್ರಸಾದ ಏರ್ಪಡಿಸಲಾಗಿದೆ. ಸಂಜೆ ಧನುರ್ಮಾಸದ ಪ್ರಯುಕ್ತ ಪ್ರಾಕಾರೋತ್ಸವ ಇರುವುದಿಲ್ಲ ಎಂದು ದೇವಸ್ಥಾನದ ಮುಖ್ಯಸ್ಥ ವಿದ್ವಾನ್ ಕೆ.ಆರ್.ಯೋಗಾನರಸಿಂಹನ್ (ಮುರುಳಿ ಅಯ್ಯಂಗಾರ್) ತಿಳಿಸಿದ್ದಾರೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಕೋರಿದ್ದಾರೆ. ಮಾಹಿತಿಗೆ ಮೊ.9342188323, 75988 32271 ಸಂಪರ್ಕಿಸಬಹುದು.

ಮೂತ್ರ ಪಿಂಡ ಕಸಿ ಚಿಕಿತ್ಸೆ...



ಮೈಸೂರಿನ ಸಿಗ್ಮಾ ಆಸ್ಪತ್ರೆಯಲ್ಲಿ 88ನೇ ಮೂತ್ರ ಪಿಂಡ ಕಸಿ ಚಿಕಿತ್ಸೆ ಯಶಸ್ವಿಯಾಗಿ ನಡೆದ ಸಂದರ್ಭದಲ್ಲಿ ಆಸ್ಪತ್ರೆಯ ಮ್ಯಾನೇಜಿಂಗ್ ಡೈರೆಕ್ಟರ್ ಜ್ಞಾನಶಂಕರ್ ಹಾಗೂ ವೈದ್ಯ ವೃಂದ ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

ಮೈಸೂರು ನಶೆ ಮುಕ್ತಗೊಳಿಸಲು ಆಗ್ರಹಿಸಿ ನಾಳೆ ಧರಣಿ

ಮೈಸೂರು, ಜ.10(ಜಿಎ)–ಮೈಸೂರು ನಗರವನ್ನು ನಶೆ ಮುಕ್ತಗೊಳಿಸುವ ನಿಟ್ಟಿನಲ್ಲಿ ಜ.12ರಂದು ಬೆಳಗ್ಗೆ 10 ರಿಂದ ಸಂಜೆ 5 ರವರೆಗೆ ನಗರದ ಅಗ್ರಹಾರ ವೃತ್ತದಲ್ಲಿ ಕನ್ನಡಪರ ಸಂಘಟನೆಗಳ ಆಶ್ರಯದಲ್ಲಿ ಒಂದು ದಿನದ ಧರಣಿ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕನ್ನಡ ಕ್ರಾಂತಿ ಸಂಘದ ಅಧ್ಯಕ್ಷ ತೇಜಸ್ವಿ ನಾಗಲಿಂಗ ಸ್ವಾಮಿ ಈ ವಿಷಯ ತಿಳಿಸಿ, ಈ ಕಾರ್ಯಕ್ರಮವು ಮಾದಕ ದ್ರವ್ಯ ಬಳಕೆ ಬೇರು ಸಮೇತ ಕಿತ್ತುಹಾಕಬೇಕು, ಮಾದಕ ವಸ್ತು ಉತ್ಪಾದಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು, ಮಾದಕ ವಸ್ತು ದುರುಪಯೋಗದ ದುಷ್ಪರಿಣಾಮ ಬಗ್ಗೆ ಜಾಗೃತಿ ಮೂಡಿಸುವ ವ್ಯಸನಮುಕ್ತ ಜೀವನ ನಡೆಸಲು ಯುವಜನರನ್ನು ಪ್ರೇರೇಪಿಸುವ ಉದ್ದೇಶ ಹೊಂದಿದೆ ಎಂದರು.

ಈ ವೇಳೆ ಮಾದಕ ವಸ್ತುಗಳ ಬಳಕೆ ವಿರುದ್ಧ ವಿವಿಧ ಭಿತ್ತಿಚಿತ್ರ ಪ್ರದರ್ಶನ, ಜಾಗೃತಿ ಮಾತುಕತೆಗಳು, ಕ್ಷೇತ್ರದ ತಜ್ಞರೊಂದಿಗೆ ಸಂವಾದ ಇರಲಿವೆ. ಮುಂದಿನ ದಿನಗಳಲ್ಲಿ ಮೈಸೂರು ನಗರದ ಎಲ್ಲಾ ಪ್ರದೇಶಗಳಲ್ಲಿಯೂ ಜಾಗೃತಿ ಸಮಾವೇಶ ಆಯೋಜಿಸಲಾಗುವುದು. ಇದಕ್ಕೆ ಪೊಲೀಸ್ ಇಲಾಖೆ ನಮ್ಮೊಡನೆ ಕೈಜೋಡಿಸಬೇಕು ಎಂದರು. ಗೋಷ್ಠಿಯಲ್ಲಿ ಸುಶೀಲ, ಮಹೇಶ್, ಕಮಲ ನಟರಾಜ್, ಎಂ.ಪುಟ್ಟರಾಜು, ಲಿಂಗರಾಜು ಉಪಸ್ಥಿತರಿದ್ದರು.


ನಿಧನ

ಸೈಫುಲ್ಲಾ ಷರೀಫ್



ಮೈಸೂರು, ಜ. 10–ಮೈಸೂರಿನ ಉದಯಗಿರಿ 2ನೇ ಹಂತದ ನಿವಾಸಿ ಹಾಗೂ ನಿವೃತ್ತ ರೈಲ್ವೆ ಇಲಾಖೆ ನೌಕರ ಸೈಫುಲ್ಲಾ ಷರೀಫ್ (64) ಶನಿವಾರ ಬೆಳಗ್ಗೆ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ, ಪುತ್ರ, ಪುತ್ರಿ, 3 ಜನ ಸಹೋದರರು, ಒಬ್ಬರು ಸಹೋದರಿ ಮತ್ತು ಅಪಾರ ಬಂಧುಗಳು, ಸ್ನೇಹಿತರು ಹಾಗೂ ಹಿತೈಷಿಗಳನ್ನು ಅಗಲಿದ್ದಾರೆ. ಈ ಸಂಬಂಧ ಸಂಜೆ 5 ಗಂಟೆಗೆ ಅಸರ್ ಸಲಾತ್ ನಂತರ ಈದಿಗಾ ಮಸೀದಿ ಆಜ಼ಮ್ ಮರ್ಕಾಜ್ ಅಹಲೆ ಸುನ್ನತ್–ವಲ್–ಜಮಾತ್‌ನಲ್ಲಿ ನಮಾಜ್–ಎ–ಜನಾಜಾ ನೆರವೇರಿತು. ನಂತರ ಮೈಸೂರಿನ ಟಿಪ್ಪು ಸರ್ಕಲ್ ಬಳಿ ಇರುವ ಮುಸ್ಲಿಮರ ರುದ್ರಭೂಮಿ ಗೇಟ್ ನಂ.5 ರಲ್ಲಿ ಮೃತರ ಅಂತ್ಯ ಸಂಸ್ಕಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಲೀಲಾ



ಮೈಸೂರಿನ ಶ್ರೀರಾಂಪುರದ ಮಧುವನ ಬಡಾವಣೆಯ ನಿವಾಸಿ ನಿವೃತ್ತ ಆರೋಗ್ಯ ನಿರೀಕ್ಷಕ ದಿವಂಗತ ಎಂ.ಬಿ. ಕೃಷ್ಣಪ್ಪನವರ ಪತ್ನಿ, ನಿವೃತ್ತ ಶಿಕ್ಷಕಿ ಲೀಲಾ(88)ಶನಿವಾರ ಬೆಳಿಗ್ಗೆ ನಿಧನರಾದರು. ಮೃತರು ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಬೆಳಿಗ್ಗೆ 10 ಗಂಟೆಗೆ ಕೆ.ಆರ್.ಪೇಟೆ ತಾಲೂಕಿನ ಸಿಂಧಘಟ್ಟ ಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

11.1.2026 ಭಾನುವಾರ, ಮಳೆ ನಕ್ಷತ್ರ: ಉಷಾ, 11.01.2026 ರಿಂದ 23.01.2026 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಚಿತ್ತ, ರಾಹುಕಾಲ: ಸಂಜೆ 4.30 ರಿಂದ 6 ರವರೆಗೆ

- **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಬೆಳಗ್ಗೆಯಿಂದ ಧನುರ್ಮಾಸದ ವಿಶೇಷ ಪೂಜಾ, ಲಕ್ಷಾರ್ಚನಾ, ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಭಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ, ರಾಘವೇಂದ್ರನಗರ.
- **ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮ :** ಸಿಲ್ಕ್ ಫ್ಯಾಬ್, ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ಹೆಬ್ಬಾಳು ರಿಂಗ್ ರಸ್ತೆ, ಬೆಳಗ್ಗೆ 11 ರಿಂದ.
- **ಸಾಧನ ಮಂದಿರ, ಮೈಸೂರು :** ವಿಶೇಷ ತರಬೇತಿ ಶಿಬಿರ ಹಾಗೂ ಸರಸ್ವತಿ ಪೂಜೆ, ಸಾನ್ನಿಧ್ಯ: ಪೂಜ್ಯ ಸ್ವಾಮಿ ಹಂಸಾನಂದ, ಸಂಜೆ 4 ರಿಂದ ಶ್ರೀ ವೆಂಕಟೇಶ್ವರ ದೇವಸ್ಥಾನ, ಸಿದ್ಧಾರ್ಥನಗರ; ಸಂಜೆ 5.15 ರಿಂದ ಬಲಮುರಿ ವಿನಾಯಕ ದೇವಸ್ಥಾನ, ಸಿದ್ಧಾರ್ಥ ಬಡಾವಣೆ, ಸಂಜೆ 6.30 ರಿಂದ ಗೀತಾ ಶಿಶು ಶಿಕ್ಷಣ ಸಂಘ, ಸಿದ್ಧಾರ್ಥ ಬಡಾವಣೆ.
- **ಶ್ರೀ ಚಾಮುಂಡೇಶ್ವರಿ ದೇವಸ್ಥಾನ, ಚಾಮುಂಡಿಬೆಟ್ಟ :** ಶ್ರೀಚಾಮುಂಡೇಶ್ವರಿ ಅಮ್ಮನವರ ಕೊಠಾರೋತ್ಸವ ವೈಭವ, ವಿದುಷಿ ಡಾ. ವೀಣಾ ರವಿಕುಮಾರ್ ಮತ್ತು ತಂಡದವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯನ, ಸ್ಥಳ: ಚಾಮುಂಡಿಬೆಟ್ಟದ ದೇವಸ್ಥಾನದ ಒಳಗೆ, ಸಂಜೆ 6 ರಿಂದ.
- **ಶ್ರೀ ಮಹಾಜನ ಸಭಾ ಟ್ರಸ್ಟ್:** ತಿರುಪ್ಪಾವೈ ಪಾರಾಯಣ, ಆಧ್ಯಾತ್ಮಿಕ ಪ್ರವಚನಕಾರರಾದ ಡಾ.ಎನ್.ಕೆ. ರಾಮಶೇಷನ್ ಅವರಿಂದ ಶ್ರೀ ಗೋದಾವರಿ ವಿರಚಿತ ತಿರುಪ್ಪಾವೈ ಪ್ರವಚನ, ಸ್ಥಳ: ಶ್ರೀ ಮಹಾಜನ ಸಭಾ ಟ್ರಸ್ಟ್, ಶ್ರೀರಾಮಮಂದಿರ, ಕಾಂತರಾಜ ರಸ್ತೆ, ಕೃಷ್ಣಮೂರ್ತಿಪುರಂ. ಸಂಜೆ 6.30ಕ್ಕೆ.
- **ಅಯ್ಯನಾರ್ ಸಂಗೀತ ಕಲಾಶಾಲೆ :** ಶ್ರೀ ತ್ಯಾಗರಾಜಸ್ವಾಮಿಗಳ 179ನೇ ಆರಾಧನೆ, ಶ್ರೀ ತ್ಯಾಗರಾಜ–ಪುರಂದರ ಮಹೋತ್ಸವ, ಶ್ರೀ ತ್ಯಾಗರಾಜ ಪಂಚರತ್ನ ಕೃತಿಗಳ ಸಭಾಗಾಯನ, ಸ್ಥಳ: ಶ್ರೀ ಬಿಡಾರಂ ಕೃಷ್ಣಪ್ಪ ರಾಮಮಂದಿರ, ಡಿ.ದೇವರಾಜ ಅರಸ್ ರಸ್ತೆ, ಬೆಳಗ್ಗೆ 11 ರಿಂದ.
- **ನಾಗರಿಕ ವೇದಿಕೆ, ಪೂರ್ಣಪ್ರಜ್ಞಾ ವಿದ್ಯಾಕೇಂದ್ರ :** ಶಾಲಾ ವಾರ್ಷಿಕೋತ್ಸವ, ಉದ್ಘಾಟನೆ : ಶಾಸಕ ಟಿ.ಎಸ್. ಶ್ರೀವತ್ಸ, ಅಧ್ಯಕ್ಷತೆ : ನಾಗರಿಕ ವೇದಿಕೆ ಕಾರ್ಯಾಧ್ಯಕ್ಷ ಕೆ.ಆರ್. ರಂಗಯ್ಯ, ಮುಖ್ಯ ಅತಿಥಿಗಳು : ಅಂತರ ರಾಷ್ಟ್ರೀಯ ಕ್ರೀಡಾಪಟು ಶ್ರೀಮತಿ ರೀನಾ ಜಾರ್ಜ್, ಉಪಸ್ಥಿತರು : ನಾಗರಿಕ ವೇದಿಕೆ ಗೌರವ ಅಧ್ಯಕ್ಷ ಬಿ.ಪಿ. ಪುಟ್ಟಸ್ವಾಮಿ, ಕಾರ್ಯದರ್ಶಿ ಬಿ. ಶ್ರೀಕಾಂತ್, ಪೂರ್ಣಪ್ರಜ್ಞಾ ವಿದ್ಯಾಕೇಂದ್ರ ಅಧ್ಯಕ್ಷ ಜೆ. ಲೋಕೇಶ್, ಸ್ಥಳ: ಆದಿಶಕ್ತಿ ಬಂದಂತಮ್ಮ ಕಾಳಮ್ಮ ಸಮುದಾಯ ಭವನ, ಕೆ.ಜಿ. ಕೊಪ್ಪಲು, ಸಂಜೆ 5ಕ್ಕೆ.
- **ಮೈಸೂರು ಫೋಟೋಗ್ರಾಫಿಕ್ ಅಸೋಸಿಯೇಷನ್ ಟ್ರಸ್ಟ್ :** ಛಾಯಾಚಿತ್ರ ಪುಸ್ತಕ ಬಿಡುಗಡೆ ಹಾಗೂ ಸದಸ್ಯರ ಕೈಪಿಡಿ ಬಿಡುಗಡೆ ಸಮಾರಂಭ, ಛಾಯಾಚಿತ್ರ ಪುಸ್ತಕ ಬಿಡುಗಡೆ: ಉಪ ಅರಣ್ಯ ಸಂರಕ್ಷಣಾಧಿಕಾರಿ ಕೆ. ಪರಮೇಶ, ಸದಸ್ಯರ ಕೈಪಿಡಿ ಬಿಡುಗಡೆ : ಎಂಪಿಎ ನಿಕಟಪೂರ್ವ ಅಧ್ಯಕ್ಷ ಎಸ್.ರಾಮಪ್ರಸಾದ್, ಸ್ಥಳ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಮುಡಾ ಹತ್ತಿರ, ಬೆಳಗ್ಗೆ 10.30ಕ್ಕೆ.
- **ನಾಗ ಮಾರ್ಷಲ್ ಆರ್ಟ್ಸ್ ಅಕಾಡೆಮಿ :** 20ನೇ ನ್ಯಾಷನಲ್ ಲೆವಲ್ ಕರಾಟೆ ಚಾಂಪಿಯನ್‌ಶಿಪ್, ಉಪಸ್ಥಿತರು : ವಿಧಾನ ಪರಿಷತ್ ಸದಸ್ಯರಾದ ಡಾ. ಯತೀಂದ್ರ ಸಿದ್ದರಾಮಯ್ಯ, ಡಾ. ಕೆ. ಶಿವಕುಮಾರ್, ಅಧ್ಯಕ್ಷತೆ : ಕರ್ನಾಟಕ ಕ್ರೀಡಾ ಪ್ರಾಧಿಕಾರ ಉಪಾಧ್ಯಕ್ಷ ಸಿ.ಎಸ್. ಅರುಣ್ ಮಾಚಯ್ಯ, ಸಾಮಾಜಿಕ ಕಾರ್ಯಕರ್ತ ಅಹಿಂದ ಜವರಪ್ಪ, ಲಯನ್ ಗೋಲ್ಡನ್ ಟಿ. ಸುರೇಶ್, ಪಾಲಿಕೆ ಮಾಜಿ ಸದಸ್ಯ ಜೆ.ಎಸ್. ಜಗದೀಶ್, ಸ್ಥಳ: ಚಾಮುಂಡಿ ವಿಹಾರ ಒಳಾಂಗಣ ಕ್ರೀಡಾಂಗಣ, ಬೆಳಗ್ಗೆ 11ಕ್ಕೆ
- **ಕರಾವಳಿ ಯಕ್ಷಗಾನ ಕೇಂದ್ರ :** 15ನೇ ವಾರ್ಷಿಕೋತ್ಸವ, ಮಧ್ಯಾಹ್ನ 2 ರಿಂದ ಬಡಗು ಮತ್ತು ತೆಂಕುತಿಟ್ಟು ವಿದ್ಯಾರ್ಥಿಗಳಿಂದ ಪೂರ್ವರಂಗ, ಮಧ್ಯಾಹ್ನ 2.45 ರಿಂದ ತೆಂಕುತಿಟ್ಟು ವಿದ್ಯಾರ್ಥಿಗಳಿಂದ ಯಕ್ಷಗಾನ ಪ್ರದರ್ಶನ, ಸಂಜೆ 5.30ಕ್ಕೆ ಸಭಾ ಕಾರ್ಯಕ್ರಮ, ಅಧ್ಯಕ್ಷತೆ : ಕೇಂದ್ರದ ಅಧ್ಯಕ್ಷ ಶ್ರೀಧರ ಐತಾಳ, ಮುಖ್ಯ ಅತಿಥಿಗಳು : ಬಂಟರ ಸಂಘದ ಮಾಜಿ ಅಧ್ಯಕ್ಷ ಡಾ. ಟಿ. ದಯಾನಂದ ಚೌಟಿ, ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಆಡಳಿತ ಮಂಡಳಿ ಮಾಜಿ ಸದಸ್ಯ ಎಸ್. ಸುಧಾಕರ ರೈ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ.
- **ವ್ಯವಸ್ಥಾಪಕರು :** ಗೀತ್ ಗಾತಾ ಚಲ್–24, ಡಾಕ್ಟರ್ಸ್ ಮ್ಯೂಸಿಕಲ್ ನೈಟ್, ಸ್ವಾಗತ ಭಾಷಣ : ಡಾ. ಎಂ.ಎಸ್. ನಟಶೇಖರ್, ಮುಖ್ಯ ಅತಿಥಿಗಳು : ಡಾ. ಅರುಣ್ ಶ್ರೀನಿವಾಸ್, ರಾಜೀವ್ ಗಾಂಧಿ ಯೂನಿವರ್ಸಿಟಿ ವಿಶ್ರಾಂತ ಕುಲಪತಿ ಕೆ.ಸಿ. ಬೆಳ್ಳಿಯಪ್ಪ, ಸ್ಥಳ: ಎಂಎಂಸಿ ಪ್ಲಾಟಿನಂ ಜ್ಯೂಬಿಲಿ ಹಾಲ್, ಜೆ.ಕೆ. ಮೈದಾನ, ಸಂಜೆ 5 ರಿಂದ.
- **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಅಘಹರಾನಂದ ಅವರಿಂದ ಸ್ವಾಮಿ ವಿವೇಕಾನಂದರ ಕರ್ಮಯೋಗ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.
- **ಮೈಸೂರು ಜಿಲ್ಲಾ ಉಪ್ಪಾರ ಸಂಘ :** ಸಮಾಜ ಸೇವಕರಿಗೆ ಸನ್ಮಾನ, ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಸಮಾರಂಭ, ಸಾನ್ನಿಧ್ಯ : ಡಾ. ಪುರುಷೋತ್ತಮಾನಂದಪುರಿ ಸ್ವಾಮೀಜಿ, ಉದ್ಘಾಟನೆ : ಮಾಜಿ ಸಚಿವ ಸಿ. ಪುಟ್ಟರಂಗಶೆಟ್ಟಿ, ಅಧ್ಯಕ್ಷತೆ : ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ ನಾಗರಾಜು, ಉಪಸ್ಥಿತರು : ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮದ ಅಧ್ಯಕ್ಷ ಭರಮಣ್ಣ ಲಕ್ಷ್ಮಣ ಉಪ್ಪಾರ, ರಾಜ್ಯ ಉಪ್ಪಾರ ಸಂಘದ ಪ್ರಧಾನ ಕಾರ್ಯದರ್ಶಿ ಯು. ವೆಂಕೋಬ, ಮುಡಾ ಮಾಜಿ ಅಧ್ಯಕ್ಷ ಹೆಚ್.ಎಸ್. ವಿಜಯಕುಮಾರ್, ಶ್ರೀಮತಿ ಶೀಲಾ ಪುಟ್ಟರಂಗಶೆಟ್ಟಿ, ಮಾಜಿ ಉಪಮೇಯರ್ ಡಾ. ರೂಪ ಯೋಗೇಶ್‌ಬಾಬು, ಸ್ಥಳ: ಗೋವರ್ಧನ್ ಹೋಟೆಲ್, ಹರ್ಷ ರಸ್ತೆ, ಬೆಳಗ್ಗೆ 10.30ಕ್ಕೆ.
- **ಕರ್ನಾಟಕ ಅಮೆಚೂರ್ ಖೋ ಖೋ ಅಸೋಸಿಯೇಷನ್, ಮೈಸೂರು ಜಿಲ್ಲಾ ಅಮೆಚೂರ್ ಖೋ ಖೋ ಅಸೋಸಿಯೇಷನ್ :** ಅಸೋಸಿಯೇಷನ್ ಮಾಜಿ ಅಧ್ಯಕ್ಷ ಎನ್. ಪ್ರಕಾಶ್ ಸ್ಮರಣಾರ್ಥ ಪುರುಷರಿಗಾಗಿ ರಾಜ್ಯ ಮಟ್ಟದ ಸೀನಿಯರ್ ಖೋ ಖೋ ಚಾಂಪಿಯನ್‌ಶಿಪ್ ಸಮಾರೋಪ ಸಮಾರಂಭ, ವಿಜೇತರಿಗೆ ಬಹುಮಾನ ವಿತರಣೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಅಧ್ಯಕ್ಷತೆ : ಬಿಎಐ ಅಧ್ಯಕ್ಷ ನಾಗರಾಜ್ ವಿ. ಬೈರಿ, ಮುಖ್ಯ ಅತಿಥಿಗಳು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಪರ ಜಿಲ್ಲಾಧಿಕಾರಿ ಶಿವರಾಜ್, ಸಾಮಾಜಿಕ ಹೋರಾಟಗಾರ ಅಹಿಂದ ಜವರಪ್ಪ, ಜಿನೇಶ್, ಸ್ಥಳ: ವಿವೇಕಾನಂದ ಕ್ರೀಡಾಂಗಣ, ಕುವೆಂಪುನಗರ, ಸಂಜೆ 6ಕ್ಕೆ.

ಬಹುರೂಪಿ ಚಲನಚಿತ್ರೋತ್ಸವ

ಭೂಮಿಗೀತ

- **ರಂಗಾಯಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಬಹುರೂಪಿ ಬಾಬಾ ಸಾಹೇಬ್ ಸಮತೆಯೆಡೆಗೆ ನಡಿಗೆ... ರಾಷ್ಟ್ರೀಯ ಚಲನಚಿತ್ರೋತ್ಸವ–2026, ಆಶಯ ನುಡಿ : ಬಹುರೂಪಿ ಚಲನಚಿತ್ರೋತ್ಸವ ಸಂಯೋಜಕ ಕೆ. ಮನು, ಚಾಲನೆ : ಬರಹಗಾರ ಬರಗೂರು ರಾಮಚಂದ್ರಪ್ಪ, ಮುಖ್ಯ ಅತಿಥಿಗಳು: ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಡಾ. ಕೆ.ವಿ. ನಾಗರಾಜಮೂರ್ತಿ, ರಂಗ ಸಮಾಜದ ಸದಸ್ಯರಾದ ಶ್ರೀಮತಿ ಲಕ್ಷ್ಮಿ ಚಂದ್ರಶೇಖರ್, ಎಂ.ಎಸ್. ಜಹಾಂಗೀರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ರಂಗಾಯಣ ಉಪ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಸಂಚಾಲಕರಾದ ಬಿ.ಎನ್. ಶಶಿಕಲಾ, ಅಧ್ಯಕ್ಷತೆ : ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಸ್ಥಳ: ಭೂಮಿಗೀತ, ಬೆಳಗ್ಗೆ 10.30ಕ್ಕೆ, ಮಧ್ಯಾಹ್ನ 2 ರಿಂದ 4.30 ರವರೆಗೆ ಡಾ. ಬಾಬಾ ಸಾಹೇಬ್ ಚಲನಚಿತ್ರ (ಮಲಯಾಳಂ), ನಿರ್ದೇಶನ : ಜಬ್ಬಾರ್ ಪಟೇಲ್, ಸ್ಥಳ: ಶ್ರೀರಂಗ ಮಂದಿರ.

ಕಿಂದರಿ ಜೋಗಿ

ಸಂಜೆ 6ಕ್ಕೆ ಜನಪದ ಉತ್ಸವ

ಉದ್ಘಾಟನೆ : ಕರ್ನಾಟಕ ಬಯಲಾಟ ಅಕಾಡೆಮಿ, ಬಾಗಲಕೋಟೆ ಅಧ್ಯಕ್ಷ ಡಾ.ದುರ್ಗಾದಾಸ್, ಅಧ್ಯಕ್ಷತೆ : ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಮುಖ್ಯ ಅತಿಥಿಗಳು : ಅಪರ ಜಿಲ್ಲಾಧಿಕಾರಿ ಪಿ. ಶಿವರಾಜ್, ರಂಗಭೂಮಿ ಕಲಾವಿದೆ ಡಾ. ಗೀತಾ ಸಿದ್ಧಿ, ರಂಗ ಸಮಾಜದ ಸದಸ್ಯ ಶಶಿಧರ್ ಭಾರಿಘಾಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ರಂಗಾಯಣ ಉಪ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಜನಪದ ಉತ್ಸವ ಸಂಚಾಲಕ ಗೀತಾ ಮೋಂಟಡ್ಕ.

ಸುತ್ತೂರಿನಲ್ಲಿಂದು, ನಂಜನಗೂಡು ತಾಲೂಕು

- **ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠ:** ಧನುರ್ಮಾಸದ ವಿಶೇಷ ಪೂಜೆ, ಸ್ಥಳ: ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ಮಹೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ, ಶ್ರೀ ಸೋಮೇಶ್ವರ, ಶ್ರೀ ನಾರಾಯಣಸ್ವಾಮಿ ದೇವಸ್ಥಾನ, ಸುತ್ತೂರು ಶ್ರೀಕ್ಷೇತ್ರ, ಬೆಳಗ್ಗೆಯಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ– ಹೆಚ್.ಸಿ.ಭುವನೇಶ್ವರಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನಿಮಾ ಯಾನ–ಜನ ಮೆಚ್ಚಿದ ಕನ್ನಡ ಚಿತ್ರಗಳ ನೆನಪಿನ ಮಾಲೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಎ.ಎಸ್. ನಾಗಲಕ್ಷ್ಮಿ ಹಾಗೂ ಎಸ್. ಸಂಗೀತಾ, ವ್ಯಾಖ್ಯಾನ–ಡಾ. ಹೆಚ್. ಎನ್. ಮಂಜುರಾಜ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ, ಡಾ.ಎಸ್.ಎಲ್.ಭೈರಪ್ಪ ಅವರ ದೂರ ಸರಿದರು ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್., 8.30 ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ–ಅಸಾಂಕ್ರಾಮಿಕ ರೋಗಗಳಿಗೆ ಆಯುರ್ವೇದ ಚಿಕಿತ್ಸೆ ಕುರಿತು ಮಾತನಾಡುತ್ತಾರೆ ಪಿರಿಯಾಪಟ್ಟಣದ ತಾಲೂಕು ಸರ್ಕಾರಿ ಆಯುರ್ವೇದ ಆಸ್ಪತ್ರೆಯ ಆಯುರ್ವೇದ ವೈದ್ಯಾಧಿಕಾರಿ ಡಾ.ಮಧುಮಾಲತಿ.ಬಿ.ವಿ. ಇವರೊಂದಿಗೆ ಭಾಗವಹಿಸುತ್ತಾರೆ–ತೇಜಸ್ವಿನಿ ಗಿರೀಶ್, 10.00 ಕೇಳಿಗಿಳಿಗಳೇ ಕಥೆ ಕೇಳು ಪುಟ್ಟ, ಪ್ರಸ್ತುತಿ–ಕವಿತಾ.ಬಿ.ಜಿ, 10.30 ಮಕ್ಕಳ ಮಂಟಪ–ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ ಎಸ್.ಎಸ್.ಎಲ್.ಸಿ ಪರೀಕ್ಷಾ ಸಿದ್ಧತೆ ಕುರಿತು ಬಾನುಲಿ ಸರಣಿ ಕಾರ್ಯಕ್ರಮ. ವಿಷಯ–ಪ್ರಥಮ ಭಾಷೆ ಸಂಸ್ಕೃತ ಭಾಗವಹಿಸುವವರು ಲಕ್ಷ್ಮೀನಾರಾಯಣ ಭಟ್ಟ, ಶಿಕ್ಷಕರು, ರಾಮಕೃಷ್ಣ ವಿದ್ಯಾಶಾಲೆ ಇವರೊಂದಿಗೆ ಭಾಗವಹಿಸುತ್ತಾರೆ–ದಿಗ್ವಿಜಯ್.ಬಿ., 11.00 2025 The year of reforms ವಿಶೇಷ ಬಾನುಲಿ ಸರಣಿ, 11.15 ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ, ಸಂಕ್ರಾಂತಿ ಹಬ್ಬದ ಸಂದರ್ಭದಲ್ಲಿ –ಸಂಕ್ರಾಂತಿ ಸವಿ ಹಬ್ಬದ ಸಿರಿ– ವಿಶೇಷ ಕಾರ್ಯಕ್ರಮ, ಪ್ರಸ್ತುತಿ : ವೈಷ್ಣವಿ ರತ್ನಂ ಮಹಿಳಾ ತಂಡ, 12.35 ಭಕ್ತಿಗೀತೆಗಳು, 12.45 ಜನಪದ ಸಂಗೀತ : ಬಸವಯ್ಯ ಮತ್ತು ಬಸವರಾಜು ಅವರಿಂದ ಭಜನೆ ಪದಗಳು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ– ಪ್ರಧಾನಮಂತ್ರಿ ರಾಷ್ಟ್ರೀಯ ಆರೋಗ್ಯ ಮಿಷನ್ ಕುರಿತು ಮಾಹಿತಿ ನೀಡುತ್ತಾರೆ ಪತ್ರಕರ್ತ ಕಿರಣ್ ಆರಾಧ್ಯ, 1.20 ಭಾವಗೀತೆಗಳು–ಎಂ.ವಾಣಿ ಸತೀಶ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ನಕ್ಷತ್ರಲೋಕ–ಸಿನಿ ಸೆಲೆಬ್ರಿಟಿಗಳೊಂದಿಗೆ ಮಾತುಕತೆ, ಭಾಗವಹಿಸುರುವವರು: ಹಿರಿಯ ಪೋಷಕನಟ ಶಂಕರ್ ಅಶ್ವತ್ಥ್, ಪ್ರಸ್ತುತಿ : ಶ್ರೀಮಾನ್.ಎಸ್., 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಕರ್ನಾಟಕ ಶಾಸ್ತ್ರೀಯ ಸಂಗೀತ, ಎಲ್.ಅರ್ಚನಾ–ಹಾಡುಗಾರಿಕೆ, 6.51 ಕೃಷಿರಂಗ : ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್.ಕೇಶವಮೂರ್ತಿ, ಆರ್.ಲೋಕೇಶ್ವರಿ, ಬಿ.ಎನ್.ಜ್ಞಾನೇಶ್, ಕೃಷಿ ಲೋಕ, ಕೃಷಿ ದರ್ಪಣ, ವಾರದ ಕೃಷಿರಂಗ, ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00ಫಸ್ಟ್ ಫಿಲ್ಮ್– ಪ್ರಸ್ತುತಿ ಶ್ರೀಮಾನ್.ಎಸ್, 8.30 ಹಿಂದಿ ಚಿತ್ರಗೀತೆಗಳು, 9.15 ರಂಗಗೀತೆಗಳು, 9.30 ರಾಷ್ಟ್ರೀಯ ಕಾರ್ಯಕ್ರಮದಲ್ಲಿ ರೂಪಕ, 10.00 ಆಕಾಶವಾಣಿ ಸಂಗೀತ ಸಮ್ಮೇಳನ–2025 – ವಿದುಷಿ ಕೊಲ್ಲೂರು ವಂದನಾ – ಹಾಡುಗಾರಿಕೆ

ನಾವು ಚಿಂತಾಜನಕ ಸ್ಥಿತಿಯಲ್ಲಿ ಜೀವನ ನಡೆಸುತ್ತಿದ್ದೇವೆ

ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷರಲ್ಲಿ ಸಾತಗಳ್ಳಿ ಅಂಬೇಡ್ಕರ್ ಕಾಲೋನಿ ನಿವಾಸಿಗಳ ಅಳಲು

ಮೈಸೂರು,ಜ.10(ಪಿಎಂ)– ಕಳೆದ 15 ವರ್ಷಗಳಿಂದ ಇಲ್ಲಿ ವಾಸವಾಗಿದ್ದೇವೆ. ಕುಡಿಯುವ ನೀರಿಗೆ ಸಮಸ್ಯೆಯಾಗಿದೆ. ಶೌಚಾಲಯ ಹಾಗೂ ಒಳಚರಂಡಿ ವ್ಯವಸ್ಥೆ ಸರಿಯಾಗಿಲ್ಲ. ಸೌಲಭ್ಯಗಳ ಕೊರತೆ ಕಾರಣ ಇಲ್ಲಿನ ಅಂಬೇಡ್ಕರ್ ಸಮುದಾಯ ಭವನದಲ್ಲೇ ಅಂಗನವಾಡಿ ಹಾಗೂ ಶಾಲೆ ನಡೆಸಲಾಗುತ್ತಿದೆ. ಚಿಂತಾಜನಕ ಸ್ಥಿತಿಯಲ್ಲಿ ಜೀವನ ನಡೆಸುತ್ತಿದ್ದೇವೆ ಎಂದು ಸಾತಗಳ್ಳಿ ಅಂಬೇಡ್ಕರ್ ಕಾಲೋನಿ ನಿವಾಸಿಗಳು ಅಳಲು ತೋಡಿಗೊಂಡರು.

ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ.ಪಲ್ಲವಿ, ಶನಿವಾರ ಕಾಲೋನಿಗೆ ಭೇಟಿ ನೀಡಿದ್ದ ವೇಳೆ ಅವರಲ್ಲಿ ಇಲ್ಲಿನ ನಿವಾಸಿಗಳು ಹೀಗೆ ತಮ್ಮ ಸಂಕಷ್ಟಗಳನ್ನು ಹೇಳಿಕೊಂಡರು. ಸಾತಗಳ್ಳಿ ಅಂಬೇಡ್ಕರ್ ಕಾಲೋನಿಯಲ್ಲಿ 560 ಗುಂಪು ಮನೆಗಳಿದ್ದು, ಅಷ್ಟೂ ಮನೆಗಳಿಗೂ ಇಲ್ಲಿರುವ ಒಂದೇ ಬೋರ್‌ವೆಲ್‌ನಲ್ಲಿ ನೀರು ಪೂರೈಸಲು ಸಾಧ್ಯವಾಗುತ್ತಿಲ್ಲ. ಹೀನಾಯ ಸ್ಥಿತಿಯಲ್ಲಿ ಬದುಕು ನಡೆಸುತ್ತಿದ್ದೇವೆ ಎಂದು ಸಂಕಷ್ಟ ತೋಡಿಕೊಂಡರು.

ಮನೆಗಳ ಸುತ್ತಲೂ ಕಸ ತುಂಬಿರುತ್ತದೆ. ಸ್ವಚ್ಛತೆ ಇಲ್ಲ. ಎಷ್ಟೇ ಮನವಿ ಮಾಡಿದರೂ ಯಾರೊಬ್ಬ ಅಧಿಕಾರಿಗಳು ಬರುವುದಿಲ್ಲ. ರಸ್ತೆ ಅಭಿವೃದ್ಧಿಯಾಗಿಲ್ಲ.



ಮೈಸೂರಿನ ಸಾತಗಳ್ಳಿ ಅಂಬೇಡ್ಕರ್ ಕಾಲೋನಿಗೆ ಶನಿವಾರ ಭೇಟಿ ನೀಡಿ ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ.ಪಲ್ಲವಿ ಪರಿಶೀಲನೆ ನಡೆಸಿದರು.

ಕಟ್ಟಡಗಳ ಛಾವಣಿ ಹಾಳಾಗಿದೆ. ಇಲ್ಲಿ ಪುಂಡರ ಹಾವಳಿ ಹೆಚ್ಚಾಗುತ್ತಿದ್ದು, ಗಾಂಜಾ–ಡ್ರಗ್ಸ್ ಸೇವನೆ ಮಾಡುವವರು ಸ್ಥಳೀಯರ ಮೇಲೆ ಹಲ್ಲೆ ನಡೆಸುತ್ತಾರೆ. ಸಂಜೆ ವೇಳೆ ತಿರುಗಾಡುವುದು ಕಷ್ಟಕರವಾಗಿದೆ ಎಂದು ನಿವಾಸಿಗಳು ಸಮಸ್ಯೆ ಹೇಳಿಕೊಂಡರು.


ಅನುದಾನ ಕೊರತೆ: ಅನುದಾನದ ಕೊರತೆಯಿಂದಾಗಿ ಯಾವುದೇ ಅಭಿವೃದ್ಧಿ ಕಾಮಗಾರಿಗಳನ್ನು ನಡೆಸಲು ಸಾಧ್ಯವಾಗುತ್ತಿಲ್ಲ. ಕಳೆದ 5 ವರ್ಷಗಳಿಂದ ಒಂದು ರೂಪಾಯಿ ಅನುದಾನ ಬಂದಿಲ್ಲ. ಕಸ ವಿಲೇವಾರಿ ಸಂಬಂಧ ರಮ್ಮನಹಳ್ಳಿ ಪಪಂ ಅಧಿಕಾರಿಗಳಿಗೆ ತಿಳಿಸಿದ್ದು, ಕುಡಿಯುವ ನೀರಿನ ವ್ಯವಸ್ಥೆಗೆ ಮೇಲಾಧಿಕಾರಿಗಳ ಗಮನಕ್ಕೆ ತಂದಿದ್ದೇವೆ ಎಂದು ಕೊಳಗೇರಿ ಅಭಿವೃದ್ಧಿ ಮಂಡಳಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಸೈಯದ್ ಫಾತಿಮಾ ಮಾಹಿತಿ ನೀಡಿದರು.

ಬಳಿಕ ಮಾತನಾಡಿದ ನಿಗಮದ ಅಧ್ಯಕ್ಷೆ ಜಿ.ಪಲ್ಲವಿ, ಈ ಕಾಲೋನಿಯಲ್ಲಿ ಪ್ರತಿದಿನ ಪೊಲೀಸರು ಬೀಟ್ ಮಾಡಬೇಕು. ಮಹಿಳೆಯರು ಮತ್ತು ಮಕ್ಕಳ ಸಂಖ್ಯೆ ಹೆಚ್ಚಾಗಿದ್ದು, ಯಾವುದೇ ಅಹಿತಕರ ಘಟನೆ ನಡೆಯದಂತೆ ಮುಂಜಾಗ್ರತೆ ವಹಿಸಬೇಕು. ಪ್ರತಿ 6 ತಿಂಗಳಿಗೊಮ್ಮೆ ಯುಜಿಡಿ ಸ್ವಚ್ಛತೆಯಾಗಬೇಕು. ಸಮಾಜ ಕಲ್ಯಾಣ ಇಲಾಖೆ, ಕೊಳಗೇರಿ ಮಂಡಳಿ, ಪಪಂ ಅಧಿಕಾರಿ–ಸಿಬ್ಬಂದಿ, ನಿವಾಸಿಗಳಿಗೆ ಸ್ವಚ್ಛತೆ ಕುರಿತು ಅರಿವು ಮೂಡಿಸಬೇಕು. ಜೊತೆಗೆ ಸ್ಥಳೀಯ ಸಂಸ್ಥೆಯಿಂದ ಸ್ವಚ್ಛತಾ ನಿರ್ವಹಣೆ ಸಮರ್ಪಕವಾಗಿ ನಡೆಯಬೇಕು ಎಂದು ಸೂಚಿಸಿದರು.

ಕೊಳಗೇರಿ ಅಭಿವೃದ್ಧಿ ಮಂಡಳಿ ಅಧ್ಯಕ್ಷರೊಂದಿಗೆ ಚರ್ಚಿಸಿ, ಸಮಸ್ಯೆಗಳನ್ನು ಪರಿಹರಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಸರ್ಕಾರದಿಂದ ಅನುದಾನ ಬಿಡುಗಡೆಗೊಳಿಸಲು ಮುಖ್ಯಮಂತ್ರಿಗಳು, ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೆ ತರಲಾಗುವುದು ಎಂದು ಹೇಳಿದರು.

ಅಖಿಲ ಕರ್ನಾಟಕ ಕುಳುವ ಮಹಾ ಸಂಘದ ಪ್ರಧಾನ ಕಾರ್ಯದರ್ಶಿ ಆನಂದ್‌ಕುಮಾರ್ ಏಕಲವ್ಯ, ಉಪಾಧ್ಯಕ್ಷ ವೆಂಕಟಾಚಲ, ಸಂಘಟನಾ ಕಾರ್ಯದರ್ಶಿ ರಂಗಸ್ವಾಮಿ, ಮೈಸೂರು ಜಿಲ್ಲಾ ಕೊರಮ–ಕೊರಚ ಮಹಾ ಸಂಘದ ಪ್ರಧಾನ ಕಾರ್ಯದರ್ಶಿ ಮೋಹನ್ ಕಾಯಕ, ಜಂಟಿ ಕಾರ್ಯದರ್ಶಿ ಎನ್.ರವಿಕುಮಾರ್, ಉಪಾಧ್ಯಕ್ಷ ರಮೇಶ್, ಮುಖಂಡರಾದ ಗಂಗಪ್ಪ, ಜಯಪ್ರಭು, ಪ್ರಸನ್ನಕುಮಾರ್, ದುರ್ಗಪ್ಪ, ರಾಮಪ್ಪ, ಶಿವಪುತ್ರ, ನಾಗಪ್ಪ ದೊಡ್ಡಮನಿ, ಗಂಗಾಧರ ಮತ್ತಿತರರು ಹಾಜರಿದ್ದರು.

ಇಂದು ವಿದ್ಯುತ್ ವ್ಯತ್ಯಯ



ಮೈಸೂರು, ಜ.10– ಭೂಗತ ಕೇಬಲ್ ಅಳವಡಿಸುವ ಕೆಲಸದ ನಿಮಿತ್ತ ಜ.11 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5ರವರೆಗೆ ಯಾದವಗಿರಿ ಕೈಗಾರಿಕ ಪ್ರದೇಶ, ಮಂಜುನಾಥಪುರ, ಜಾವಾ ಸರ್ಕಲ್, ಜಾಯ್ ಐಸ್ ಕ್ರೀಮ್ ಫ್ಯಾಕ್ಟರಿ ಹಾಗೂ ಸುತ್ತಮುತ್ತ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಟಾಕ್ಸಿಕ್ ಟೀಸರ್ ವಿರುದ್ಧ ಸೆನ್ಸಾರ್ ಮಂಡಳಿಗೆ ವಕೀಲರ ದೂರು



ಬೆಂಗಳೂರು, ಜ.10– ರಾಕಿಂಗ್ ಸ್ಟಾರ್ ಯಶ್ ಅಭಿನಯದ ಬಹು ನಿರೀಕ್ಷಿತ 'ಟಾಕ್ಸಿಕ್' ಸಿನಿಮಾದ ಟೀಸರ್ ಬಿಡುಗಡೆಯಾದ ನಂತರ ಭಾರೀ ಚರ್ಚೆಗೆ ಗ್ರಾಸವಾಗಿದ್ದು, ಟೀಸರ್‌ನಲ್ಲಿನ ಅಸಭ್ಯ ದೃಶ್ಯಗಳು ಮಕ್ಕಳ ಮೇಲೆ ಪರಿಣಾಮ ಬೀರುತ್ತವೆ ಎಂದು ವಕೀಲ ಲೋಹಿತ್ ಕುಮಾರ್, ಕೇಂದ್ರ ಸೆನ್ಸಾರ್ ಮಂಡಳಿಗೆ ದೂರು ಸಲ್ಲಿಸಿದ್ದಾರೆ.

ಟಾಕ್ಸಿಕ್ ಟೀಸರ್‌ನಲ್ಲಿ ಅಶ್ಲೀಲ ಕಂಟೆಂಟ್ ಬಳಕೆ ಮಾಡಲಾಗಿದೆ. ಇದು ಮಕ್ಕಳ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ತೀವ್ರ ವಯಸ್ಕ ದೃಶ್ಯಗಳು ಇವೆ. ಯಾವುದೇ ವಯೋಮಿತಿ ಅಥವಾ ಮುನ್ನೆಚ್ಚರಿಕೆ ಇಲ್ಲದೆ ಸಾರ್ವಜನಿಕ ವೇದಿಕೆಗಳಲ್ಲಿ ಮುಕ್ತವಾಗಿ ಲಭ್ಯವಾಗಿವೆ. ಇಂತಹ ಕಂಟೆಂಟ್‌ಗಳನ್ನು ಎ ಪ್ರಮಾಣ ಪತ್ರದೊಂದಿಗೆ ಬಿಡುಗಡೆ ಮಾಡುವುದು ಸೂಕ್ತ. ಪೋಷಕರ ಅನುಮತಿ ಅಥವಾ ಮುನ್ನಚ್ಚರಿಕೆ ಇಲ್ಲದೆ ಮಕ್ಕಳಿಗೆ ಇದು ಅಸಮಂಜಸವಾಗಿದೆ. ಈ ಬಗ್ಗೆ ಕೂಡಲೇ ಟಾಕ್ಸಿಕ್ ಚಿತ್ರದ ನಿರ್ಮಾಪಕರಿಗೆ ನಿರ್ದೇಶನ ನೀಡಿ ಮತ್ತು ವಯಸ್ಕರ ಕಂಟೆಂಟ್ ಇರುವ ಟೀಸರ್ ತೆಗೆದು ಹಾಕಲು ಅಥವಾ ಸೂಕ್ತವಾಗಿ ತಿದ್ದುಪಡಿ ಮಾಡಲು ಆದೇಶಿಸಬೇಕು. ಜೊತೆಗೆ ಸಿನಿಮಾದ ಟೀಸರ್‌ಗಳಿಗೂ ಸಹ ಸೆನ್ಸಾರ್ ಪ್ರಮಾಣಪತ್ರ ಮತ್ತು ಮಾರ್ಗಸೂಚಿ ಕಡ್ಡಾಯ ಮಾಡಬೇಕು. ಇಲ್ಲವಾದರೆ ಸೆನ್ಸಾರ್ ಮಂಡಳಿ ವಿರುದ್ಧ ಭಾರೀ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ಸಂದೇಶ ರವಾನಿಸಿದ್ದಾರೆ.

ಮೊನ್ನೆ ಬಿಡುಗಡೆಯಾಗಿರುವ 'ಟಾಕ್ಸಿಕ್' ಚಿತ್ರದ ಹೊಸ ಟೀಸರ್ ಸಂಚಲನ ಮೂಡಿಸಿದ್ದು, ಯಶ್ ಅವರ ಪಾತ್ರದ ಹೆಸರನ್ನು 'ರಾಯ' ಎಂದು ಪರಿಚಯಿಸಲಾಗಿದೆ. 200 ಮಿಲಿಯನ್‌ಗೂ ಅಧಿಕ ವೀಕ್ಷಣೆ ಪಡೆದಿದ್ದು, ಹಸಿಬಿಸಿ ದೃಶ್ಯಗಳ ಬಗ್ಗೆ ಪರ–ವಿರೋಧ ಚರ್ಚೆ ನಡೆಯುತ್ತಿದೆ.

ತಾಯಿ ನೀಡಿದ ದೂರು ದಾಖಲು: ಈ ನಡುವೆ ನಟ ಯಶ್ ತಾಯಿ ಪುಷ್ಪ ಅವರಿಗೆ ಸೇರಿದ್ದು ಎನ್ನಲಾಗುತ್ತಿರುವ ಹಾಸನದಲ್ಲಿರುವ ಸೈಟ್‌ನ ಕಾಂಪೌಂಡ್ ಅನ್ನು ಆ ಜಾಗದ ಸದ್ಯದ ಮಾಲೀಕರು ಎಂದು ಹೇಳಿಕೊಂಡಿರುವ ವ್ಯಕ್ತಿ ಕೆಲ ದಿನಗಳ ಹಿಂದೆ ನೆಲಸಮಗೊಳಿಸಿರುವ ಸಂಬಂಧ ಅವರು ಪೊಲೀಸ್ ಠಾಣೆಗೆ ಭೇಟಿ ನೀಡಿ ಘಟನೆ ಕುರಿತು ಮಾತುಕತೆ ನಡೆಸಿದ್ದು, ಇವರು ನೀಡಿದ ದೂರನ್ನು ಆಧರಿಸಿ ಪ್ರಕರಣ ದಾಖಲಾಗಿದೆ

ಪಿಹೆಚ್.ಡಿ ಪದವಿ



ಮೈಸೂರು: ಡಾ.ಆರ್.ಮಹೇಶ್ ಅವರ ಮಾರ್ಗದರ್ಶನದಲ್ಲಿ ಸಿ.ಮಹೇಶ ಅವರು ನಿರ್ವಹಣೆ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ನಕ್ಕರೆ ಅದೇ ಸ್ವರ್ಗ

ಗುಂಡಾ : ಏನಪ್ಪಾ ಸಪ್ಲೈಯರ್ ನೀನು ಕೊಟ್ಟಿರುವ ಚಿಕನ್ ಬಿರಿಯಾನಿಯಲ್ಲಿ ನೊಣ ಬಿದ್ದಿದೆ.

ಸಪ್ಲೇಯರ್ : ಅದೇನ್ ದೊಡ್ಡ ವಿಷ್ಯ ಸಾರ್. ನಿಮಗೆ ಕೊಟ್ಟಿರುವ ಬಿರಿಯಾನಿಯಲ್ಲಿ ಕೋಳಿನೇ ಸತ್ತು ಬಿದ್ದಿದೆ. ನೊಣ ಏನ್ ಮಹಾ ಅನ್ನಿ ಸಾರ್!

ಮೈಸೂರು ಮಿತ್ರ

ಭಾನುವಾರ, ಜನವರಿ 11, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಬದುಕು ನಮ್ಮನ್ನು ಕಷ್ಟಗಳ ಆಳದ ನೀರಿಗೆ ಆಗಾಗ ಕರೆದೊಯ್ಯುವುದು ನಮ್ಮನ್ನು ಮುಳುಗಿಸುವುದಕ್ಕಲ್ಲ, ಚೆನ್ನಾಗಿ ತೊಳೆದು ಶುದ್ಧವಾಗಿಸಲು ಅಷ್ಟೇ. ಇದು ನಮಗೆ ನೆನಪಿದ್ದರೆ ಬದುಕು ಸುಂದರ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಆಳಾಗದವ ಅರಸನಲ್ಲ, ಹಟ ಹಿಡಿದವ ಸಾಮ್ರಾಟನಲ್ಲ.

ನಿಮ್ಮ ಪತ್ರಗಳು

ರಾಜ್ಯದ ಎಲ್ಲಾ ಶಾಲೆಗಳಲ್ಲಿ ಮಲೆಯಾಳಂ ಸಂಪೂರ್ಣ ನಿಷೇಧಿಸಿ

ಮಾನ್ಯರೆ,

ಕೇರಳ ರಾಜ್ಯದ ಮುಖ್ಯ ಮಂತ್ರಿಗಳು ಅವರ ರಾಜ್ಯದಲ್ಲಿ ಅಲ್ಲಿಯ ಎಲ್ಲಾ ಕನ್ನಡ ಶಾಲೆಗಳಲ್ಲಿ ಕನ್ನಡ ಭಾಷೆಯ ಕಲಿಕೆಯನ್ನು ನಿಷೇಧಿಸಿರುವುದಾಗಿ ಟಿವಿ ದೃಶ್ಯ ಮಾಧ್ಯಮಗಳಲ್ಲಿ ಪ್ರಕಟವಾಗಿದೆ. ಈ ವಿಷಯದಲ್ಲಿ ಕನ್ನಡಿಗರ ಆಕ್ರೋಶವು ಈಗಾಗಲೇ ವ್ಯಕ್ತವಾಗಿದೆ.

ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ಮತ್ತು ಕನ್ನಡ ಭಾಷೆಯ ಸಚಿವರೂ ಸಹ ತಮ್ಮಲ್ಲಿಯೂ ತಾಕತ್ತಿದೆ ಎಂದು ತೋರಿಸಲು ಕೇರಳ 'ಭಾಷಾ ಕಲಿಕೆ'ಯನ್ನು ಎಲ್ಲಾ ಶಾಲೆಗಳಲ್ಲಿಯೂ ನಿಷೇದಿಸಿ ಆಜ್ಞೆಯನ್ನು ಹೊರಡಿಸಲಿ. ಆ ರಾಜ್ಯದಲ್ಲಿ ಕೇರಳ ರಾಜ್ಯದ ಮುಖ್ಯಮಂತ್ರಿಗಳು ಕೇರಳ ಭಾಷೆಯನ್ನು ಪ್ರಥಮ ಭಾಷೆ ಎಂದು ಘೋಷಣೆಯನ್ನೂ ಮಾಡಿದ್ದಾರೆ.

ಕೇರಳ ರಾಜ್ಯ ಸರ್ಕಾರವು ಈ ರೀತಿಯ ಆಜ್ಞೆಯನ್ನು ಹೊರಡಿಸಿರುವುದು ನಮ್ಮ ಭಾಷಾ ಸ್ವಾತಂತ್ರ್ಯ, ನಮ್ಮ ಕನ್ನಡ ಭಾಷೆಯ ಮೇಲೆ ನಡೆದಿರುವ ನೇರ ಹಲ್ಲೆಯಾಗಿದೆ. ನಮ್ಮ ರಾಜ್ಯ ಸರ್ಕಾರವು ತಕ್ಷಣ ಈ ವಿಷಯದ ಬಗ್ಗೆ ಪ್ರತಿಭಟನೆ ಮಾಡುವುದನ್ನು ಬಿಟ್ಟು ತನ್ನ ಆಂತರಿಕ ವಿಷಯದಲ್ಲಿ ಮುಳುಗಿ ಹೋಗಿದೆ. ಕೇರಳ ರಾಜ್ಯವು ಮಾನಸಿಕವಾಗಿ ಎಂದೋ ರಾಜ್ಯ ಜನತೆಯಲ್ಲಿ ಸೇರಿಹೋಗಿದೆ.

ನಮ್ಮ ರಾಜ್ಯ ಸರ್ಕಾರವು ಈ ವಿಷಯದ ಬಗ್ಗೆ ಈಗ ತಮ್ಮ ಕೋಪವನ್ನು ಪ್ರಕಟಿಸಿ, ಪ್ರತಿಭಟನೆಯನ್ನು ಸಲ್ಲಿಸಿರುವುದು ಮೆಚ್ಚಿಗೆ ವಿಷಯವಾಗಿದೆ. ಚುನಾವಣೆಗಳು ಬಂದಾಗಲೆಲ್ಲಾ ಈ ವಿಷಯ ಹೊರಬರುತ್ತಿದ್ದು ಅದು ಒಂದು ಚುನಾವಣಾ ಪ್ರಕ್ರಿಯೆಯ ಅಂತರ ರಾಜ್ಯ ವಿಷಯವಾಗಿ ಚರ್ಚಿತವಾಗುತ್ತಿದೆ.

ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ರಾಜ್ಯದ ಮತ್ತು ತಮ್ಮ ಸ್ವಾಭಿಮಾನವನ್ನು ಬಿಟ್ಟುಕೊಡದೆ ಈ ವಿಷಯದಲ್ಲಿ ಕೇರಳ ರಾಜ್ಯದ ಮುಖ್ಯಮಂತ್ರಿಗಳೊಂದಿಗೆ ಚರ್ಚೆ ನಡೆಸಲಿ ಎಂಬುದು ರಾಜ್ಯದ ಜನತೆಯ ಆಸೆಯಾಗಿದೆ ಮತ್ತು ಹಕ್ಕೊತ್ತಾಯವಾಗಿದೆ.

–ಬೇಲೂರು ದ.ಶಂ ಪ್ರಕಾಶ್, ಮೈಸೂರು.

ಕನಕದಾಸನಗರದ ಕೆಇಬಿ ವೃತ್ತದಲ್ಲಿ ಹೆಚ್ಚುವರಿ ಸಿಗ್ನಲ್ ದೀಪ ಅಳವಡಿಕೆ

ಮಾನ್ಯರೆ,

ಮೈಸೂರಿನ ಕನಕದಾಸನಗರ ರಿಂಗ್ ರಸ್ತೆ ವಿಶ್ವಮಾನವ ಜೋಡಿ ರಸ್ತೆ ಜಂಕ್ಷನ್‌ನಲ್ಲಿ ಕನಕದಾಸನಗರ ಜೆ ಬ್ಲಾಕ್‌ನ ದಕ್ಷಿಣ ದಿಕ್ಕಿನಿಂದ ಹೋಗುವ ವಾಹನ ಸವಾರರಿಗೆ ಸಿಗ್ನಲ್‌ನಲ್ಲಿ ಸೂಚನಾ ಫಲಕ ದೀಪ ಅಳವಡಿಸದೇ ಇದ್ದ ಕಾರಣ ಸವಾರರಿಗೆ ತೊಂದರೆಯಾಗಿದೆ. ಆದ್ದರಿಂದ ಹೆಚ್ಚುವರಿಯಾಗಿ ಸಿಗ್ನಲ್ ದೀಪ ಅಳವಡಿಸಿ ಎಂದು ನಾನು 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ದಿನಾಂಕ :11.5.2025 ಹಾಗೂ 23.12.25. ರಂದು ಪತ್ರ ಬರೆದಿದ್ದೆ. ಇದೀಗ ಅಲ್ಲಿ ಕೆಇಬಿ ಕಚೇರಿ ರಸ್ತೆಯ ಸಿಗ್ನಲ್ ಕಂಬದಲ್ಲಿ ಹೆಚ್ಚುವರಿಯಾಗಿ ಸಿಗ್ನಲ್ ದೀಪ ಅಳವಡಿಸಿದ್ದಾರೆ. ಇದರಿಂದ ಈ ರಸ್ತೆಯಲ್ಲಿ ಹೋಗುವ ವಾಹನ ಸವಾರರಿಗೆ ಅನುಕೂಲವಾಗಿ, ಗೊಂದಲ ನಿವಾರಣೆಯಾಗಿದೆ. ಪತ್ರ ಪ್ರಕಟಿಸಿದ 'ಮೈಸೂರು ಮಿತ್ರ' ಪತ್ರಿಕೆ ಹಾಗೂ ಕ್ರಮ ವಹಿಸಿದ ಸಂಚಾರಿ ಪೊಲೀಸ್ ಇಲಾಖೆಯ ಅಧಿಕಾರಿಗಳಿಗೆ ಧನ್ಯವಾದಗಳು.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಮಲೆಯಾಳಂ ಕಲಿಕೆ ಕಡ್ಡಾಯ ವಿಷಾದಕರ

ಮಾನ್ಯರೆ,

ಕೇರಳದ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಮಲಯಾಳಂ ಭಾಷೆಯನ್ನು ಕಡ್ಡಾಯವಾಗಿ ಕಲಿಯಬೇಕು ಎಂಬ ಹಿನ್ನೆಲೆಯಲ್ಲಿ, ಮಲಯಾಳಿ ಭಾಷಾ ಮಸೂದೆ 2025 ಅನ್ನು ಕೇರಳ ವಿಧಾನ ಸಭೆ ಅಂಗೀಕಾರ ಮಾಡಿರುವುದನ್ನು ತಕ್ಷಣ ಹಿಂತೆಗೆದುಕೊಳ್ಳಬೇಕೆಂದು, ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರನ್ನು ಒತ್ತಾಯಿಸುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿರುವುದು ಸ್ವಾಗತಾರ್ಹ.ಕೇರಳದ ಗಡಿಜಿಲ್ಲೆಯಾದ ಕಾಸರಗೋಡಿನಲ್ಲಿ ಶೇ.70 ಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳು ಕನ್ನಡ ಭಾಷೆಯನ್ನು ಮತ್ತು ಕನ್ನಡ ಮಾಧ್ಯಮದಲ್ಲೇ ಕಲಿಯಲು ಬಯಸುವುದು ನಿಜವಾದ ಸಂಗತಿ ಹಾಗೂ ಅಲ್ಲಿ ವಾಸ ಮಾಡುತ್ತಿರುವ ಕನ್ನಡಿಗರ ಒಕ್ಕೊರಲಿನ ಅಭಿಪ್ರಾಯ. ಕೇರಳ ರಾಜ್ಯದಲ್ಲಿ ಭಾಷಾ ಅಲ್ಪಸಂಖ್ಯಾತರಾದ ಕನ್ನಡಿಗರು ಮಾತೃ ಭಾಷೆ ಕಲಿಕೆಯಿಂದ ಅವಕಾಶ ವಂಚಿತರಾಗುವುದರ ಜೊತೆಗೆ, ಕನ್ನಡಿಗರ ಮೂಲಭೂತ ಹಕ್ಕನ್ನು ದಮನ ಮಾಡುವಂತಹ ಇಂತಹ ಕೆಲಸಕ್ಕೆ ಕೇರಳ ಸರ್ಕಾರ ಮುಂದಾಗಿರುವುದು ನಾಚಿಕೆಗೇಡಿನ ಸಂಗತಿ.ಈ ವಿಷಯದಲ್ಲಿ ರಾಜ್ಯ ಸರ್ಕಾರ ಕಾಸರಗೋಡಿನ ಕನ್ನಡಿಗರ ಜೊತೆ ನಿಲ್ಲುವುದು ಸೂಕ್ತ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ವಿಪರ್ಯಾಸ!

ಮಾನ್ಯರೆ,

ಮೂರು ಹುಲಿಗಳನ್ನು ಬೇಟೆಯಾಡಿ, ಹಲವಾರು ವರ್ಷಗಳಿಂದ ತಲೆ ಮರೆಸಿಕೊಂಡಿದ್ದ ಮರಿ ವೀರಪ್ಪನ್ ಖ್ಯಾತಿಯ ಕುಖ್ಯಾತ ಬೇಟೆಗಾರ ಗೋವಿಂದನನ್ನು ಅರಣ್ಯ ಸಂಚಾರಿ ದಳದ ಸಿಬ್ಬಂದಿ ಸಿನಿಮೀಯ ರೀತಿಯಲ್ಲಿ ರೋಚಕ ಕಾರ್ಯಾಚರಣೆಯ ಮೂಲಕ ಬಂಧಿಸಿರುವ ಘಟನೆ ಚಾಮರಾಜಪುರಂ ರೈಲ್ವೆ ನಿಲ್ದಾಣದ ಬಳಿ ನಡೆದಿದೆ.

ಇದೇ ನರಭಕ್ಷಕ ಹುಲಿ–ಚಿರತೆಗಳು ನಾಡಿಗೆ ನುಗ್ಗಿ ಅಮಾಯಕರ ಮಾರಣ ಹೋಮ ನಡೆಸುವಾಗ ಈ ಅರಣ್ಯ ಸಂಚಾರಿ ದಳದ ಸಿಬ್ಬಂದಿ ಸಿನಿಮೀಯ ರೀತಿಯಲ್ಲಿ ರೋಚಕ ಕಾರ್ಯಾಚರಣೆ ನಡೆಸಿ ಆ ಹುಲಿ–ಚಿರತೆಗಳನ್ನು ಸೆರೆಹಿಡಿಯುವುದಿಲ್ಲವೇಕೆ?

ವನ್ಯಮೃಗಗಳನ್ನು ಬೇಟೆಯಾಡುವ ಮಾನವರನ್ನು ಸಿನಿಮೀಯ ರೀತಿಯಲ್ಲಿ ರೋಚಕ ಕಾರ್ಯಾಚರಣೆ ನಡೆಸಿ ಬಂಧಿಸುವ ಅರಣ್ಯ ಸಂಚಾರಿ ದಳದ ಸಿಬ್ಬಂದಿ ನರಭಕ್ಷಕ ಮೃಗಗಳನ್ನು ಸೆರೆಹಿಡಿಯಲು ನಾಟಕೀಯ ಕಾರ್ಯಾಚರಣೆ ನಡೆಸುವುದೇಕೆ? ವನ್ಯಮೃಗಗಳನ್ನು ಮಾನವರಿಂದ ರಕ್ಷಿಸಲು ವನ್ಯಮೃಗ ಸಂರಕ್ಷಣಾ ಕಾಯಿದೆ ಇದೆ.ವನ್ಯಮೃಗ ಸಂರಕ್ಷಣಾಧಿಕಾರಿಗಳಿದ್ದಾರೆ. ಅರಣ್ಯಾಧಿಕಾರಿಗಳಿದ್ದಾರೆ. ಸರಕಾರವಿದೆ.ನ್ಯಾಯಾಲಯವಿದೆ. ಆದರೆ....ಮಾನವರನ್ನು ವನ್ಯಮೃಗಗಳಿಂದ ರಕ್ಷಿಸಲು ಯಾವ ಕಾಯಿದೆಯೂ ಇಲ್ಲ. ಸಂರಕ್ಷಣಾಧಿಕಾರಿಯೂ ಇಲ್ಲ. ನ್ಯಾಯಾಲಯವೂ ಇಲ್ಲ. ಇದು ವಿಪರ್ಯಾಸವಲ್ಲವೇ?

–ಪಿ.ಜೆ.ರಾಘವೇಂದ್ರ ನ್ಯಾಯವಾದಿ ಮೈಸೂರು



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ತುಳುನಾಡಲ್ಲೊಂದು ಸುತ್ತು....







ದಕ್ಷಿಣ ಕನ್ನಡ ಎಂದು ಕರೆಸಿಕೊಳ್ಳುವ ತುಳುನಾಡು ತನ್ನದೇ ಆದ ಹಲವಾರು ವೈಶಿಷ್ಟ್ಯಗಳನ್ನು ಒಳಗೊಂಡು ಸ್ವಂತಿಕೆಯನ್ನು ಮೆರೆಯುತ್ತಿರುವ ನಾಡು. ಇದು, ಇಲ್ಲಿನ ಜನ, ಸಂಸ್ಕೃತಿ, ಭಾಷೆ, ಊಟ, ಆಚಾರ–ವಿಚಾರಗಳಲ್ಲದೆ ತನ್ನ ಅಸಂಖ್ಯಾತ ದೇವಾಲಯಗಳಿಗೂ ಹೆಸರಾಗಿದೆ.

ಸಾಮಾನ್ಯವಾಗಿ ದಕ್ಷಿಣ ಕನ್ನಡ ಎಂದೊಡನೆ ಥಟ್ಟನೆ ನೆನಪಾಗುವುದು ಉಡುಪಿಯ ಶ್ರೀಕೃಷ್ಣನ ದಿವ್ಯ ಸಾನಿಧ್ಯ. ಭಾರತದಿಂದ, ವಿದೇಶದಿಂದ ತನ್ನ ಅಸಂಖ್ಯಾತ ಭಕ್ತರನ್ನು ಆಕರ್ಷಿಸುತ್ತಲೇ ಇರುವ ಆ ಪುಟ್ಟ ಬಾಲಮೂರ್ತಿಯ ರೂಪಕ್ಕೆ, ಜೀವಂತ ಎನಿಸುವ ಕಣ್ಣುಗಳಿಗೆ, ಮೃದು ಮುಗುಳುನಗೆಗೆ, ನಿಂತ ಭಂಗಿಗೆ ಮರುಳಾಗದವರು ಯಾರು? ಪ್ರತಿನಿತ್ಯ ಬದಲಾಗುವ ಅವನ ಅಲಂಕಾರವನ್ನು ನೋಡುವುದೇ ಕಣ್ಣುಗಳಿಗೆ ಒಂದು ಹಬ್ಬ. ಅದರ ಹಿಂದಿರುವ ಅದ್ಭುತ ಕಲಾತ್ಮಕ ಮನಸ್ಸುಗಳಿಗೆ ಶಿರ ಬಾಗಲೇಬೇಕು.

ಎರಡು ವರುಷಗಳಿಗೆ ಒಮ್ಮೆ ಆಗುವ ಶ್ರೀ ಕೃಷ್ಣ ಮಠದ ಪೀಠದ ಪೂಜೆ–ಆಡಳಿತದ ಬದಲಾವಣೆಯು 'ಪರ್ಯಾಯ' ಎಂದು ಕರೆಸಿಕೊಳ್ಳುತ್ತದೆ. ಉಡುಪಿಯ ಅಷ್ಟ ಮಠಗಳು ಇದನ್ನು ನಡೆಸಿಕೊಂಡು ಹೋಗುವಂತೆ ಒಂದು ಅಚ್ಚುಕಟ್ಟಾದ ಕ್ರಮವನ್ನು ಅರ್ಥಾತ್ ವ್ಯವಸ್ಥೆಯನ್ನು ಹಾಕಿಕೊಟ್ಟವರು ಸೋದೆಯ ಪೀಠಾಧಿಪತಿಗಳಾಗಿದ್ದ ಶ್ರೀ ವಾದಿರಾಜರು ಎಂಬುದು ಇತಿಹಾಸ. ಇದೀಗ ಉಡುಪಿಯು ಮೈಕೊಡವಿಕೊಂಡು ತನ್ನ ಮುಂದಿನ ಪರ್ಯಾಯದ ಸಿದ್ಧತೆಗೆ ಅಣಿಯಾಗುತ್ತಿದೆ, ಸಿಂಗಾರಗೊಳ್ಳುತ್ತಿದೆ. ಇಡೀ ಊರಿನಲ್ಲಿ ಸಂತಸದ, ಸಂಭ್ರಮದ ವಾತಾವರಣ ತುಂಬಿದೆ.

ಆಳೂಪರು, ವಿಜಯನಗರದ ಅರಸರು, ಕೆಳದಿಯ ನಾಯಕರಿಂದ ಹಿಡಿದು ಹೈದರಾಲಿ ಮತ್ತು ಟಿಪ್ಪು ಸುಲ್ತಾನನವರೆಗೆ ಈ ತುಳುನಾಡನ್ನು ಆಳಿದ ರಾಜ ವಂಶದವರು ಮತ್ತು ಅರಸುಗಳು ಇದ್ದಾರೆ. ಬಿಲ್ಲವರು, ಮೊಗೇರರು, ನಾಡವರು, ನಾಯಕರು, ಬ್ರಾಹ್ಮಣರು, ಜೈನರು ಮುಂತಾದ ಅನೇಕ ರೀತಿಯ ಜನ ತಲತಲಾಂತರದಿಂದ ಇಲ್ಲಿ ನೆಲೆಸಿ, ಇಲ್ಲಿನ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದ್ದಾರೆ. ಸಾಮಾನ್ಯವಾಗಿ ಆಡುವ ಭಾಷೆ ತುಳು ಮತ್ತು ಕನ್ನಡ. ಭತ್ತ, ಅಡಿಕೆ, ತೆಂಗು ಇಲ್ಲಿ ಹೆಚ್ಚಾಗಿ ಬೆಳೆಯಲಾಗುತ್ತದೆ.

ಗಣೇಶ, ಈಶ್ವರ, ಕೃಷ್ಣ ಮತ್ತು ದುರ್ಗೆಯನ್ನು ಹೆಚ್ಚಾಗಿ ಆರಾಧಿಸುವುದನ್ನು ಕಾಣಬಹುದು. ನಾಗಾರಾಧನೆ, ದೈವ ಪೂಜೆ–ಭೂತಾರಾಧನೆ, ಶಕ್ತಿ ಪೂಜೆಯೂ ಈ ನೆಲದ ಒಂದು ಅವಿಭಾಜ್ಯ ಅಂಗವೇ ಆಗಿದೆ. ತುಳು ಪಾಡ್ದನಗಳು ಈ ಸಿರಿ ಸಂಸ್ಕೃತಿಯ ಅದ್ಭುತ ಕೊಡುಗೆ. ದಕ್ಷಿಣ ಕನ್ನಡದ ಅನೇಕ ಊರುಗಳಲ್ಲಿ ಕಂಡುಬರುವ ಹಲವಾರು ಪುರಾತನ ಜೈನ ಬಸದಿಗಳು ಇಲ್ಲಿ ಜೈನರ ಪ್ರಾಬಲ್ಯವೂ ಇತ್ತು ಎಂಬುದನ್ನು ತೋರಿಸುತ್ತದೆ. ಸಮುದ್ರ ತೀರದಿಂದ ತಂದು ಶ್ರೀ ಕೃಷ್ಣನನ್ನು ಉಡುಪಿಯಲ್ಲಿ ಪ್ರತಿಷ್ಠಾಪಿಸಿದ ಮಧ್ವಾಚಾರ್ಯರು ಹುಟ್ಟಿದ ಪಾಜಕ ಕ್ಷೇತ್ರವೂ ಇಲ್ಲಿಯೇ ಇದೆ.

> “ಬಿಲ್ಲವರು, ಮೊಗೇರರು, ನಾಡವರು, ನಾಯಕರು, ಬ್ರಾಹ್ಮಣರು, ಜೈನರು ಮುಂತಾದ ಅನೇಕ ರೀತಿಯ ಜನ ತಲತಲಾಂತರದಿಂದ ಇಲ್ಲಿ ನೆಲಸಿ, ಇಲ್ಲಿನ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದ್ದಾರೆ. ಸಾಮಾನ್ಯವಾಗಿ ಆಡುವ ಭಾಷೆ ತುಳು ಮತ್ತು ಕನ್ನಡ. ಭತ್ತ, ಅಡಿಕೆ, ತೆಂಗು ಇಲ್ಲಿ ಹೆಚ್ಚಾಗಿ ಬೆಳೆಯಲಾಗುತ್ತದೆ. ಗಣೇಶ, ಈಶ್ವರ, ಕೃಷ್ಣ ಮತ್ತು ದುರ್ಗೆಯನ್ನು ಹೆಚ್ಚಾಗಿ ಆರಾಧಿಸುವುದನ್ನು ಕಾಣಬಹುದು. ನಾಗಾರಾಧನೆ, ದೈವ ಪೂಜೆ–ಭೂತಾರಾಧನೆ, ಶಕ್ತಿ ಪೂಜೆಯೂ ಈ ನೆಲದ ಒಂದು ಅವಿಭಾಜ್ಯ ಅಂಗವೇ ಆಗಿದೆ. ತುಳು ಪಾಡ್ದನಗಳು ಈ ಸಿರಿ ಸಂಸ್ಕೃತಿಯ ಅದ್ಭುತ ಕೊಡುಗೆ.

ಸಾಮಾನ್ಯವಾಗಿ ಉಡುಪಿಗೆ ಹೋಗಿ, ಶ್ರೀಕೃಷ್ಣನ ದರುಶನವನ್ನು ಮಾತ್ರ ಮಾಡಿ ಹಿಂದಿರುಗುವವರೇ ಹೆಚ್ಚು. ಆದರೆ, ಇಲ್ಲಿ ನೋಡಬೇಕಾದ ಐತಿಹಾಸಿಕ, ಪೌರಾಣಿಕ ಮಹತ್ವದ ಸ್ಥಳಗಳು ಬಹಳಷ್ಟು ಇವೆ. ನೀಲಾವರ, ಬ್ರಹ್ಮಾವರ, ಸಾಲಿಗ್ರಾಮ, ಕೋಟೇಶ್ವರ, ಬೈಂದೂರು, ಬಾರಕೂರು, ಕುಂಜಾರು, ಉಂಡಾರು, ಚೊಕ್ಕಾಡಿ, ಉಚಿಲ, ಎಲ್ಲೂರು, ಪಡುಬಿದ್ರಿ, ಕುಂದಾಪುರ ಹೀಗೆ ಹತ್ತು ಹಲವು ಊರುಗಳಲ್ಲಿ ಒಂದೊಂದಕ್ಕೂ ಅದರದೇ ಕುತೂಹಲಕರ ಇತಿಹಾಸ, ಸ್ಥಳ ಪುರಾಣ ಮತ್ತು ಮಹತ್ವಗಳಿವೆ. ಒಂದೊಂದು ಊರಿನಲ್ಲಿಯೂ ಪುರಾತನವಾದ, ಇತ್ತೀಚೆಗೆ ನಿರ್ಮಿತವಾದ ಗುಡಿ ಗೋಪುರಗಳಿವೆ.

ನೀವು ಇತಿಹಾಸ ಪ್ರಿಯರಾಗಿದ್ದರೂ ಸರಿ ಅಥವಾ ಆಸ್ತಿಕರಾಗಿದ್ದರೂ ಸರಿ, ನಿಮ್ಮ ಸಮಯ ಮತ್ತು ಜೇಬಿಗೆ ಅನುಗುಣವಾಗಿ ಇಲ್ಲಿ ಉತ್ತರ, ದಕ್ಷಿಣದ ಉದ್ದಕ್ಕೂ ಹರಡಿರುವ ಊರುಗಳಲ್ಲಿ ಕೆಲವನ್ನಾದರೂ ನಿಮ್ಮ ಪ್ರವಾಸಕ್ಕೆ ಸೇರಿಸಿಕೊಳ್ಳಬಹುದು. ಇಲ್ಲವೇ ಕಡಲಪ್ರಿಯರಾಗಿದ್ದರೆ, ಮಲ್ಪೆಯ ಕಿನಾರೆಯಲ್ಲಿ ಮೈಚಾಚಿ ಸೂರ್ಯಾಸ್ತವನ್ನು ನೋಡುತ್ತಾ ವಿಹರಿಸಬಹುದು.

ಒಂದುವೇಳೆ ನೀವು ಅಧ್ಯಯನ ಪ್ರಿಯರಾಗಿದ್ದಲ್ಲಿ, ನೀವು ಭೇಟಿ ನೀಡಲೇಬೇಕಾದ ಸ್ಥಳಗಳು ಎಂದರೆ ಮಣಿಪಾಲದ ಅಸಂಖ್ಯಾತ ಶಿಕ್ಷಣ ಸಂಸ್ಥೆಗಳು ಮತ್ತು ಉಡುಪಿಯ ಎಂ.ಜಿ.ಎಂ ಕಾಲೇಜಿನಲ್ಲಿ ಇರುವ ರೀಜನಲ್ ರಿಸರ್ಚ್ ಸೆಂಟರ್. ಉಳಿದುಕೊಳ್ಳಲು ನಿಮಗೆ ಉಡುಪಿಯ ಉದ್ದಗಲಕ್ಕೂ ಅತಿಥಿ ಗೃಹಗಳು, ತಂಗುದಾಣಗಳು, ಹೋಟೆಲುಗಳು ಲಭ್ಯ. ಇಲ್ಲಿನ ದೇವಳಗಳ ಮತ್ತೊಂದು ವಿಶೇಷ ಎಂದರೆ, ಬಹಳಷ್ಟು ದೇಗುಲಗಳಲ್ಲಿ ಬರುವ ಭಕ್ತರಿಗೆ ಉಚಿತ ಊಟದ ವ್ಯವಸ್ಥೆ ಇರುತ್ತದೆ. ಹೊಟ್ಟೆತುಂಬಾ ಉಣಬಹುದು. ಬೇರೆ ಬೇರೆ ಅಂದರೆ, ಸುತ್ತಮುತ್ತಲ ಕ್ಷೇತ್ರಗಳಿಗೆ ಹೋಗಲು ಬೇಕಾ ದಷ್ಟು ವಾಹನ ಸೌಲಭ್ಯವೂ ಇದೆ. ನಿಮ್ಮ ಅನುಕೂಲಕ್ಕೆ ತಕ್ಕಂತೆ ನೀವು ಆಯ್ಕೆ ಮಾಡಿಕೊಳ್ಳಬಹುದು.

ಪ್ರಮುಖವಾದ ದೇವಳಗಳೆಂದರೆ, ನೀಲಾವರದ ಮಹಿಷಮರ್ದಿನಿ, ಬ್ರಹ್ಮಾವರದ ಮಹಾಲಿಂಗೇಶ್ವರ, ಸಾಲಿಗ್ರಾಮದ ಗುರು ನರಸಿಂಹ, ಕೋಟೇಶ್ವರದ ಕೋಟಿ ಲಿಂಗೇಶ್ವರ, ಬೈಂದೂರಿನ ಸೇನೇಶ್ವರ, ಕುಂಜಾರಿನ ದುರ್ಗೆ, ಉಂಡಾರಿನ ವಿಷ್ಣು, ಉಚಿಲದ ಮಹಾಲಕ್ಷ್ಮಿ, ಎಲ್ಲೂರಿನ ವಿಶ್ವೇಶ್ವರ, ಪಡುಬಿದ್ರಿಯ ಗಣೇಶ ಮತ್ತು ಮಹಾಲಿಂಗೇಶ್ವರ, ಬಾರಕೂರಿನ ಏಕನಾಥೇಶ್ವರಿ, ಬನ್ನಿ ಮಹಾಕಾಳಿ ಮತ್ತು ಜೈನ ಬಸದಿಗಳು, ಆನೆಗುಡ್ಡೆಯ ಗಣೇಶ, ಕುಂಭಾಸಿಯ ಚಂಡಿಕಾ ದುರ್ಗ ಪರಮೇಶ್ವರಿ, ಅಂಬಲಪಾಡಿಯ ಮಹಾಕಾಳಿ ಮತ್ತು ಜನಾರ್ಧನ, ಬನ್ನಂಜೆಯ ಅತಿ ಎತ್ತರದ ಶನಿ ಗುಡಿ ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ.

ಕ್ರಮಬದ್ಧ ಪೂಜೆಗಳನ್ನು ಒಳಗೊಂಡಂತಹ ದೇವಾಲಯಗಳಲ್ಲಿ ವಾದ್ಯ ಸೇವೆ ಅಥವಾ ಸಂಗೀತ ಸೇವೆಯೂ ಇರುತ್ತದೆ. ಅಲ್ಲಿ ಕಂಡುಬರುವ ಮತ್ತೊಂದು ಗಮನಾರ್ಹ ಸಂಗತಿ ಎಂದರೆ, ದೇವಾಲಯದ ವಾದ್ಯಗಳಲ್ಲಿ ಸ್ಯಾಕ್ಸೊಫೋನಿನ ಬಳಕೆ! (ಬಯಲು ಸೀಮೆಯಲ್ಲಿ ದೇವಾಲಯಗಳಲ್ಲಿ ಇದನ್ನು ಕಾಣಲಾಗುವುದಿಲ್ಲ). ಈ ವಿದೇಶೀ ವಾದ್ಯವನ್ನು ಕರ್ನಾಟಕ ಶಾಸ್ತ್ರೀಯ ಸಂಗೀತಕ್ಕೆ ಅಳವಡಿಸಿ, ಪ್ರಚಾರಕ್ಕೆ ತಂದ ಖ್ಯಾತಿ ದಿವಂಗತ ವಿದ್ವಾನ್ ಕದ್ರಿ ಗೋಪಾಲ ನಾಥ್ ಅವರಿಗೇ ಸಲ್ಲಬೇಕು.

ಪ್ರವಾಸೋದ್ಯಮವು ಅತೀ ಪ್ರಾಮುಖ್ಯತೆಯನ್ನು ಪಡೆದಿರುವ ಊರುಗಳಲ್ಲಿ ಸಹಜವಾಗಿಯೇ ವ್ಯಾಪಾರಿಗಳ ಸಮೂಹ ದೊಡ್ಡದಾಗಿರುತ್ತದೆ. ದೇವಾಲಯದ ಆಜುಬಾಜಿನಲ್ಲಿ ಇವರ ವಹಿವಾಟು ಜೋರಾಗಿರುತ್ತದೆ. ಉಡುಪಿಯಲ್ಲಿ ಕಂಡುಬರುವಷ್ಟು ಜನಸಂದಣಿ, ನೂಕು ನುಗ್ಗಲು ಇನ್ನಿತರ ಸ್ಥಳಗಳಲ್ಲಿ ಇರುವುದಿಲ್ಲ. ಅಪ್ಪಟ ಕನ್ನಡವನ್ನು ಸ್ವಚ್ಛವಾಗಿ ಮಾತನಾಡುವ ಜನ ಇಲ್ಲಿಯ ಸ್ಥಳೀಕರು. ದಕ್ಷಿಣ ಕನ್ನಡ ಜಿಲ್ಲೆಗಳ ಕನ್ನಡಕ್ಕೂ, ಉತ್ತರ ಕರ್ನಾಟಕದ ಕನ್ನಡಕ್ಕೂ, ಬಯಲು ಸೀಮೆಯ ಕನ್ನಡಕ್ಕೂ ಇರುವ ವ್ಯತ್ಯಾಸವು ಕಿವಿಗಳಿಗೆ ಥಟ್ಟನೆ ಗೊತ್ತಾಗುತ್ತದೆ! ಪೂಜಾರಿ, ಬೈದ್ಯ, ಉಪಾಧ್ಯಾಯ, ಭಟ್ಟ, ಅಜಿಲ, ಬಲ್ಲಾಳ, ಹೆಗ್ಗಡೆ, ಗೌಂಡ, ಕುಡುವ, ಶೆಟ್ಟಿ, ಮುಳಿಯ, ಪ್ರಭು, ಕೆದಿಲ, ಸುವರ್ಣ, ಅಡಿಗ, ಹಂಡೆ, ಕೊಡಚ, ಕಿಣಿ, ಅಧಿಕಾರಿ, ಕಂಬಳಿ ಇವೆಲ್ಲ ಏನೆಂದುಕೊಂಡಿರಿ? ತುಳು ನಾಡಿನ ಜನರ ವಿವಿಧ ಅಡ್ಡ ಹೆಸರು ಅಥವಾ ಸರ್‌ನೇಮ್‌ಗಳು!

ವಿಬಿ ಜಿ–ರಾಮ್–ಜಿ ವಿರುದ್ಧ ದೇಶಾದ್ಯಂತ ಕಾಂಗ್ರೆಸ್ ಹೋರಾಟ

ನವದೆಹಲಿ: ಕೇಂದ್ರ ಸರ್ಕಾರ ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆ(ಮನ್ರೇಗಾ) ಬದಲಿಗೆ ವಿಬಿ ಜಿ– ರಾಮ್– ಜಿ ಕಾಯ್ದೆ ಜಾರಿ ಮಾಡಿರುವುದರ ವಿರುದ್ಧ ಕಾಂಗ್ರೆಸ್ ಪಕ್ಷ ದೇಶಾದ್ಯಂತ ಮನ್ರೇಗಾ ಬಚಾವೋ ಸಂಗ್ರಾಮ ಹೋರಾಟವನ್ನು ಆರಂಭಿಸಿದೆ.



ಫೆ.25ರ ತನಕ 45 ದಿನಗಳ ಕಾಲ ದೇಶಾದ್ಯಂತ ಪ್ರತಿಭಟನೆ ನಡೆಸಲು ಉದ್ದೇಶಿಸಿದ್ದು, ಶನಿವಾರ ಎಲ್ಲಾ ಜಿಲ್ಲೆಗಳಲ್ಲಿ ಸುದ್ದಿಗೋಷ್ಠಿ ನಡೆಸುವ ಮೂಲಕ ಹೋರಾಟಕ್ಕೆ ಚಾಲನೆ ನೀಡಲಾಗಿದೆ.

ವಿಬಿ ಜಿ– ರಾಮ್– ಜಿ ಕಾಯ್ದೆಯನ್ನು ರದ್ದುಗೊಳಿಸಬೇಕು. ಮನ್ರೇಗಾ ಅನ್ನು ಅದರ ಮೂಲ ರೂಪದಲ್ಲಿ ಹಕ್ಕು–ಆಧಾರಿತ ಕಾನೂನಾಗಿ ಮರುಸ್ಥಾಪಿಸಬೇಕು ಎಂಬುದು ವಿಪಕ್ಷಗಳ ಪ್ರಮುಖ ಬೇಡಿಕೆಯಾಗಿದೆ.

ಸಂಸತ್ತಿನ ಚಳಿಗಾಲದ ಅಧಿವೇಶನ ದಲ್ಲಿ ಮನ್ರೇಗಾವನ್ನು ರದ್ದುಗೊಳಿಸಿ ಅದರ ಬದಲಿಗೆ ವಿಬಿ–ಜಿ ರಾಮ್ ಜಿ ಕಾಯ್ದೆ ಜಾರಿಗೆ ತಂದ ವಿಧಾನವನ್ನು ವಿರೋಧಿಸಿ, ಜ.11 ರಂದು ಜಿಲ್ಲಾ ಕೇಂದ್ರಗಳಲ್ಲಿ ಅಹೋರಾತ್ರಿ ಉಪವಾಸ ಹಾಗೂ ಸಾಂಕೇತಿಕ ಪ್ರತಿಭಟನೆ ನಡೆಸ ಲಾಗುತ್ತದೆ. ಮೋದಿ ಸರ್ಕಾರ ಬುಲ್ಡೋಜರ್ ಧ್ವಂಸದಿಂದ ಕಸಿದುಕೊಂಡಿರುವ ಮನ್ರೇಗಾ ಕೆಲಸ, ಜೀವನೋಪಾಯ ಮತ್ತು ಹೊಣೆಗಾರಿಕೆಯ ಹಕ್ಕುಗಳನ್ನು ಮರುಸ್ಥಾಪಿಸುವವರೆಗೆ ಈ ಹೋರಾಟ ಮಾಡಲು ಕಾಂಗ್ರೆಸ್ ಬದ್ಧವಾಗಿದೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ತಿಳಿಸಿದ್ದಾರೆ.

ಜ.12 ರಿಂದ 29ರವರೆಗೆ ಎಲ್ಲಾ ಗ್ರಾಮ ಪಂಚಾಯ್ತಿಗಳಲ್ಲಿ ಜನಸಂಪರ್ಕ ಕಾರ್ಯಕ್ರಮ ನಡೆಯಲಿದ್ದು, ಜ.30 ರಂದು ವಾರ್ಡ್ ಮಟ್ಟದ ಶಾಂತಿಯುತ ಧರಣಿ ಸತ್ಯಾಗ್ರಹ ಆಯೋಜಿಸಲಾಗಿದೆ. ಫೆ7 ರಿಂದ 15ರವರೆಗೆ ರಾಜ್ಯ ಮಟ್ಟದ ವಿಧಾನ ಸಭೆಗಳಿಗೆ ಮುತ್ತಿಗೆ ಹಾಕಲಾಗುತ್ತಿದ್ದು, ಫೆ.16 ಮತ್ತು 25ರ ನಡುವೆ ನಾಲ್ಕು ಪ್ರಮುಖ ರ್‍ಯಾಲಿಗಳನ್ನು ನಡೆಸಲಾಗುವುದು ಎಂದು ಪಕ್ಷ ತಿಳಿಸಿದೆ.

ಇಂದು ಶಾಲಾ ವಾರ್ಷಿಕೋತ್ಸವ

ಮೈಸೂರು: ಮೈಸೂರಿನ ಪೂರ್ಣ ಪ್ರಜ್ಞಾ ವಿದ್ಯಾಕೇಂದ್ರದ ಶಾಲಾ ವಾರ್ಷಿಕೋತ್ಸವ ಸಮಾರಂಭವನ್ನು ಆದಿಶಕ್ತಿ ಬಂದಂತಮ್ಮ ಕಾಳಮ್ಮ ಸಮುದಾಯ ಭವನದಲ್ಲಿ ಜ.11ರ ಸಂಜೆ 5ಕ್ಕೆ ಆಯೋಜಿಸಲಾಗಿದೆ. ಶಾಸಕ ಟಿ.ಎಸ್.ಶ್ರೀವತ್ಸ ಸಮಾರಂಭ ಉದ್ಘಾಟಿಸಲಿದ್ದು, ನಾಗರಿಕ ವೇದಿಕೆ ಕಾರ್ಯಾಧ್ಯಕ್ಷ ಕೆ.ಆರ್.ಶ್ರೀರಂಗಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ. ಏಕಲವ್ಯ ಪ್ರಶಸ್ತಿ ಪುರಸ್ಕೃತರೂ ಆದ ಅಂತಾರಾಷ್ಟ್ರೀಯ ಕ್ರೀಡಾಪಟು ರೀನಾ ಜಾರ್ಜ್ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ವೇದಿಕೆಯ ಪುಟ್ಟಸ್ವಾಮಿ, ಶ್ರೀಕಾಂತ್, ಲೋಕೇಶ್ ಉಪಸ್ಥಿತರಿರುವರು.

ಬಹುರೂಪಿ ಅಂಗವಾಗಿ ಬೀದಿ ನಾಟಕೋತ್ಸವ; ಮೈಮ್ ರಮೇಶ್ ಚಾಲನೆ

ಮೈಸೂರು,ಜ.10(ಎಂಟಿವೈ)– ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ ಅಂಗವಾಗಿ ಬೀದಿ ನಾಟಕೋತ್ಸವಕ್ಕೆ ಹಿರಿಯ ರಂಗಕರ್ಮಿ ಮೈಮ್ ರಮೇಶ್ ಶನಿವಾರ ಚಾಲನೆ ನೀಡಿದರು.

ಮೈಸೂರಿನ ಚಿಕ್ಕಗಡಿಯಾರದ ಬಳಿ ರಂಗಾಯಣ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮೈಸೂರಿನ ರಂಗಾಯಣದ ಬಹುರೂಪಿ ನಾಟಕೋತ್ಸವಕ್ಕೆ ಬೆಳ್ಳಿ ಹಬ್ಬದ ಸಂಭ್ರಮ. ಈ ಸಾಲಿನ ಬಹರೂಪಿ ನಾಟಕೋತ್ಸವವನ್ನು 'ಬಹುರೂಪಿ ಬಾಬಾ ಸಾಹೇಬ್ – ಸಮತೆಯೆಡೆಗೆ ನಡಿಗೆ' ಶೀರ್ಷಿಕೆಯಡಿ ನಡೆಸಲಾಗುತ್ತಿದೆ. ಇಂದಿನ ಯುವ ಪೀಳಿಗೆಗೆ, ಮಕ್ಕಳಿಗೆ ಡಾ.ಅಂಬೇಡ್ಕರ್, ಸಮಾನತೆಯ ಸಮಾಜದ ಬಗ್ಗೆ ಅರಿವಿಲ್ಲ. ಈ ಹಿನ್ನೆಲೆಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ವಿಚಾರಧಾರೆ, ಸಂವಿಧಾನದ ಮೌಲ್ಯಗಳು ಹಾಗೂ ಮಾನವೀಯತೆಯ ಸಂದೇಶಗಳನ್ನು ಬೀದಿ ನಾಟಕದ ಮೂಲಕ ಜನರಿಗೆ ತಲುಪಿಸುವ ಪ್ರಯತ್ನ ಮಾಡಲಾಗುತ್ತಿದೆ. ಯಾವುದೇ ಸಂದೇಶವನ್ನು ಜನರಿಗೆ ಅತ್ಯಂತ ಪರಿಣಾಮಕಾರಿಯಾಗಿ ತಿಳಿಸುವ ಮಾರ್ಗ ಬೀದಿ ನಾಟಕವಾಗಿದೆ. ಈ ಹಿನ್ನೆಲೆಯಲ್ಲಿ ಬಹುರೂಪಿ ಬೀದಿ ನಾಟಕೋತ್ಸವದಲ್ಲಿ 8 ತಂಡಗಳು ಆಗಮಿಸಿದ್ದು, ನಾಲ್ಕು ದಿನಗಳ ಕಾಲ ಪ್ರತಿದಿನ ಎರಡು ಸ್ಥಳದಲ್ಲಿ ಬೀದಿ ನಾಟಗಳನ್ನು ಪ್ರದರ್ಶಿಸಿ ಜನರಲ್ಲಿ ಜಾಗೃತಿ ಮೂಡಿಸಲಿವೆ ಎಂದರು.

ಬೀದಿ ನಾಟಕಗಳು ನಿರೀಕ್ಷೆಗೂ ಮೀರಿ ಜನರು ಹಾಗೂ ಸಮಾಜದ ಮೇಲೆ ಪರಿಣಾಮ ಬೀರುತ್ತವೆ. ಈ ಹಿನ್ನೆಲೆಯಲ್ಲಿ ಹೆಚ್ಚಾಗಿ ಆಯೋಜಿಸಬೇಕು. ಶಾಲಾ–ಕಾಲೇಜುಗಳಲ್ಲಿ ಈ ರೀತಿಯ ನಾಟಕಗಳನ್ನು ಪ್ರದರ್ಶಿಸುವ ಮೂಲಕ ವಿದ್ಯಾರ್ಥಿಗಳಿಗೆ ಅಂಬೇಡ್ಕರ್ ಮತ್ತು ಸಂವಿಧಾನದ ಬಗ್ಗೆ ಅರಿವು ಮೂಡಿಸಬೇಕಾಗಿದೆ ಎಂದರು.

ಮೈಸೂರು ಮಹಾನಗರ ಪಾಲಿಕೆ ಪರಿಸರ ಇಂಜಿನಿಯರ್ ಮೈತ್ರಿ ಮಾತನಾಡಿ, ಪ್ರಸ್ತುತದಲ್ಲಿ ಯುವಜನತೆ ಮೊಬೈಲ್ ಸೇರಿದಂತೆ ಸಾಮಾಜಿಕ ಜಾಲತಾಣಕ್ಕೆ ಮಾರು ಹೋಗಿ, ಮಿತಿ ಮೀರಿದ ಪ್ರಮಾಣದಲ್ಲಿ ಅದಕ್ಕೆ ದಾಸರಾಗುತ್ತಿದ್ದಾರೆ. ಇದು ಆತಂಕಕಾರಿ ಸಂಗತಿ. ಈ ಹಿನ್ನೆಲೆಯಲ್ಲಿ ಯುವಜನರು ಬೀದಿ ನಾಟಕಗಳ ಗಮನದಿಂದ ವೀಕ್ಷಿಸಿ, ಅದರ ಹಿನ್ನೆಲೆ ಮತ್ತು ಸಂದೇಶಗಳನ್ನು ಅರ್ಥ ಮಾಡಿಕೊಂಡು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಡಾ. ಎಂ.ಡಿ.ಸುದರ್ಶನ್ ಸೇರಿದಂತೆ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.



ಮೈಸೂರಿನ ಚಿಕ್ಕಗಡಿಯಾರದ ಬಳಿ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ ಅಂಗವಾಗಿ ಆಯೋಜಿಸಿರುವ ಬೀದಿ ನಾಟಕೋತ್ಸವಕ್ಕೆ ಶನಿವಾರ ಹಿರಿಯ ರಂಗಕರ್ಮಿ ಮೈಮ್ ರಮೇಶ್ ಚಾಲನೆ ನೀಡಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಭಾನುವಾರ 11 ಜನವರಿ 2026

ಇಂದಿನಿಂದ ಬಹುರೂಪಿ ಚಲನ ಚಿತ್ರೋತ್ಸವ; ಜನಪದ ಉತ್ಸವ

● ನಾಳೆಯಿಂದ ಬಾಬಾ ಸಾಹೇಬ್ ಶೀರ್ಷಿಕೆಯ ರಾಷ್ಟ್ರೀಯ ನಾಟಕೋತ್ಸವ ● ರಂಗಹಬ್ಬಕ್ಕೆ ಮಧುವಣಗಿತ್ತಿಯಂತೆ ಶೃಂಗಾರಗೊಂಡ ರಂಗಸ್ಥಳ ರಂಗಾಯಣ





ಮೈಸೂರು ರಂಗಾಯಣದ ಆವರಣದಲ್ಲಿ ಬಹುರೂಪಿ ನಾಟಕೋತ್ಸವಕ್ಕೆ ಭರದ ಸಿದ್ಧತೆ.

ಮೈಸೂರು, ಜ.10(ಎಂಟಿವೈ)– ಬಹುರೂಪಿ ನಾಟಕೋತ್ಸವ ಬೆಳ್ಳಿಹಬ್ಬದ ಸಂಭ್ರಮಕ್ಕೆ ಮೈಸೂರು ರಂಗಾಯಣ ಸಜ್ಜಾಗಿದ್ದು, ಬಹುರೂಪಿ ಬಾಬಾ ಸಾಹೇಬ್ ರಂಗಹಬ್ಬದ ಅಂಗವಾಗಿ ಭಾನುವಾರ (ಜ.11)ದಿಂದ ರಂಗಾಯಣದ ಆವರಣದಲ್ಲಿ ಬಹುರೂಪಿ ಚಲನಚಿತ್ರೋತ್ಸವ ಹಾಗೂ ಜನಪದ ಉತ್ಸವ ಆರಂಭವಾಗಲಿದೆ.

ಮೈಸೂರು ರಂಗಾಯಣದ ಬಹುರೂಪಿ ನಾಟಕೋತ್ಸವಕ್ಕೆ 25 ವರ್ಷ ಸಂದಿದ್ದು, ಈ ಬಾರಿ ಬೆಳ್ಳಿ ಹಬ್ಬ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವವನ್ನು 'ಬಹುರೂಪಿ ಬಾಬಾ ಸಾಹೇಬ್' ಶೀರ್ಷಿಕೆಯಡಿ ಜ.11ರಿಂದ 18ರವರೆಗೆ ನಡೆಯಲಿದೆ. ಬಹುರೂಪಿಗೆ ರಂಗಾಯಣದ ಸರ್ವ ಸನ್ನದ್ಧವಾಗಿದ್ದು, ನಾಟಕೋತ್ಸವ ನಡೆಯುವ ಭೂಮಿಗೀತ, ವನರಂಗ, ಕಲಾಮಂದಿರ, ಶ್ರೀರಂಗ, ಕಿಂದರಜೋಗಿ, ಬಿ.ವಿ.ಕಾರಂತ ರಂಗ ಚಾವಡಿ ನಾಟಕೋತ್ಸವ, ಚಲನಚಿತ್ರೋತ್ಸವ, ಜನಪದ ಉತ್ಸವ, ವಿಚಾರ ಸಂಕಿರಣ ಕಾರ್ಯಕ್ರಮಕ್ಕೆ ಸಜ್ಜಾಗಿವೆ.

ಬಹುರೂಪಿ ನಾಟಕೋತ್ಸವದ ವಿವಿಧ ಕಾರ್ಯಕ್ರಮ ವೀಕ್ಷಣೆಗೆ ವಿವಿಧೆಡೆಯಿಂದ ಅಪಾರ ಸಂಖ್ಯೆಯಲ್ಲಿ ರಂಗಾಸಕ್ತರು ಆಗಮಿಸಲಿದ್ದು, ಅವರನ್ನು ಸ್ವಾಗತಿಸಲು ರಂಗಾಯಣದ ಆವರಣದಲ್ಲಿ ಬಹುರೂಪಿಯ ಸ್ವಾಗತ ಕಮಾನು ನಿರ್ಮಿಸಲಾಗಿದೆ. ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರವನ್ನು ರಂಗಾಯಣದ ಆವರಣದಲ್ಲಿ ಪ್ರತಿಷ್ಠಾಪಿಸಲಾಗಿದ್ದು, ರಂಗಭೂಮಿಕೆಗೆ ಅನುಗುಣವಾಗಿ ರಂಗಾಯಣದ ಆವರಣವನ್ನು ಸಿಂಗರಿಸಿ, ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿದೆ. ರಂಗಹಬ್ಬಕ್ಕೆ ಕಳೆಕಟ್ಟುವಂತೆ ಕರಕುಶಲ ಮೇಳ, ಪುಸ್ತಕ ಮೇಳ ಹಾಗೂ ಫುಡ್ ಮೇಳಕ್ಕೆ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಇಂದಿನಿಂದ ಚಲನಚಿತ್ರೋತ್ಸವ: ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ ಅಂಗವಾಗಿ ನಾಳೆ (ಜ.11)ಯಿಂದ ಬಹುರೂಪಿ ರಾಷ್ಟ್ರೀಯ ಚಲನ ಚಿತ್ರೋತ್ಸವ ನಡೆಯಲಿದೆ. ನಾಳೆ ಬೆಳಗ್ಗೆ 10.30ಕ್ಕೆ ಭೂಮಿಗೀತದಲ್ಲಿ ಬರಹಗಾರ ಬರಗೂರು ರಾಮಚಂದ್ರಪ್ಪ ಚಲನಚಿತ್ರೋತ್ಸವ ಉದ್ಘಾಟಿಸಲಿದ್ದಾರೆ. ರಂಗಾಯಣದ ನಿರ್ದೇಶಕ ಸತೀಶ್ ತಿಪಟೂರು ಅಧ್ಯಕ್ಷತೆ ವಹಿಸುವ ಕಾರ್ಯಕ್ರಮದಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಡಾ.ಕೆ.ವಿ.ನಾಗರಾಜಮೂರ್ತಿ, ರಂಗಸಮಾಜದ ಸದಸ್ಯರಾದ ಲಕ್ಷ್ಮೀ ಚಂದ್ರಶೇಖರ್, ಎಂ.ಎಸ್.ಜಹಾಂಗೀರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ರಂಗಾಯಣ ಉಪನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಚಲನ ಚಿತ್ರೋತ್ಸವ ಸಂಚಾಲಕರಾದ ಬಿ.ಎನ್.ಶಶಿಕಲಾ, ಸಂಯೋಜಕ ಕೆ.ಮನು ಪಾಲ್ಗೊಳ್ಳಲಿದ್ದಾರೆ.

ಸಭಾ ಕಾರ್ಯಕ್ರಮದ ನಂತರ ಶ್ರೀರಂಗ ಸಭಾಂಗಣದಲ್ಲಿ ಮಧ್ಯಾಹ್ನ 2ರಿಂದ ಸಂಜೆ.4.30ರವರೆಗೆ ಜಬ್ಬಾರ್ ಪಟೇಲ್ ನಿರ್ದೇಶನದ ಮಲಯಾಳಂ ಭಾಷೆಯ ಡಾ.ಬಾಬಾ ಸಾಹೇಬ್ ಚಲನಚಿತ್ರ ಪ್ರದರ್ಶನಗೊಳ್ಳಲಿದೆ. ಜ.12ರಿಂದ 18ರವರೆಗೆ ಶ್ರೀರಂಗದಲ್ಲಿ ಪ್ರತಿದಿನ ಬೆಳಗ್ಗೆ 10 ಗಂಟೆ, ಮಧ್ಯಾಹ್ನ 12 ಗಂಟೆ ಹಾಗೂ ಮಧ್ಯಾಹ್ನ 2 ಗಂಟೆಗೆ ವಿವಿಧ ಭಾಷೆಗಳ ಚಲನಚಿತ್ರ ಪ್ರದರ್ಶನಗೊಳ್ಳಲಿದೆ.

ಇಂದಿನಿಂದ ಜನಪದ ಉತ್ಸವ: ಕಲಾಮಂದಿರದ ಕಿಂದರಜೋಗಿ ಆವರಣದಲ್ಲಿ ಬಹುರೂಪಿ ನಾಟಕೋತ್ಸವದ ಅಂಗವಾಗಿ ಭಾನುವಾರ(ಜ.11) ಸಂಜೆ 6ಕ್ಕೆ ಬಹುರೂಪಿ ಜನಪದ ಉತ್ಸವ ಆರಂಭಗೊಳ್ಳಲಿದೆ. ಕರ್ನಾಟಕ ಬಯಲಾಟ ಅಕಾಡೆಮಿ ಅಧ್ಯಕ್ಷ ಡಾ.ದುರ್ಗಾದಾಸ್ ಜನಪದ ಉತ್ಸವಕ್ಕೆ ಚಾಲನೆ ನೀಡಲಿದ್ದು, ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜ್, ರಂಗಭೂಮಿ ಕಲಾವಿದೆ ಡಾ.ಗೀತಾ ಸಿದ್ಧಿ, ರಂಗಸಮಾಜದ ಸದಸ್ಯ ಶಶಿಧರ್ ಭಾರಿಘಾಟ್, ಜನಪದ ಉತ್ಸವದ ಸಂಚಾಲಕರಾದ ಗೀತಾ ಮೋಂಟಡ್ಕ ಪಾಲ್ಗೊಳ್ಳಲಿದ್ದಾರೆ.

ಜ.12ಕ್ಕೆ ಬಹುರೂಪಿ ನಾಟಕೋತ್ಸವಕ್ಕೆ ಚಾಲನೆ: ಪ್ರಸಕ್ತ ಸಾಲಿನ ಬಹುರೂಪಿ ನಾಟಕೋತ್ಸವಕ್ಕೆ ಜ.12ರಂದು ಸಂಜೆ 5.30ಕ್ಕೆ ವನರಂಗದಲ್ಲಿ ಅಧಿಕೃತವಾಗಿ ಚಾಲನೆ ದೊರೆಯಲಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಬಹುರೂಪಿಗೆ ಚಾಲನೆ ನೀಡಿದರೆ, ಬಹುರೂಪಿ ರಂಗೋತ್ಸವಕ್ಕೆ ಭಾರತೀಯ ರಂಗಭೂಮಿಯ ಹಿರಿಯ ಕಲಾವಿದೆ ಹೈಸ್ನಾಂ ಸಾವಿತ್ರಿ ದೇವಿ ಚಾಲನೆ ನೀಡಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಪುಸ್ತಕ, ಕರಕುಶಲ ಮಳಿಗೆಯನ್ನು ಉದ್ಘಾಟಿಸಲಿದ್ದಾರೆ. ರಂಗಸಂಚಿಕೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಬಿಡುಗಡೆ ಮಾಡುವರು. ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಬಾಬಾ ಸಾಹೇಬ್ ಛಾಯಾಚಿತ್ರ ಪ್ರದರ್ಶನ, ಸಂಸದ ಸುನೀಲ್ ಬೋಸ್ ಚಿತ್ರಕಲಾ ಪ್ರದರ್ಶನ ಅನಾವರಣ ಮಾಡುವರು. ಶಾಸಕ ಕೆ.ಹರೀಶ್ ಗೌಡ ಅಧ್ಯಕ್ಷತೆ ವಹಿಸುವರು. ಇದೇ ವೇಳೆ ಹೈಸ್ನಾಂ ಸಾವಿತ್ರಿ ದೇವಿ ಅವರಿಗೆ ಬೆಳ್ಳಿ ಬಹುರೂಪಿ ರಂಗಗೌರವ ನೀಡಲಾಗುತ್ತದೆ.

ಚಲನಚಿತ್ರ ಪ್ರದರ್ಶನ

ಜ.11ರಂದು ಮಧ್ಯಾಹ್ನ 2 ಗಂಟೆಯಿಂದ 4.30ರ ವರೆಗೆ 'ಡಾ.ಬಾಬಾ ಸಾಹೇಬ್ ಸಾಹೇಬ್ (ಮಲಯಾಳಂ) ಚಿತ್ರ ಪ್ರದರ್ಶನವಾಗಲಿದೆ. ಜ.12ರಂದು 10 ಗಂಟೆಗೆ 'ರೂಟ್ಸ್'(ಇಂಗ್ಲಿಷ್), 12 ಗಂಟೆಗೆ 'ಇಂಡಿಯಾ ಅನ್‌ಟಚ್ಡ್ : ಸ್ಟೋರೀಸ್ ಆಫ್ ಪೀಪಲ್ ಅಪಾರ್ಟ್' (ಇಂಗ್ಲಿಷ್), 2ಗಂಟೆಗೆ 'ಫುಲೆ'(ಹಿಂದಿ) ಚಲನಚಿತ್ರ ಪ್ರದರ್ಶನವಿದೆ.

ಸಚಿವ ತಿಮ್ಮಾಪುರಗೆ ಅಭಿನಂದನೆ...



ಮೈಸೂರಿಗೆ ಆಗಮಿಸಿದ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಅವರನ್ನು ರಾಜ್ಯ ಲಿಕ್ಕರ್ ಮರ್ಚೆಂಟ್ಸ್ ಡೆವಲಪ್‌ಮೆಂಟ್ ಕೋ–ಆಪರೇಟಿವ್ ಸೊಸೈಟಿ ಅಧ್ಯಕ್ಷ ಎಸ್.ಚಂದ್ರಶೇಖರ್ ಅಭಿನಂದಿಸಿ, ಹೊಸ ವರ್ಷದ ಶುಭಾಶಯ ಕೋರಿದರು. ಈ ಸಂದರ್ಭದಲ್ಲಿ ಸೊಸೈಟಿ ನಿರ್ದೇಶಕರಾದ ಹನುಮಂತಗೌಡ, ಜಿ.ಆರ್.ಚೆನ್ನಕೇಶವ, ಪಿ.ಗೋವಿಂದರಾಜ್ ಹಾಗೂ ಎನ್.ಮಂಜುನಾಥ್ ಉಪಸ್ಥಿತರಿದ್ದರು.

ಜ.21ರಿಂದ ಮುಡುಕುತೊರೆ ಜಾತ್ರಾ ಮಹೋತ್ಸವ

ಮೈಸೂರು,ಜ.10– ಧಾರ್ಮಿಕ ದತ್ತಿ ಇಲಾಖೆ ವತಿಯಿಂದ ಮುಡುಕುತೊರೆ ಶ್ರೀ ಮಲ್ಲಿಕಾರ್ಜುನಸ್ವಾಮಿ ಬ್ರಹ್ಮರಥೋತ್ಸವದ ಜಾತ್ರಾ ಮಹೋತ್ಸವ'ವು ಜ.21ರಿಂದ' ಆರಂಭವಾಗಲಿದ್ದು, ದನಗಳ ಜಾತ್ರೆಯೂ ನಡೆಯುವುದು. ಆದರೆ, ಈಗ ಶ್ರೀ ಭ್ರಮರಾಂಬ ಸಮೇತ ಶ್ರೀ ಮಲ್ಲಿಕಾರ್ಜುನಸ್ವಾಮಿಯವರ ದೇವಾಲಯದ ಜಿರ್ಣೋದ್ಧಾರದ ಅಂಗವಾಗಿ ಮೂಲ ದೇವತೆಗಳನ್ನು ಹೊರತುಪಡಿಸಿ ದೇವಾಲಯವನ್ನು ಸಂಪೂರ್ಣ ಕಳಕರ್ಶಣೆ ಮಾಡಿ ಬಾಲಸ್ಥಾಪನೆ ಮಾಡಿದ್ದು, ದೇವಾಲಯವು ಪೂರ್ಣನಿರ್ಮಾಣವಾಗಿ ಕಳಾಪೂರ್ಣಾವಾಗುವವರೆಗೆ ಬ್ರಹ್ಮರಥೋತ್ಸವ, ಮಹೋತ್ಸವಗಳನ್ನು ನಡೆಸಲು ಆಗಮ ಶಾಸ್ತ್ರದಲ್ಲಿ ಅವಕಾಶಗಳು ಇರುವುದರಿಂದ ಕಳೆದ ವರ್ಷದಂತೆ ಈ ಭಾರಿಯು ದನಗಳ ಜಾತ್ರೆ ಮತ್ತು ಭಕ್ತರು ನಡೆಸುವ ಅರವಟ್ಟಿಗೆಗೆ ಅವಕಾಶ ಕಲ್ಪಿಸಲಾಗಿದೆ. ಭಕ್ತರಿಗೆ ದರ್ಶನಕ್ಕೆ ಮತ್ತು ಸೇವೆಗಳಿಗೆ ಈ ಬಾರಿಯು ಸೌಕರ್ಯ ಕಲ್ಪಿಸಲಾಗಿದೆ.



ಉತ್ಸವಗಳ ವಿವರ: ಜ.21 ರಂದು ಅಂಕುರಾರ್ಪಣ, 22 ರಂದು ಧ್ವಜಾರೋಹಣ, 23ರಂದು ಚಂದ್ರಮಂಡಲಾರೋಹಣ, 24ರಂದು ಅನಂತ ಪೀಠಾರೋಹಣ, 25ರಂದು ಪುಷ್ಪ ಮಂಟಪಾರೋಹಣ, 26ರಂದು ವೃಷಭಾರೋಹಣ, 27ರಂದು ಗಿರಿಜಾ ಕಲ್ಯಾಣ ಗಜಾರೋಹಣ, 28ರಂದು ಶ್ರೀಮದ್ದಿವ್ಯ ಬ್ರಹ್ಮರಥೋತ್ಸವ, 29ರಂದು ಚಿತ್ರರಥ ಶಯನೋತ್ಸವ, 30ರಂದು ಅವಭೃತ ತಿರ್ಥಸ್ನಾನ ಪುಷ್ಪ ಪಲ್ಲಕಿ ಉತ್ಸವ, 31 ರಂದು ತೆಪ್ಪೋತ್ಸವ, ಫೆಬ್ರವರಿ 1ರಂದು ಮರಿತೆಪ್ಪೋತ್ಸವ, 2 ರಂದು ಕೈಲಾಸ ವಾಹನೋತ್ಸವ, 3 ರಂದು ಮಂಟಪೋತ್ಸವ, 4 ರಂದು ಗಿರಿಪ್ರದಕ್ಷಿಣೆ, 5 ರಂದು ಪರ್ವತ ಪರಿಷೆ ಬಸವನಮಾಲೆ, 6ರಂದು ಮಹಾಭಿಷೇಕ ಶೆಟ್ಟರ ಸೇವೆ ನಡೆಯಲಿದೆ ಎಂದು ವೈದ್ಯನಾಥೇಶ್ವರ ಸ್ವಾಮಿ ಮತ್ತು ಸಮೂಹ ದೇವಾಲಯಗಳ ಕಾರ್ಯ ನಿರ್ವಾಹಕ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಾರ್ಮೋನಿಯಂ ವಾದನ...



ಮೈಸೂರಿನ ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ನಡೆಯುತ್ತಿರುವ ಶ್ರೀ ಚಾಮುಂಡೇಶ್ವರಿ ಅಮ್ಮನವರ ಕೊಠಾರೋತ್ಸವ ವೈಭವ ಕಾರ್ಯಕ್ರಮದಲ್ಲಿ ವಿದ್ವಾನ್ ಎ.ವಿ.ವಿಶ್ವನಾಥ್ ಕರ್ನಾಟಕ ಶಾಸ್ತ್ರೀಯ ಹಾರ್ಮೋನಿಯಂ ವಾದನ ಪ್ರಸ್ತುತಪಡಿಸಿದರು. ವಿದ್ವಾನ್ ಶಾಂತಕುಮಾರ್–ಮಂಡೋಲಿನ್, ವಿದ್ವಾನ್ ಜಿ.ಎಸ್.ರಾಮಾನುಜಂ–ಮೃದಂಗ, ವಿದ್ವಾನ್ ವಿ.ಎಸ್.ರಮೇಶ್–ಮೋರ್ಚಿಂಗ್‌ನಲ್ಲಿ ಸಾತ್ ನೀಡಿದರು.

ಬಾಂಗ್ಲಾದೇಶ ಹಿಂಸಾಚಾರದ ನಡುವೆ ಪಾಕ್‌ನಲ್ಲಿ ಹಿಂದೂ ಯುವ ರೈತನ ಹತ್ಯೆ



ಇಸ್ಲಾಮಾಬಾದ್: ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರ ಮೇಲೆ ಹಿಂಸಾಚಾರದ ಬೆನ್ನಲ್ಲೇ ಪಾಕಿಸ್ತಾನದ ಸಿಂದ್ ಪ್ರ್ಯಾಂತ್ಯದಲ್ಲಿ ಹಿಂದೂ ಯುವ ರೈತನೊಬ್ಬನ ಹತ್ಯೆ ನಡೆದಿದ್ದು, ಘಟನೆ ಖಂಡಿಸಿ ವ್ಯಾಪಕ ಪ್ರತಿಭಟನೆ ಭುಗಿಲೆದ್ದಿದೆ.

ಪಾಕಿಸ್ತಾನದ ಬಡಿನ್ ಜಿಲ್ಲೆಯಲ್ಲಿ ಪ್ರಭಾವಿಯಾಗಿರುವ ಭೂಮಾಲೀಕ ಸರ್ಫರಾಜ್ ನಿಜಮಾನಿ ಭೂಮಿಯ ವಿಚಾರವಾಗಿ 25 ವರ್ಷದ ಕೈಲಾಶ್ ಕೋಲ್ಹಿ ಎಂಬ ಯುವ ಹಿಂದೂ ರೈತನನ್ನು ಗುಂಡಿಟ್ಟು ಕೊಂದಿದ್ದಾನೆ. ಪೊಲೀಸ್ ದೂರಿನ ಪ್ರತಿಯ ಪ್ರಕಾರ ಜ.4ರಂದು ಬಡಿನ್ ಜಿಲ್ಲೆಯ ತಹಸಿಲ್ ತಲ್ಹಾರ್ ವ್ಯಾಪ್ತಿಯ ಪೀರು ಲಶಾರಿಯ ಗೋಥ್ ದಹೋದಲ್ಲಿ ಈ ಹತ್ಯೆ ನಡೆದಿದ್ದು, ಹಗಲು ಹೊತ್ತಿನಲ್ಲಿ ಕೊಲ್ಹಿ ಸಮೀಪಿಸಿದ ದುಷ್ಕರ್ಮಿಗಳು ಪಾಯಿಂಟ್–ಬ್ಲಾಂಕ್‌ನಲ್ಲಿ ಎದೆಗೆ ಎರಡು ಗುಂಡುಗಳನ್ನು ಹಾರಿಸಿದ್ದು, ಇದರಿಂದಾಗಿ ಸ್ಥಳದಲ್ಲೇ ಆತ ಮೃತಪಟ್ಟಿದ್ದಾನೆ ಎಂದು ತಿಳಿದುಬಂದಿದೆ.

ಘಟನೆ ಬಳಿಕ ಸಿಂಧ್ ಪ್ರಾಂತ್ಯದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ಹಿಂಸಾಚಾರವನ್ನು ಖಂಡಿಸಿ ಬಡಿನ್–ಹೈದರಾಬಾದ್ ರಾಷ್ಟ್ರೀಯ ಹೆದ್ದಾರಿ ಮತ್ತು ಬಡಿನ್–ಥಾರ್ ಕಲ್ಲಿದ್ದಲು ರಸ್ತೆಯಲ್ಲಿ ಜನರು ಬೀದಿಗಿಳಿದು ಧರಣಿ ನಡೆಸುತ್ತಿದ್ದಾರೆ. ಕೈಲಾಶ್ ಹತ್ಯೆಗೆ ನ್ಯಾಯ ಸಿಗುವವರೆಗೂ ಸ್ಥಳದಿಂದ ಕದಲುವುದಿಲ್ಲ ಎಂದು ಪಟ್ಟು ಹಿಡಿದಿದ್ದು, ಇದರಿಂದಾಗಿ ನೂರಾರು ವಾಹನಗಳು ಗಂಟೆಗಟ್ಟಲೆ ಸಾಲುಗಟ್ಟಿ ನಿಂತಿದ್ದವು.

ಅಡುಗೆ ಸಿಬ್ಬಂದಿಗೆ ಸೀರೆ ವಿತರಣೆ...



ಮೈಸೂರು ತಾಲೂಕು ಜಯಪುರ ಗ್ರಾಪಂ ವ್ಯಾಪ್ತಿಯ ಸೋಲಿಗರ ಕಾಲೋನಿ, ಗುಮಚನಹಳ್ಳಿ, ಜಯಪುರ, ಮಾವಿನಹಳ್ಳಿ, ಬರಡನಪುರ, ದಾರಿಪುರ, ಕೆಲ್ಲಹಳ್ಳಿ ಸರ್ಕಾರಿ ಶಾಲೆ, ರಾಘವೇಂದ್ರ ವಿದ್ಯಾಪೀಠ ಅನುದಾನಿತ ಶಾಲೆ ಅಡುಗೆ ಸಿಬ್ಬಂದಿಗೆ ಸಮಾಜ ಸೇವಕ ಎಸ್.ಶ್ರೀಕಾಂತ್ ಅವರ ತಂದೆ ದಿವಂಗತ ಪಿ.ಶಿವಪ್ಪ ಅವರ 25ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಸೀರೆಗಳನ್ನು ವಿತರಿಸಿದರು. ಬರಡನಪುರ ಮಹಾಂತೇಶ್ವರ ಮಠದ ಪೀಠಾಧ್ಯಕ್ಷರಾದ ಪರಶಿವಮೂರ್ತಿ ಸ್ವಾಮೀಜಿ, ಮೈಸೂರು ಗ್ರಾಮಾಂತರ ವಲಯ ಬಿಇಓ, ರಾಜ್ಯ ಸರ್ಕಾರಿ ನೌಕರರ ಸಂಘದ ಜಂಟಿ ಕಾರ್ಯದರ್ಶಿ, ಪ್ರಾಥಮಿಕ ಶಾಲೆ ಶಿಕ್ಷಕರ ಸಂಘದ ಅಧ್ಯಕ್ಷ ಡಿ.ಮಾಲೇಗೌಡ, ಡಯಟ್ ಹಿರಿಯ ಉಪನ್ಯಾಸಕಿ ನಿರ್ಮಲ, ಬಿಸಿಯೂಟ ಯೋಜನೆ ಸಹಾಯಕ ನಿರ್ದೇಶಕ ಮಹದೇವಸ್ವಾಮಿ, ಜಯಪುರ ಕ್ಲಸ್ಟರ್ ಸಂಪನ್ಮೂಲ ಅಧಿಕಾರಿ ಬಿ.ಲಲಿತಾ, ರಾಘವೇಂದ್ರ ವಿದ್ಯಾಪೀಠ ಅನುದಾನಿತ ಪ್ರೌಢಶಾಲೆ ಮುಖ್ಯಶಿಕ್ಷಕ ಬಿ.ಸಿದ್ದರಾಮು, ಜಯಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಪ್ರಭಾರ ಮುಖ್ಯಶಿಕ್ಷಕ ಕಿರಣ್‌ಕುಮಾರ್, ಸಹಶಿಕ್ಷಕರಾದ ವೆಂಕಟೇಗೌಡ, ಕೆ.ಎನ್‌ಸಿದ್ದೇಗೌಡ, ಸಿ.ಪ್ರಸನ್ನಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ಶತಾಯುಷಿ ಗೌರಮ್ಮ ನಿಧನ



ಎಚ್.ಡಿ.ಕೋಟೆ: ತಾಲೂಕಿನ ಅಂತರಸಂತೆ ಹೋಬಳಿಯ ಸತ್ತಿಗೆ ಹುಂಡಿ ದಿ.ಸಣ್ಣಪ್ಪ ಅವರ ಪತ್ನಿ, ಶತಾಯುಷಿ ಗೌರಮ್ಮ(102) ಅವರು ಶುಕ್ರವಾರ ಸಂಜೆ ನಿಧನರಾದರು. ಮೃತರು ನಂಜನಗೂಡು ತಾಲೂಕಿನ ವೆಂಕಟಗಿರಿ ಕಾಲೋನಿ ವಾಲ್ಮೀಕಿ ಬುಡಕಟ್ಟು ಗಿರಿಜನ ವಸತಿ ಶಾಲೆ ಶಿಕ್ಷಕ ಅಶೋಕ್ ಸೇರಿದಂತೆ ಮೂವರು ಪುತ್ರರು, ಓರ್ವ ಪುತ್ರಿ ಇದ್ದಾರೆ. ಅಂತ್ಯಕ್ರಿಯೆ ಗ್ರಾಮದ ಅವರ ಜಮೀನಿನಲ್ಲಿ ಶನಿವಾರ ಮಧ್ಯಾಹ್ನ ನೆರವೇರಿತು.

ಯೋಗ ಸಾಧನೆಯಿಂದ ಮನುಷ್ಯನಲ್ಲಿ ಸಾತ್ವಿಕತೆ ವೃದ್ಧಿ

ಯೋಗದ ವಿಚಾರ ಸಂಕಿರಣ ಯೋಗ ಸಂಹಿತಾದಲ್ಲಿ ಡಾ.ಹೆಚ್.ಆರ್.ನಾಗೇಂದ್ರ ಅಭಿಮತ



ಮೈಸೂರಿನ ಶ್ರೀರಾಮಕೃಷ್ಣ ವಿದ್ಯಾಕೇಂದ್ರದಲ್ಲಿ ಹಮ್ಮಿಕೊಂಡಿದ್ದ ಯೋಗದ ಪ್ರಾಚೀನ ಗ್ರಂಥಗಳ ಕುರಿತ ವಿಚಾರ ಸಂಕಿರಣ ಯೋಗ ಸಂಹಿತಾವನ್ನು ವಿವೇಕಾನಂದ ಯೋಗ ಪ್ರತಿಷ್ಠಾನದ ಅಧ್ಯಕ್ಷ ಡಾ.ಹೆಚ್.ಆರ್.ನಾಗೇಂದ್ರ ಉದ್ಘಾಟಿಸಿದರು.

ಮೈಸೂರು, ಜ. 10– ಮನುಷ್ಯನಲ್ಲಿ ಸತ್ವ, ರಜಸ್ಸು ಮತ್ತು ತಮೋಗುಣಗಳು ಅಡಕವಾಗಿದ್ದು, ಯೋಗದ ಸಾಧನೆಯಿಂದ ಅವನಲ್ಲಿ ಸಾತ್ವಿಕತೆ ವೃದ್ಧಿಸುತ್ತದೆ ಎಂದು ಬೆಂಗಳೂರಿನ ವಿವೇಕಾನಂದ ಯೋಗ ಪ್ರತಿಷ್ಠಾನದ ಅಧ್ಯಕ್ಷ ಡಾ.ಹೆಚ್.ಆರ್.ನಾಗೇಂದ್ರ ಅಭಿಪ್ರಾಯಪಟ್ಟರು.

ಮೈಸೂರಿನ ರಾಮಕೃಷ್ಣನಗರದ ಶ್ರೀರಾಮಕೃಷ್ಣ ವಿದ್ಯಾಕೇಂದ್ರದ ಶಾರದಾ ಸಭಾಂಗಣದಲ್ಲಿ ಹಿಮಾಲಯ ಪ್ರತಿಷ್ಠಾನ ಹಮ್ಮಿಕೊಂಡಿದ್ದ ಯೋಗದ ಪ್ರಾಚೀನ ಗ್ರಂಥಗಳ ಕುರಿತ ವಿಚಾರ ಸಂಕಿರಣ ಯೋಗ ಸಂಹಿತಾವನ್ನು ಉದ್ಘಾಟಿಸಿ ಮಾತನಾಡಿದರು.

ಯೋಗ ಪ್ರಾಚೀನ ಭಾರತ ಪರಂಪರೆಯ ಮಹತ್ವದ ಕೊಡುಗೆಯಾಗಿದೆ ಎಂದು ವಿವರಿಸಿದ ಅವರು, ಸಮಗ್ರ ಯೋಗಾಭ್ಯಾಸವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದರಿಂದ ರೋಗಗಳನ್ನು ತಡೆಗಟ್ಟಬಹುದು. ಪ್ರಾಚೀನ ಗ್ರಂಥಗಳ ಅಧ್ಯಯನದಿಂದ ಯೋಗದ ಶಾಸ್ತ್ರೀಯ ಜ್ಞಾನ ಲಭಿಸುತ್ತದೆ ಎಂದರು.


ಕಾರ್ಯಕ್ರಮದಲ್ಲಿ 2026ರ ಮೈಸೂರು ಯೋಗ ಪರಂಪರೆಯ ದಿನದರ್ಶಿಕೆಯನ್ನು ಬಿಡುಗಡೆಗೊಳಿಸಲಾಯಿತು.

ವೇದ ವಿಜ್ಞಾನ ಶೋಧ ಸಂಸ್ಥಾನಂನ ಅಧ್ಯಕ್ಷ ಪ್ರೊ.ರಾಮಚಂದ್ರ ಜಿ.ಭಟ್ ಅಧ್ಯಕ್ಷತೆ ವಹಿಸಿದ್ದರು. ಸಮಿತಿ ಕಾರ್ಯಾಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಶ್ರೀ ರಾಮಕೃಷ್ಣ ವಿದ್ಯಾಕೇಂದ್ರದ ಅಧ್ಯಕ್ಷ ಎಂ.ಪಾಪೇಗೌಡ, ಯೋಗಾಚಾರ್ಯರಾದ ಡಾ.ಗಣೇಶ್ ಕುಮಾರ್, ಕೆ.ಜಿ.ದೇವರಾಜ್, ಬಿ.ಪಿ.ಮೂರ್ತಿ, ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ವೆಂಕಟಕೃಷ್ಣ ಕೂಡಲಿ, ಡಾ.ರಮೇಶ್‌ಶೆಟ್ಟಿ, ಹಿಮಾಲಯ ಪ್ರತಿಷ್ಠಾನದ ಅಧ್ಯಕ್ಷ ಎನ್.ಅನಂತ ಮತ್ತಿತರರು ಉಪಸ್ಥಿತರಿದ್ದರು.

ನಂತರ ನಡೆದ ವಿಚಾರಗೋಷ್ಠಿಯಲ್ಲಿ ಭಗವದ್ಗೀತೆ ಒಂದು ಯೋಗಶಾಸ್ತ್ರ ಕುರಿತು ಪ್ರೊ.ರಾಮಚಂದ್ರ ಭಟ್, ವಿಜ್ಞಾನ ಭಿಕ್ಷುವಿನ ಯೋಗ ಸಾರ ಸಂಗ್ರಹ ಕುರಿತು ಹಿರಿಯ ಸಂಸ್ಕೃತ ವಿದ್ವಾಂಸ ಡಾ.ಹೆಚ್.ವಿ.ನಾಗರಾಜರಾವ್, ಯೋಗ ಯಜ್ಞವಲ್ಕ್ಯ ಒಂದು ಅವಲೋಕನ ಕುರಿತು ವಿದ್ವಾನ್ ಆದರ್ಶ ಯು.ಜೆ ಮತ್ತು ಯೋಗ ವಾಸಿಷ್ಠ ಕುರಿತು ವಿದ್ವಾನ್ ರಾಕೇಶ್ ಶಿವರಾಂ ವಿಚಾರ ಮಂಡಿಸಿದರು. ಹಿರಿಯ ಯೋಗಾಚಾರ್ಯರುಗಳಾದ ಎಸ್.ವಿ.ವೆಂಕಟೇಶಯ್ಯ, ಡಾ.ಎ.ಎಸ್.ಚಂದ್ರಶೇಖರ್, ಸಂಸ್ಕೃತ ವಿದುಷಿ ಡಾ.ಕೆ.ಲೀಲಾ ಪ್ರಕಾಶ್, ಆಯುರ್ವೇದ ವೈದ್ಯಾಧಿಕಾರಿ ಡಾ. ಶಶಿರೇಖ ಗೋಷ್ಠಿಗಳ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದ ನಡುವೆ ನಡೆದ ನಾದಯೋಗ ಪ್ರಾತ್ಯಕ್ಷಿಕೆಯನ್ನು ವಿದ್ವಾನ್ ವಿನಾಯಕ ಹೊನ್ನಾವರ ನಡೆಸಿಕೊಟ್ಟರು. ಸಮಾರೋಪ ಸಮಾರಂಭದಲ್ಲಿ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾ ವಿದ್ಯಾಲಯದ ಪ್ರಾಚಾರ್ಯ ಡಾ.ಶ್ರೀವತ್ಸ ಸಮಾರೋಪ ಭಾಷಣ ಮಾಡಿದರು. ಹಿರಿಯ ಆಯುರ್ವೇದ ವೈದ್ಯಾಧಿಕಾರಿ ಡಾ.ಲಕ್ಷ್ಮೀ ನಾರಾಯಣ ಶೆಣೈ, ಹಿರಿಯ ಆಯುರ್ವೇದ ತಜ್ಞ ಡಾ.ಆಂಜನೇಯಮೂರ್ತಿ, ಎಂ.ವಿ.ನಾಗೇಂದ್ರಬಾಬು, ಹರ್ಷವರ್ಧನ ಮುಂತಾದವರು ಉಪಸ್ಥಿತರಿದ್ದರು.

ಕ್ಯಾಲೆಂಡರ್ ಬಿಡುಗಡೆ...



ನಿಖಿಲ್ ಕುಮಾರಸ್ವಾಮಿ ಅಭಿಮಾನಿ ಬಳಗ ಹೊರತಂದಿರುವ 2026ನೇ ಸಾಲಿನ ಕ್ಯಾಲೆಂಡರ್ ಅನ್ನು ಜೆಡಿಎಸ್ ಮುಖಂಡ ನಿಖಿಲ್ ಕುಮಾರಸ್ವಾಮಿ ಬಿಡುಗಡೆ ಮಾಡಿದರು. ಬಳಗದ ಅಧ್ಯಕ್ಷ ಪ್ರದೀಪ್ ಕೃಷ್ಣೇಗೌಡ, ಮಹೇಶ್, ಜೀವನ್, ಅಬಿದ್ ಹುಸೈನ್, ನಾಗರಾಜು, ರಾಮೇಗೌಡ, ಚಂದ್ರಶೇಖರ್ ಇನ್ನಿತರರಿದ್ದರು.

ವ್ಯಕ್ತಿ ಮೇಲೆ ಮಾರಣಾಂತಿಕ ಹಲ್ಲೆ; ಐವರಿಗೆ 10 ವರ್ಷ ಜೈಲು ಶಿಕ್ಷೆ

ಮೈಸೂರು: ದಾರಿ ಬಿಡುವ ವಿಚಾರವಾಗಿ ಗಲಾಟೆ ಮಾಡಿ ವ್ಯಕ್ತಿ ಮೇಲೆ ಮಾರಣಾಂತಿಕ ಹಲ್ಲೆ ಮಾಡಿದ್ದ ಐವರಿಗೆ 10 ವರ್ಷ ಸಾದ ಶಿಕ್ಷೆ ವಿಧಿಸಿ ಹುಣಸೂರಿನ 8ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ಆದೇಶ ಹೊರಡಿಸಿದೆ.

ಎಚ್.ಡಿ.ಕೋಟೆ ತಾಲೂಕಿನ ಇಟ್ನಾ ಕಾಲೋನಿಯ ಬೊಮ್ಮಸಿದ್ದನಾಯಕ ಎಂಬುವವರು ಹಲ್ಲೆಗೆ ಒಳಗಾದವರು. ಇದೇ ಕಾಲೋನಿಯ ನಿವಾಸಿಗಳಾದ ಕುಮಾರ್, ಸಿದ್ದ ನಾಯಕ, ಚೆನ್ನಕೇಶವ, ನಿಂಗನಾಯಕ, ಮಹೇಶ್ ಹಲ್ಲೆ ನಡೆಸಿದ್ದವರು. 2018ರ ಜುಲೈ 2ರಂದು ದಾರಿ ಬಿಡುವ ವಿಚಾರವಾಗಿ ಗುಂಪು ಕಟ್ಟಿಕೊಂಡು ಬಂದು ಗಲಾಟೆ ಮಾಡಿದ್ದರು. ಅಲ್ಲದೆ, ಬೊಮ್ಮನಾಯಕನಿಗೆ ರಾಡ್‌ನಿಂದ ತಲೆ ಭಾಗಕ್ಕೆ ಹಲ್ಲೆ ಮಾಡಿದ್ದರು. ಈ ಕುರಿತು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ ಎಚ್.ಡಿ.ಕೋಟೆ ಠಾಣೆ ಪೊಲೀಸರು, ಆರೋಪ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಟಿ.ಗೋವಿಂದಯ್ಯ, ಆರೋಪಗಳು ಸಾಬೀತಾಗಿದ್ದರಿಂದ ಐವರಿಗೆ ತಲಾ 10 ವರ್ಷ ಜೈಲು ಶಿಕ್ಷೆ ಮತ್ತು 42,500 ರೂ. ದಂಡ ಸಹ ವಿಧಿಸಿ ತೀರ್ಪು ಪ್ರಕಟಿಸಿದ್ದಾರೆ. ಸರ್ಕಾರಿ ಅಭಿಯೋಜಕ ಕೆ.ಎಂ.ಶಿವಶಂಕರಮೂರ್ತಿ ಸರ್ಕಾರದ ಪರ ವಾದ ಮಂಡಿಸಿದ್ದರು.

ಪಕ್ಕದವರ ಪ್ರೀತಿಸದವರು ಪರಮಾತ್ಮನ ಪ್ರೀತಿಸಲಾರರು...!

ಶ್ರೀ ರಾಜರಾಜೇಶ್ವರಿ ಅಕ್ಕನ ಬಳಗದ 16ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಕವಿ ಡಾ.ಜಯಪ್ಪ ಹೊನ್ನಾಳಿ ಔಚಿತ್ಯಪೂರ್ಣ ಅಭಿಮತ



ಮೈಸೂರು ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪಡೆದ ಲೇಖಕಿ ಮಂಗಳಾ ಮುದ್ದುಮಾದಪ್ಪ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಜ.10– ಸಂಘಟಿತ ಬಾಂಧವ್ಯವು ಒಡಂಬಡಿಕೆ, ನಂಬಿಕೆ, ಸ್ನೇಹ, ಪ್ರೀತಿಯಷ್ಟೇ ಅಲ್ಲ, ಇವೆಲ್ಲವುಗಳನ್ನೂ ಒಳಗೊಂಡಂತಹ ಅದೊಂದು ಸುಂದರವಾದ ಹಾಗೂ ಬಹುಮುಖ್ಯವಾಗಿ ಪರಸ್ಪರ ಗೌರವಯುತವಾದ ಸಾಮಾಜಿಕ ಪಯಣವಾಗಿದೆ ಎಂದು ಕವಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಮೈಸೂರು ನಗರ ಘಟಕದ ಅಧ್ಯಕ್ಷ ಡಾ.ಜಯಪ್ಪ ಹೊನ್ನಾಳಿ ಹೇಳಿದರು.

ಈ ಪಯಣವನ್ನು ಸುದೀರ್ಘವಾಗಿಸಲು ಪಕ್ಕದವರನ್ನು ಪ್ರೀತಿಸುವವರಿಂದ ಹಾಗೂ ಪರರೂ ತನ್ನಂತೆಯೇ ಎಂದು ಭಾವಿಸುವವರಿಂದ ಮಾತ್ರ ಸಾಧ್ಯ. ಪಕ್ಕದವರ ಪ್ರೀತಿಸದವರು ಪರಮಾತ್ಮನನ್ನೆಂತು ಪ್ರೀತಿಸಿಯಾರು, ಪಕ್ಕದವರ ಪ್ರೀತಿಸುವುದೆಂದರೆ ಅದು ಪರಮಾತ್ಮನ ಪ್ರೀತಿಸುವ ಪ್ರಾಥಮಿಕ ಹಂತವೇ ಆಗಿದೆ, ಇದನ್ನು ಉದ್ದಕ್ಕೂ ಬಸವಾದಿ ಪ್ರಮಥರು ತಮ್ಮ ಬದುಕು ಬರೆಹಗಳೆರಡರಲ್ಲೂ ನಮಗೆ ಮಾದರಿಯಾಗಿ ತೋರಿದ್ದಾರೆ ಎಂದರು.

ಮೈಸೂರಿನ ಜೆ.ಎಸ್.ಎಸ್. ಕಾನೂನು ಕಾಲೇಜಿನಲ್ಲಿ ನಡೆದ ಶ್ರೀ ರಾಜರಾಜೇಶ್ವರಿ ಅಕ್ಕನ ಬಳಗದ 16ನೇ ವಾರ್ಷಿಕೋತ್ಸವ ಸಮಾರಂಭವನ್ನು ಸಸಿಗೆ ನೀರೆರೆಯುವ ಮೂಲಕ ಉದ್ಘಾಟನೆ ಮಾಡಿ ಮಾತನಾಡುತ್ತಿದ್ದ ಅವರು, ನಮಗಿಂತ ಭಿನ್ನವಾಗಿರುವವರನ್ನು, ವಿಭಿನ್ನವಾಗಿ ಆಲೋಚಿಸುವವರನ್ನು, ವರ್ತಿಸುವವರನ್ನು ಮೊದಲು ಕಂಡಾಗ, ಹೇಗೆ ಇವರೊಂದಿಗೆ ಕೆಲಸ ಮಾಡುವುದೆಂಬ ಚಿಂತೆ ಮೂಡಿ ಕಾಡುತ್ತದೆ. ಆದರೆ ವಿಶಾಲ ಹೃನ್ಮನಸ್ಸುಗಳಿಂದ ಧನಾತ್ಮಕವಾಗಿ ಯೋಚಿಸುತ್ತಾ, ಪರಸ್ಪರ ಅರ್ಥ ಮಾಡಿಕೊಳ್ಳುತ್ತಾ ಸಾಗಿದರೆ, ಅವೇ ಭಿನ್ನತೆಗಳು ನಮ್ಮನ್ನೂ, ನಮ್ಮ ಸಂಘಟನೆಯನ್ನೂ ಬಲಶಾಲಿ ಮಾಡುತ್ತವೆ ಎಂದು ನನಗನ್ನಿಸುತ್ತಿದೆ ಎಂದರು.

ಸಮುದಾಯದ ಸಂಘಟನೆಯಲ್ಲಿ ಒಬ್ಬೊಬ್ಬರ ಮುಗಳ್ನಗೆ, ಬೆಂಬಲ, ಚಪ್ಪಾಳೆ, ಸಹಯೋಗ, ನಿರ್ದೇಶನ, ಉಪಸ್ಥಿತಿಗಳೆಲ್ಲವೂ ಮುಖ್ಯವಾಗುತ್ತವೆ. ಅಹಂ ಭಾವ ಕಳೆದು, ದಾಸೋಹಂ ಭಾವ ಬೆಳೆಸಿಕೊಂಡು ಬಿಟ್ಟರೆ, ಆ ಸಂಘಟನೆ ಜೇನುಗೂಡಾಗಿ ಬಿಡುತ್ತದೆ. ಹಾಗಾದಾಗಲೇ ಅದು ಲೋಕೋಪಕಾರಿಯಾಗಲು ಸಾಧ್ಯ ಎಂದರು.

ಈ ಸಂಘಟನೆಯಲ್ಲೂ ಬಸವಾದಿ ಶರಣರ ತೇರೆಳೆಯುವ ಹಲವರ ಜೊತೆಗೆ, ತೇರೆಳೆಯುವವರ ಕಾಲೆಳೆಯ ಹೊರಟವರೂ ಕೆಲವರಿರಬಹುದು, ಅವರನ್ನೂ ಸಹಿಸಿಕೊಂಡು, ಸರಿಪಡಿಸಿಕೊಂಡು ಮುಂದಾಳಾದವರು ಸಹನಾಶೀಲರಾಗಿ ಗುರಿಮುಟ್ಟ ಬೇಕಾಗುತ್ತದೆ. ಆ ಕೆಲಸವನ್ನು ಬಳಗದ ಗೌರವಾಧ್ಯಕ್ಷೆ ಮಾದಲಾಂಬಿಕಾ ನಿರಂಜನ ಮೂರ್ತಿಯವರೂ, ಅಧ್ಯಕ್ಷೆ ವೀಣಾ ನಂದೀಶ್ ಮೊದಲಾದವರೂ ಮಾಡುತ್ತ ಬಂದಿರುವುದರಿಂದಲೇ ಈ ಬಳಗ 16 ವಸಂತಗಳನ್ನು ಕಂಡು ಷೋಡಸಿಯಾಗಿ ಕಂಗೊಳಿಸುತ್ತಿದೆ ಎಂದು ಹೇಳಿದರು.

ದಿವ್ಯ ಸಾನ್ನಿಧ್ಯವನ್ನು ಅರಮನೆ ಪಂಚಗವಿ ಮಠದ ಶ್ರೀ ಶ್ರೀ ಕಂಠ ಸ್ವಾಮಿಗಳು ಹಾಗೂ ಚಿಲಕವಾಡಿಯ ಶ್ರೀ ಗುರು ರಾಮಯೋಗೀಶ್ವರ ಮಠದ ಶ್ರೀ ಇಮ್ಮಡಿ ಗುರುಲಿಂಗ ಸ್ವಾಮಿಗಳು ವಹಿಸಿದ್ದ ಈ ಸಮಾರಂಭದಲ್ಲಿ ಮೈಸೂರು ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪಡೆದ ಲೇಖಕಿ ಮಂಗಳಾ ಮುದ್ದುಮಾದಪ್ಪ ಅವರನ್ನು ಸನ್ಮಾನಿಸಲಾಯಿತು.

ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶೋಭಾರಾಣಿ ಜೈಪ್ರಕಾಶ್, ಬಳಗದ ಗೌರವಾಧ್ಯಕ್ಷೆ ಮಾದಲಾಂಬಿಕಾ ನಿರಂಜನ ಮೂರ್ತಿ, ಅಧ್ಯಕ್ಷೆ ವೀಣಾ ನಂದೀಶ್ ಮುಂತಾದವರಿದ್ದರು.

ಮೈಸೂರು ಮಿತ್ರ
ಭಾನುವಾರ 11 ಜನವರಿ 2026

ಇಬ್ಬರು ಅಂತರಜಿಲ್ಲಾ ಖದೀಮರ ಬಂಧನ

ಬಂಧಿತ ಆರೋಪಿಗಳಿಂದ 31.98 ಲಕ್ಷ ಮೌಲ್ಯದ ಚಿನ್ನಾಭರಣ, ಬೈಕ್ ವಶ

ಮಂಡ್ಯ, ಜ.10– ಬೈಕ್‌ಗಳಲ್ಲಿ ಬಂದು ಮಹಿಳೆಯರ ಮಾಂಗಲ್ಯ ಸರ ಅಪಹರಿಸುತ್ತಿದ್ದ ಹಾಗೂ ಮನೆಗಳ್ಳತನ ಮಾಡುತ್ತಿದ್ದ ಇಬ್ಬರು ಅಂತರ್ ಜಿಲ್ಲಾ ಖದೀಮರನ್ನು ಬಂಧಿಸಿ, 31.98 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಹಾಗೂ ಎರಡು ಬೈಕ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ಅಧೀಕ್ಷಕಿ ವಿ.ಜೆ.ಶೋಭಾರಾಣಿ ತಿಳಿಸಿದರು.

ಮೈಸೂರಿನ ಶಾಂತಿನಗರದ ನಿವಾಸಿ ಸದ್ದಾಂ ಹುಸೇನ್ ಉ.ಸದ್ದಾಂ(32) ಹಾಗೂ ರಾಜೀವ್ ನಗರದ ಸೈಯ್ಯದ್ ಅಯೂಬ್ (32) ಎಂಬವರೇ ಬಂಧಿತ ಆರೋಪಿಗಳಾಗಿದ್ದು, ಬಂಧಿತರಿಂದ 253 ಗ್ರಾಂ ಚಿನ್ನದ ಒಡವೆಗಳು, 178 ಗ್ರಾಂ ಬೆಳ್ಳಿಯ ಒಡವೆಗಳು, ಕೃತ್ಯಕ್ಕೆ ಬಳಸುತ್ತಿದ್ದ ಒಂದು ಪಲ್ಸರ್ ಬೈಕ್ ಮತ್ತು ಆಕ್ಸಿಸ್ ಬೈಕನ್ನು ವಶಕ್ಕೆ ಪಡೆದಿದ್ದು, ಇವುಗಳ ಒಟ್ಟು ಮೌಲ್ಯ 31,98,100 ರೂ.ಗಳಾಗಿದೆ ಎಂದು ಸುದ್ದಿಗೋಷ್ಠಿಯಲ್ಲಿ ಅವರು ವಿವರ ನೀಡಿದರು.

ಕಳೆದ 2025ರಂದು ಸಂಜೆ 6.15ರ ಸಮಯದಲ್ಲಿ ಮಳವಳ್ಳಿ ತಾಲೂಕು ಚಿಕ್ಕೇಗೌಡನ ದೊಡ್ಡಿ ಗ್ರಾಮದ ಮಹದೇವ ಎಂಬವರ ಪತ್ನಿ ಎಸ್.ಸರಿತಾ ಅವರು ನಡೆದುಕೊಂಡು ಹೋಗುತ್ತಿದ್ದಾಗ ಕಿರುಗಾವಲು ಸಂತೆಮಾಳದ ಕಡೆಯಿಂದ ಬೈಕ್‌ನಲ್ಲಿ ಬಂದ ಅಪರಿಚಿತ ದುಷ್ಕರ್ಮಿಗಳು 35 ಗ್ರಾಂ ತೂಕದ ಎರಡು ಎಳೆಯ ಮಾಂಗಲ್ಯ ಸರವನ್ನು ಕಿತ್ತುಕೊಂಡು ಪರಾರಿಯಾಗಿದ್ದರು. ಕಿರುಗಾವಲು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.



ಮಂಡ್ಯ ಎಸ್ಪಿ ವಿ.ಜೆ.ಶೋಭಾರಾಣಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡುತ್ತಿರುವುದು.

ಈ ಸಂಬಂಧ ಆರೋಪಿಗಳನ್ನು ಪತ್ತೆ ಹಚ್ಚಲು ಅಪರ ಪೊಲೀಸ್ ಅಧೀಕ್ಷಕರಾದ ಸಿ.ಈ.ತಿಮ್ಮಯ್ಯ, ಗಂಗಾಧರಸ್ವಾಮಿ, ಡಿವೈಎಸ್ಪಿ ಯಶವಂತ್‌ಕುಮಾರ್ ಅವರ ಮಾರ್ಗದರ್ಶನದಲ್ಲಿ ಹಲಗೂರು ವೃತ್ತ ನಿರೀಕ್ಷಕ ಶ್ರೀಧರ್ ನೇತೃತ್ವದಲ್ಲಿ ವಿಶೇಷ ತಂಡವನ್ನು ರಚಿಸಲಾಗಿತ್ತು.

ಅದರಂತೆ ಕಿರುಗಾವಲು ಠಾಣೆಯ ಪಿಎಸ್ಐ ಡಿ.ರವಿಕುಮಾರ್ ಮತ್ತು ತಂಡ ಕಾರ್ಯಾಚರಣೆ ನಡೆಸಿ ಕಳ್ಳತನ ಎಸಗಿ ತಲೆಮರೆಸಿಕೊಂಡಿದ್ದ ಆರೋಪಿಗಳಾದ ಸದ್ದಾಂ ಹಾಗೂ ಸೈಯ್ಯದ್ ಅಯೂಬ್‌ನನ್ನು ಮೈಸೂರಿನ ರಾಜೀವ್ ನಗರದಲ್ಲಿ ಪತ್ತೆ ಮಾಡಿ ಬಂಧಿಸಿದ್ದಾರೆ. ಆರೋಪಿಗಳ ಹಿನ್ನೆಲೆ ಹಾಗೂ ಅಪರಾಧ ಚಟುವಟಿಕೆಗಳ ಬಗ್ಗೆ ವಿಚಾರಣೆ ಮಾಡಲಾಗಿ 1ನೇ ಆರೋಪಿ ಸದ್ದಾಂ ಹುಸೇನ್ ವಿರುದ್ಧ ಮೈಸೂರಿನಲ್ಲಿ ಹಲ್ಲೆ ಪ್ರಕರಣ ದಾಖಲಾಗಿದೆ. 2ನೇ ಆರೋಪಿ ಸೈಯ್ಯದ್ ಅಯೂಬ್ ವಿರುದ್ಧ ಶಿವಮೊಗ್ಗ, ಮೈಸೂರು, ಮಂಡ್ಯ, ಚಾಮರಾಜನಗರ, ದಾವಣಗೆರೆ ಜಿಲ್ಲೆಗಳಲ್ಲಿ 38 ಕಳ್ಳತನ ಪ್ರಕರಣಗಳು ದಾಖಲಾಗಿವೆ ಎಂದರು.

ಈ ಇಬ್ಬರು ಆರೋಪಿಗಳ ವಿರುದ್ಧ ಕಿರುಗಾವಲು ಪೊಲೀಸ್ ಠಾಣೆಯಲ್ಲಿ 3, ನಾಗಮಂಗಲ ಪೊಲೀಸ್ ಠಾಣೆಯಲ್ಲಿ 1, ಮಳವಳ್ಳಿ ಗ್ರಾಮಾಂತರ ಠಾಣೆಯಲ್ಲಿ 2, ಮೈಸೂರು ಹಾಗೂ ದಾವಣಗೆರೆ ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ತಲಾ ಒಂದೊಂದು ಪ್ರಕರಣ ದಾಖಲಾಗಿವೆ ಎಂದು ವಿವರಿಸಿದರು.

ಆರೋಪಿಗಳ ಪತ್ತೆಕಾರ್ಯದಲ್ಲಿ ಪೊಲೀಸ್ ಸಿಬ್ಬಂದಿಗಳಾದ ರಿಯಾಜ್ ಪಾಷ, ಪ್ರಭುಸ್ವಾಮಿ, ಸಿದ್ದರಾಜು, ಶ್ರೀನಿವಾಸ್, ಮಧುಕಿರಣ್, ಎನ್.ಸಿ.ಶಿವಕುಮಾರ್, ರಫೀಕ್ ನದಾಫ, ನಾಗೇಶ್, ರವಿಕಿರಣ್, ಲೋಕೇಶ್, ಬಿ.ಬಸವರಾಜು, ಮಹದೇವಸ್ವಾಮಿ, ನಾಗರಾಜು ಅವರು ಭಾಗವಹಿಸಿದ್ದರು ಎಂದರು.

ಸುದ್ದಿಗೋಷ್ಠಿಯಲ್ಲಿ ಎಎಸ್ಪಿ ಸಿ.ಈ.ತಿಮ್ಮಯ್ಯ, ಗಂಗಾಧರಸ್ವಾಮಿ, ಡಿವೈಎಸ್ಪಿ ಯಶವಂತ್ ಕುಮಾರ್, ವೃತ್ತ ನಿರೀಕ್ಷಕ ಶ್ರೀಧರ್, ಪಿಎಸ್ಐ ಡಿ.ರವಿಕುಮಾರ್ ಹಾಜರಿದ್ದರು.

ಕಿಕ್ಕೇರಿ ಬಳಿ ವಿದ್ಯುತ್ ಪ್ರವಹಿಸಿ ರೈತ ಸಾವು

ಕಿಕ್ಕೇರಿ: ಹೋಬಳಿಯ ಗೋವಿಂದನಹಳ್ಳಿ ಗ್ರಾಮದಲ್ಲಿ ಮುಯ್ಯಿ ಆಳು ಕೆಲಸ ಮಾಡಲು ಜಮೀನಿಗೆ ಹೋಗಿದ್ದ ವೇಳೆ ರೈತನಿಗೆ ವಿದ್ಯುತ್ ಪ್ರವಹಿಸಿ ಸಾವಿಗೀಡಾದ ಪ್ರಕರಣ ಶುಕ್ರವಾರ ನಡೆದಿದೆ.

ಮೃತ ವ್ಯಕ್ತಿ ಗ್ರಾಮದ ರೈತ ಅಣ್ಣಯ್ಯ (58). ಗ್ರಾಮದಲ್ಲಿ ಬಹುತೇಕ ರೈತರು ಒಬ್ಬರ ಜಮೀನಿನಲ್ಲಿ ಮತ್ತೊಬ್ಬರು ಎನ್ನುವಂತೆ ಮುಯ್ಯಿ ಆಳು ಕೆಲಸವನ್ನು ಪರಸ್ಪರ ಮಾಡುತ್ತಿದ್ದಾರೆ. ಇದೇ ರೀತಿ ಗ್ರಾಮದ ರೈತ ಶಿವಕುಮಾರ್(ಕೆಂಪಯ್ಯನ ಮಗ) ಅವರ ಜಮೀನಿನಲ್ಲಿ ಮುಯ್ಯಿ ಆಳು ಕೆಲಸ ಮಾಡಲು ಶುಕ್ರವಾರ ಮಧ್ಯಾಹ್ನ ಹೋಗಿದ್ದಾರೆ.

ಬಾಯಾರಿಕೆಯಿಂದ ಜಮೀನಿನ ಸಮೀಪದಲ್ಲಿಯೇ ಇದ್ದ ಮಹದೇವಪ್ಪನವರ ಜಮೀನಿನಲ್ಲಿದ್ದ ಕೊಳವೆ ಬಾವಿಗೆ ನೀರು ಕುಡಿಯಲು ತೆರಳಿದ್ದಾರೆ. ಕೊಳವೆ ಬಾವಿ ಬಳಿ ಇದ್ದ ಮುಳ್ಳಿನ ತಂತಿ ಮುಟ್ಟಿದ್ದಾರೆ. ಮುಳ್ಳಿನ ತಂತಿಯಿಂದ ವಿದ್ಯುತ್ ಪ್ರವಹಿಸಿ ಜೋರಾಗಿ ಕೂಗಿಕೊಂಡು ಅಸ್ವಸ್ಥರಾಗಿದ್ದಾರೆ.

ಕೂಡಲೇ ಸ್ಥಳಕ್ಕೆ ಅಣ್ಣಯ್ಯನಿಂದ ಜಮೀನಿನ ಕೆಲಸ ಮಾಡಿಸಿಕೊಳ್ಳುತ್ತಿದ್ದ ಶಿವಕುಮಾರ್ ಓಡಿ ಬಂದಿದ್ದಾರೆ. ಈತನನ್ನು ವಿದ್ಯುತ್ ಸಂಪರ್ಕದಿಂದ ಬಿಡಿಸಲು ಹೋಗಿ ಇವರಿಗೂ ವಿದ್ಯುತ್ ಪ್ರವಹಿಸಿ ಒದ್ದಾಡುತ್ತ ಅಸ್ವಸ್ಥರಾಗಿದ್ದಾರೆ.

ಇಬ್ಬರು ಜೋರಾಗಿ ಚೀರಾಡಿ ಕೂಗುತ್ತಿರುವುದನ್ನು ಕಂಡು ಸ್ಥಳಕ್ಕೆ ಗ್ರಾಮದ ಬಸವರಾಜು (ದೊಡ್ಡಯ್ಯನ ಮಗ) ಹಾಗೂ ಶಿವರುದ್ರಪ್ಪ (ಕಲ್ಲಪ್ಪನ ಮಗ) ಓಡಿಬಂದು ವಿದ್ಯುತ್ ಸಂಪರ್ಕದಿಂದ ಬಿಡಿಸಿದ್ದಾರೆ.

ಗಾಯಾಳುವಾಗಿ ಅರೆಪ್ರಜ್ಞಾವಸ್ಥೆಯಲ್ಲಿದ್ದ ಇಬ್ಬರನ್ನು ತುರ್ತು ಚಿಕಿತ್ಸೆಗೆ ಕಿಕ್ಕೇರಿಯ ಸಮುದಾಯ ಆರೋಗ್ಯ ಕೇಂದ್ರಕ್ಕೆ ಕರೆತರಲಾಗಿದೆ. ಅಣ್ಣಯ್ಯ ಮೃತನಾಗಿರುವ ವಿಷಯವನ್ನು ವೈದ್ಯರು ತಿಳಿಸಿದ್ದಾರೆ. ತೀವ್ರ ಅಸ್ವಸ್ಥನಾಗಿದ್ದ ಶಿವರುದ್ರಪ್ಪನನ್ನು ಚನ್ನರಾಯಪಟ್ಟಣದ ಪುಣ್ಯ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ದಾಖಲಿಸಲಾಗಿದೆ.

ತನ್ನ ಗಂಡ ಅಣ್ಣಯ್ಯನವರ ಸಾವಿಗೆ ಗ್ರಾಮದಲ್ಲಿ ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಮುಳ್ಳಿನ ತಂತಿ ಮೇಲೆ ವಿದ್ಯುತ್ ಕೇಬಲನ್ನು ಹಾಕಿರುವುದೇ ಕಾರಣವಾಗಿದೆ. ತಪ್ಪಿತಸ್ಥರ ಮೇಲೆ ಕಾನೂನು ರೀತಿ ಕ್ರಮವಹಿಸಬೇಕು ಎಂದು ಮೃತರ ಪತ್ನಿ ಕಾಂತಮಣಿ ಕಿಕ್ಕೇರಿ ಪೊಲೀಸರಿಗೆ ದೂರು ನೀಡಿದ್ದಾರೆ.

ಪ್ರಕರಣವನ್ನು ಪೊಲೀಸರು ದಾಖಲಿಸಿಕೊಂಡು ತನಿಖಾ ಕ್ರಮ ಕೈಗೊಂಡಿದ್ದಾರೆ. ಮೃತರ ಶವವನ್ನು ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಒಪ್ಪಿಸಲಾಯಿತು. ಮೃತರಿಗೆ ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಇದ್ದಾರೆ. ಗ್ರಾಮದ ಮೃತರ ತೋಟದಲ್ಲಿ ಅಂತ್ಯಕ್ರಿಯೆ ಶುಕ್ರವಾರ ನೆರವೇರಿತು.

ಮಕ್ಕಳನ್ನು ಶಾಲೆಗೆ ಸೇರಿಸುವುದೇ ಪೋಷಕರಿಗೆ ಪ್ರತಿಷ್ಠೆಯ ವಿಚಾರ



ಮಂಡ್ಯ: ಮಕ್ಕಳನ್ನು ಶಾಲೆಗೆ ಸೇರಿಸುವುದೇ ಪೋಷಕರಿಗೆ ಪ್ರತಿಷ್ಠೆಯ ಪ್ರಶ್ನೆಯಾಗಿದೆ. ಅದಕ್ಕಾಗಿ ಸಾಲ ಮಾಡಿಯಾದರೂ ಲಕ್ಷಾಂತರ ಹಣವನ್ನು ತಂದು ದೊಡ್ಡ ದೊಡ್ಡ ಶಿಕ್ಷಣ ಸಂಸ್ಥೆಗಳಿಗೆ ಸೇರಿಸುತ್ತಿದ್ದಾರೆ ಎಂದು ಖ್ಯಾತ ವೈದ್ಯ ಡಾ. ಅನಿಲ್ ಆನಂದ್ ವಿಷಾದಿಸಿದರು.

ನಗರದ ಅಭಿನವ ಭಾರತಿ ವಿದ್ಯಾಕೇಂದ್ರದ ಶಾಲಾ ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಮುಗ್ಧ ಮಕ್ಕಳ ಮನಸ್ಸನ್ನು ಅರ್ಥೈಸಿಕೊಂಡು ಅವರನ್ನು ಕಲಿಕೆಯಲ್ಲಿ ತೊಡಗಿಸುವಲ್ಲಿ ಪೋಷಕರು ವಿಫಲರಾಗಿದ್ದಾರೆ. ಪ್ರತಿಷ್ಠಿತ ಶಾಲೆಗಳಿಗೆ ಮಕ್ಕಳನ್ನು ಕಳುಹಿಸಿ, ಸಂಜೆ ಟ್ಯೂಷನ್‌ಗೆ ಸೇರಿಸಿದರೆ ಅಲ್ಲಿಗೆ ತಮ್ಮ ಜವಾಬ್ದಾರಿ ಮುಗಿಯಿತು. ಇನ್ನು ಮಕ್ಕಳು ಪರೀಕ್ಷೆಗಳಲ್ಲಿ ಗಳಿಸುವ ಅಂಕದ ಮೇಲಷ್ಟೇ ಅವರು ಗಮನವನ್ನು ಕೇಂದ್ರೀಕರಿಸುವುದು ಸಾಮಾನ್ಯವಾಗಿದೆ ಎಂದು ಹೇಳಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ಮಹದೇವು ಮಾತನಾಡಿದರು. ಕಾರ್ಯಕ್ರಮದಲ್ಲಿ ನರ ಮತ್ತು ಮಾನಸಿಕ ರೋಗ ತಜ್ಞ ಡಾ.ಅನಿಲ್ ಆನಂದ್, ಸಂಸ್ಥೆಯ ಅಧ್ಯಕ್ಷ ಡಾ.ಶಿವಮೂರ್ತಿ ಕೀಲಾರ, ಪ್ರೇರಣಾ ಅಂಧ ಮತ್ತು ಅಂಗವಿಕಲ ಮಕ್ಕಳ ಶಾಲೆಯ ರವಿಕುಮಾರ್ ಅವರನ್ನು ಅಭಿನಂದಿಸಲಾಯಿತು. ಅಭಿನವ ಭಾರತಿ ವಿದ್ಯಾಸಂಸ್ಥೆಯ ಪ್ರಾಂಶುಪಾಲೆ ಸೌಮ್ಯ ಕುಲಕರ್ಣಿ ಇದ್ದರು.

ಕಾಸರಗೋಡು ಕನ್ನಡಿಗರ ಮೇಲೆ ಮಲಯಾಳಂ ಭಾಷೆ ಹೇರಿಕೆ

ಶ್ರೀರಂಗಪಟ್ಟಣದಲ್ಲಿ ಕಸಾಪದಿಂದ ಪ್ರತಿಭಟನೆ



ಶ್ರೀರಂಗಪಟ್ಟಣ: ರಾಜ್ಯದ ಗಡಿ ಭಾಗವಾದ ಕಾಸರಗೋಡಿನಲ್ಲಿ ಕನ್ನಡ ಮಾಧ್ಯಮ ಶಾಲೆಗಳ ಮುಚ್ಚಿ, ಕೇರಳ ಭಾಷೆಯನ್ನು ಪ್ರಥಮ ಭಾಷೆಯನ್ನಾಗಿಸಲು ಮುಂದಾಗಿರುವ ಕೇರಳ ಮುಖ್ಯಮಂತ್ರಿಗಳ ಕ್ರಮವನ್ನು ಖಂಡಿಸಿ ಶ್ರೀರಂಗಪಟ್ಟಣ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಪ್ರತಿಭಟಿಸಲಾಯಿತು.

ಕಸಾಪ ತಾಲೂಕು ಅಧ್ಯಕ್ಷ ಸಿದ್ದಲಿಂಗು ನೇತೃತ್ವದಲ್ಲಿ ಪಟ್ಟಣದ ಮೈಸೂರು–ಬೆಂಗಳೂರು ಹೆದ್ದಾರಿ ಬಳಿಯ ಕುವೆಂಪು ಪುತ್ಥಳಿ ಬಳಿ ಜಮಾಯಿಸಿದ ಕಾರ್ಯಕರ್ತರು ಕೇರಳ ಸರ್ಕಾರದ ಕ್ರಮವನ್ನು ಖಂಡಿಸಿದರು.

ನೂರಾರು ವರ್ಷಗಳಿಂದ ಕಾಸರಗೋಡಿನಲ್ಲಿ ಕನ್ನಡ ಮಾಧ್ಯಮ ಶಾಲೆಗಳು ನಡೆಯುತ್ತಿದ್ದು ಕನ್ನಡವೇ ಸಾರ್ವಭೌಮ ಎನ್ನುತ್ತಿರುವಾಗ ಕೇರಳ ಸರ್ಕಾರ ಇದೀಗ ಕನ್ನಡ ಶಾಲೆಗಳ ಮುಚ್ಚುವುದರ ಜೊತೆ ಕೇರಳ ಭಾಷೆಗೆ ಆದ್ಯತೆ ನೀಡಲು ಮುಂದಾಗಿದೆ. ಕೂಡಲೇ ರಾಜ್ಯ ಸರ್ಕಾರದ ಮುಖ್ಯಮಂತ್ರಿಗಳು ಕೇರಳ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಕನ್ನಡ ಶಾಲೆಗಳ ಉಳಿಸುವ ಪ್ರಯತ್ನ ಮಾಡಬೇಕು ಎಂದು ಸಿದ್ದಲಿಂಗ ತಿಳಿಸಿದರು.

ಕೇರಳ ಮುಖ್ಯಮಂತ್ರಿಗಳು ಹೊಸದಾಗಿ ನಿಯಮ ಜಾರಿ ಮಾಡಿ ಕಾಸರಗೋಡಿನಲ್ಲಿ ಕನ್ನಡಕ್ಕೆ ಕುತ್ತು ತರುವ ಯತ್ನ ಮಾಡಿದ್ದು, ಕನ್ನಡಿಗರನ್ನು ಕೆರಳುವಂತೆ ಮಾಡಿದ್ದು ಇದನ್ನು ರಾಜ್ಯ ಸರ್ಕಾರ ತಡೆದು ನಮ್ಮ ಕನ್ನಡಿಗರಿಗೆ ರಕ್ಷಣೆ ನೀಡಬೇಕು ಎಂದು ಅವರು ಆಗ್ರಹಿಸಿದರು.

ಪ್ರಧಾನ ಕಾರ್ಯದರ್ಶಿ ಸ್ವಾಮೀಗೌಡ, ಕಸಾಪ ಮಾಜಿ ಅಧ್ಯಕ್ಷ ಪುರುಷೋತ್ತಮ, ಕೆ.ಟಿ.ರಂಗಯ್ಯ, ಜೆ.ಜಯರಾಮು, ಗ್ರಾಪಂ ಸದಸ್ಯ ಅಪ್ಪಾಜಿ, ರವಿಕುಮಾರ್, ಜಯಶಂಕರ್ ಹಾಗೂ ಪದಾಧಿಕಾರಿಗಳು ಇದ್ದರು.

ರಾಸು ವಿಮೆ ಮೊತ್ತ 60 ರಿಂದ 85 ಸಾವಿರಕ್ಕೆ ಹೆಚ್ಚಳ

ಪಾಂಡವಪುರ, ಜ.10– ಮನ್‌ಮುಲ್ ಒಕ್ಕೂಟದ ಆಡಳಿತ ಮಂಡಳಿ ಹಾಗೂ ವಾರ್ಷಿಕ ಸಭೆಯಲ್ಲಿ ಚರ್ಚಿಸಿ ರೈತರಿಗೆ ಅನುಕೂಲ ಮಾಡುವ ಉದ್ದೇಶದಿಂದ ರಾಸು ವಿಮೆ ಯೋಜನೆಯ ಹಣದ ಮೊತ್ತವನ್ನು 60 ಸಾವಿರದಿಂದ 85 ಸಾವಿರಕ್ಕೆ ಹೆಚ್ಚಿಸಲಾಗಿದೆ ಎಂದು ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಹೇಳಿದರು.

ಪಟ್ಟಣದ ಮನ್‌ಮುಲ್ ಉಪವ್ಯವಸ್ಥಾಪಕ ಕಚೇರಿಯಲ್ಲಿ ನಡೆದ ರಾಸುವಿಮೆ, ರೈತ ಕಲ್ಯಾಣ ಟ್ರಸ್ಟ್, ಕಟ್ಟಡ ನಿಧಿ ಹಾಗೂ ಹಾಲು ಕರೆಯುವ ಯಂತ್ರದ ಸಬ್ಸಿಡಿ ಹಣದ ಅಂದಾಜು 19.03 ಲಕ್ಷ ಮೊತ್ತದ ಚೆಕ್ ವಿತರಣೆ ಮಾಡಿ ಬಳಿಕ ಮಾತನಾಡಿದರು.

ರೈತರು ರಾಸುಗಳಿಗೆ ಕಡ್ಡಾಯವಾಗಿ ರಾಸು ವಿಮೆ ಮಾಡಿಸಬೇಕು, ಅಕಾಲಿಕ ಮರಣಕ್ಕೆ ತುತ್ತಾಗುವ ರಾಸುಗಳಿಗೆ ವಿಮೆ ಮಾಡಿಸಿದ್ದರೆ ಮಾತ್ರ ವಿಮೆ ಪರಿಹಾರ ದೊರೆಯುತ್ತದೆ, ಇಲ್ಲವಾದರೆ ನಯಾಪೈಸೆ ಪರಿಹಾರ ದೊರೆಯುವುದಿಲ್ಲ. ಸಾವಿರಾರು ರೂ.ಕೊಟ್ಟು ರಾಸು ಖರೀದಿಸಿ ವಿಮೆ ಮಾಡಿಸದಿದ್ದರೆ ನಷ್ಟವಾಗುತ್ತದೆ. ಹಾಗಾಗಿ ಕಡ್ಡಾಯವಾಗಿ ವಿಮೆ ಮಾಡಿಸಿ, ರೈತರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಆಡಳಿತ ಮಂಡಳಿ ವತಿಯಿಂದ ಚರ್ಚಿಸಿ 60 ಸಾವಿರ ಇದ್ದ ವಿಮೆ ಮೊತ್ತವನ್ನು 85 ಸಾವಿರಕ್ಕೆ ಏರಿಕೆ ಮಾಡಿದ್ದೇವೆ, ಏಪ್ರಿಲ್ ತಿಂಗಳ ನಂತರ ಈ ಯೋಜನೆ ಅನುಷ್ಠಾನಗೊಳ್ಳಲಿದೆ ಎಂದು ತಿಳಿಸಿದರು.



ವಿವಿಧ ಯೋಜನೆಯ ಫಲಾನುಭವಿಗಳಿಗೆ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಅವರು ಚೆಕ್ ವಿತರಣೆ ಮಾಡಿದರು.

ನಾವು ಸಾಕಾಣಿಕೆ ಮಾಡುವ ಎಚ್‌ಎಫ್ ಹಾಗೂ ಜರ್ಸಿ ಹಸುಗಳು ಶೀತ ಪ್ರದೇಶದಲ್ಲಿ ಬೆಳೆಯುವುದರಿಂದ ಬೇಸಿಗೆಯಲ್ಲಿ ಹಸುಗಳನ್ನು ಮಕ್ಕಳಂತೆ ಪಾಲನೆ ಪೋಷಣೆ ಮಾಡಬೇಕು, ಫ್ಯಾಟ್‌ಮೇಲೆ ಹಾಲಿನ ದರ ನಿಗಧಿಪಡಿಸಿರುವುದರಿಂದ ರೈತರು ಕಡ್ಡಾಯವಾಗಿ ಗುಣಮಟ್ಟದ ಹಾಲು ಪೂರೈಕೆ ಮಾಡಬೇಕು, ಇದೀಗ ತಾಲೂಕಿಗೆ 600 ಮ್ಯಾಟ್ ಬಂದಿದ್ದು ಮುಂದಿನ ದಿನಗಳಲ್ಲಿ ಹಾಲು ಕರೆಯುವ ಯಂತ್ರ ಹಾಗೂ ಮೇವು ಕತ್ತರಿಸುವ ಯಂತ್ರವನ್ನು ಪೂರೈಕೆ ಮಾಡಲಾಗುವುದು ಎಂದರು.

ಉಪವ್ಯವಸ್ಥಾಪಕ ಆರ್.ಪ್ರಸಾದ್ ಮಾತ ನಾಡಿ, ಬೇಸಿಗೆ ಕ್ರಮಿಸುತ್ತಿರುವುದರಿಂದ ರೈತರು ಹೆಚ್ಚಿನ ಆಸಕ್ತಿಯಿಂದ ಹಸುಗಳ ಸಾಕಾಣಿಕೆ ಮಾಡಬೇಕು, ಬೇಸಿಗೆಯಲ್ಲಿ ಸಾಧ್ಯವಾದಷ್ಟು ರಾಸುಗಳನ್ನು ನೆರಳಿನಲ್ಲಿ ನಿರ್ವಹಣೆ ಮಾಡಬೇಕು, ಹಸಿರು ಮೇವು, ರಸಮೇವು ನಿರ್ವಹಣೆಯ ಕಡೆಗೆ ಹೆಚ್ಚಿನ ಗಮನಹರಿಸುವ ಜೊತೆಗೆ ವೈಜ್ಞಾನಿಕವಾಗಿ ರಾಸುಗಳ ನಿರ್ವಹಣೆ ಮಾಡಬೇಕೆಂದು ತಿಳಿಸಿದರು.

ಇದೇ ವೇಳೆ ರಾಸು ವಿಮೆ ಯೋಜನೆಯಲ್ಲಿ 15.55 ಲಕ್ಷ, ಕಟ್ಟಡ ಅನುದಾನ 1.35 ಲಕ್ಷ ಹಾಗೂ ಹಾಲು ಕರೆಯುವ ಯಂತ್ರದ 2.85 ಲಕ್ಷ ಮೌಲ್ಯದ ಚೆಕ್‌ಗಳನ್ನು ಫಲಾನುಭವಿಗಳಿಗೆ ವಿತರಣೆ ಮಾಡಲಾಯಿತು.

ಮಂಡ್ಯದಲ್ಲಿ ಜ.17ರಂದು ಸಂದರ್ಶನ

ಮಂಡ್ಯ, ಜ.10– ಡಿಪ್ಲೊಮಾ ಇನ್ ನರ್ಸಿಂಗ್ ಅಂಡ್ ಮಿಡ್ ವೈಫರಿ(3 ವರ್ಷ) ಫುಲ್ ಟೈಮ್ ಕೋರ್ಸ್‌ನಲ್ಲಿ ತೇರ್ಗಡೆ ಯಾಗಿರುವ ಅಭ್ಯರ್ಥಿಗಳಿಗೆ ಸ್ಟಾಫ್ ನರ್ಸ್ ಹುದ್ದೆಗಳ ನೇಮಕಾತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಾಯಿಸಿಕೊಂಡಿರುವ ಅಭ್ಯರ್ಥಿಗಳ ಪಟ್ಟಿಯನ್ನು ನಿಯೋಜಕರು ಆಹ್ವಾನಿಸಿರುತ್ತಾರೆ. ಅಭ್ಯರ್ಥಿಗಳು ಜ.17ರೊಳಗೆ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಣಿ ಮಾಡಿಕೊಂಡರೆ ಸಂದರ್ಶನದ ಅವಕಾಶವಿರುತ್ತದೆ. ಹೆಚ್ಚಿನ ಮಾಹಿತಿಗೆ ಉದ್ಯೋಗಾಧಿಕಾರಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಮಂಡ್ಯ, 9113875775, 9113500761 ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಒಂದನೇ ಪುಟದಿಂದ

ಮಹಿಳೆಯರಿಗೆ ಬೆಂಗಳೂರು ಸೇಫ್

ತೊಂದರೆಯಾಗದಂತೆ ಕ್ರಮ ತೆಗೆದುಕೊಳ್ಳಲಾಗಿತ್ತು. ಬೆಂಗಳೂರು ನಗರ ಪೊಲೀಸ್ ಕಮಾಂಡ್ ಸೆಂಟರ್‌ಗೆ ಹೋಗಿ ರಾತ್ರಿ 2 ಗಂಟೆವರೆಗೆ ನೋಡಿದ್ದೇನೆ. ಬೆಂಗಳೂರಿಗೆ ನಿಜವಾಗಿ ಇದು ಹೆಮ್ಮೆಯ ವಿಷಯ. ಈ ಹಿಂದೆಯೂ ನ್ಯಾಯ ಒದಗಿಸುವುದರಲ್ಲಿ ಕರ್ನಾಟಕ ಪೊಲೀಸ್ ಸಮರ್ಥವಾಗಿ ಕಾರ್ಯ ನಿರ್ವಹಣೆ ಮಾಡುತ್ತಿದೆ ಎಂಬ ಕೀರ್ತಿಗೆ ಪಾತ್ರ ವಾಗಿದೆ. ಆದರೂ ವಿರೋಧ ಪಕ್ಷದವರು ದಿನನಿತ್ಯ ಬೆಂಗಳೂರಿನ ಬಗ್ಗೆ ಅನಗತ್ಯ ಟೀಕೆಗಳನ್ನು ಮಾಡುತ್ತಿರುತ್ತಾರೆ. ಅವರಿಗೆ ಈ ವರದಿ ಉತ್ತರವಾಗಲಿದೆ ಎಂದರು.

ರಾಜ್ಯಪಾಲರಲ್ಲಿ ದ್ವೇಷ ಭಾಷಣ ಮಸೂದೆ: ದ್ವೇಷ ಭಾಷಣ ಮಸೂದೆಗೆ ರಾಜ್ಯಪಾಲರ ಅಂಕಿತ ಬೀಳದ ವಿಚಾರದ ಬಗ್ಗೆ ಮಾತನಾಡಿ, ಈ ಮಸೂದೆಯನ್ನು ರಾಜ್ಯಪಾಲರು ಅವರ ಬಳಿಯೇ ಇಟ್ಟು ಕೊಂಡಿದ್ದಾರೆ. ಅವರು ಇನ್ನೂ ಅಧ್ಯಯನ ನಡೆಸುತ್ತಾರೆ ಎನ್ನಿಸುತ್ತದೆ. ಏನಾದರೂ ವಾಪಸ್ ಕಳಿಸಿ, ಸ್ಪಷ್ಟನೆ ಕೇಳಿದರೆ ಕೊಡುತ್ತೇವೆ. ಒಂದು ವೇಳೆ ತಿರಸ್ಕೃತ ಗೊಳಿಸಿದರೆ ಮುಂದಿನ ನಡೆ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತದೆ. ರಾಜ್ಯಪಾಲರು ಕೆಲವು ಮಸೂದೆಗಳ ಬಗ್ಗೆ ಸ್ಪಷ್ಟನೆ ಕೇಳಿದ್ದಾರೆ. ದ್ವೇಷ ಭಾಷಣ ಮಸೂದೆಯನ್ನು ಅಧ್ಯಯನ ನಡೆಸಿ ಸಹಿ ಹಾಕಬಹುದು ಎಂದು ಅಭಿಪ್ರಾಯಪಟ್ಟರು. ಬಳ್ಳಾರಿ ಹಾಗೂ ಹುಬ್ಬಳ್ಳಿ ಪ್ರಕರಣವನ್ನು ಸಿಐಡಿಗೆ ಹಸ್ತಾಂತರಿಸುವ ಬಗ್ಗೆ ನಿನ್ನೆ ಮುಖ್ಯಮಂತ್ರಿಯವರ ಜೊತೆ ಮಾತನಾಡಿ ಆದೇಶವನ್ನು ಹೊರಡಿಸಿದ್ದೇವೆ. ನಾವು ಏನೋ ಮುಚ್ಚಿಡುತ್ತಿದ್ದೇವೆ ಎಂದು ವಿರೋಧ ಪಕ್ಷದವರಿಗೆ ಅನ್ನಿಸುತ್ತಿದೆ ಎಂದರು.

ಬಾಂಗ್ಲಾ ವಲಸಿಗರ ಬಗ್ಗೆ ನಾವು ಬಿಗಿಯಾಗಿದ್ದೇವೆ: ಗಡಿಯಲ್ಲಿ ದುಡ್ಡುಕೊಟ್ಟು ಅಕ್ರಮ ಬಾಂಗ್ಲಾ ವಲಸಿಗರು ಬರುತ್ತಿರುವ ಆರೋಪದ ಬಗ್ಗೆ ಪ್ರತಿಕ್ರಿಯಿಸಿ, ಅಕ್ರಮ ಬಾಂಗ್ಲಾ ವಲಸಿಗರ ವಿಚಾರದಲ್ಲಿ ನಾವು ಕಠಿಣವಾಗಿದ್ದೇವೆ. ಹಾಗೆಯೇ ಕೇಂದ್ರ ಸರ್ಕಾರವು ಗಡಿಯನ್ನು ಬಿಗಿಗೊಳಿಸಬೇಕು. ಹಣಕೊಟ್ಟು ಒಳಗೆ ಬರುತ್ತಾರೆ ಎಂದರೆ ಗಡಿಪ್ರದೇಶದಲ್ಲಿ ಬಿಗಿಗೊಳಿಸುವ ಕೆಲಸ ಸರಿಯಾಗಿ ಆಗುತ್ತಿಲ್ಲ ಅನ್ನಿಸುತ್ತದೆ. ಈ ಬಗ್ಗೆ ರಕ್ಷಣಾ ಇಲಾಖೆ ಕ್ರಮ ತೆಗೆದುಕೊಳ್ಳಬೇಕು. ಏಜೆಂಟ್‌ಗಳ ಮೂಲಕ ಅಕ್ರಮವಾಗಿ ಒಳಗೆ ಬಂದಿರುವ ಬಾಂಗ್ಲಾ ವಲಸಿಗರನ್ನು ಪತ್ತೆಹಚ್ಚಿ ಗಡಿಪಾರು ಮಾಡುತ್ತಿದ್ದೇವೆ ಎಂದು ಸಚಿವರು ತಿಳಿಸಿದರು.

ವಿ ಬಿಜಿ–ರಾಮ್–ಜಿ ಜಾರಿ

ಇದು ವ್ಯರ್ಥ ಕಸರತ್ತು ಎಂದು ಟೀಕಿಸಿದ್ದಾರೆ.

ನರೇಗಾ ಯೋಜನೆಯಡಿ 11,000 ಕೋಟಿ ರೂ.ಗಳಿಗೂ ಹೆಚ್ಚು ವೆಚ್ಚವಾಗಿದೆ. ಆದರೆ, ಅಭಿವೃದ್ಧಿಗೂ, ವೆಚ್ಚವಾಗಿರುವ ಹಣಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಈ ಯೋಜನೆಯಲ್ಲಿ ರಾಜ್ಯ ಸರ್ಕಾರಗಳ ಹೊಣೆಗಾರಿಕೆ ಇಲ್ಲದಿರುವುದರಿಂದಲೇ ಭ್ರಷ್ಟಾಚಾರ ತಾಂಡವವಾಡುತ್ತಿದ್ದರೂ ಅದನ್ನು ನಿಯಂತ್ರಿಸುವ ಕೆಲಸ ಆಗಲಿಲ್ಲ. ಇದೆಲ್ಲವನ್ನು ಮನಗಂಡ ಪ್ರಧಾನಿ ಮೋದಿ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ರದ್ದುಪಡಿಸದೆ, ಕೆಲವು ಸುಧಾರಣೆಗಳೊಂದಿಗೆ ಹೊಸ ರೂಪ ನೀಡಿದ್ದಾರೆ. ಇನ್ನು ಮುಂದೆ ಈ ಯೋಜನೆಯಡಿ ಕಾಮಗಾರಿಗಳಿಗೆ ರಾಜ್ಯ ಸರ್ಕಾರಗಳು ಶೇ.40ರಷ್ಟು ಹಾಗೂ ಉಳಿದ ಶೇ. 60 ಮೊತ್ತವನ್ನು ಕೇಂದ್ರ ಸರ್ಕಾರ ಭರಿಸಲಿದೆ.

ಸಿದ್ದರಾಮಯ್ಯ ಲೀಸ್ ಬೇಸ್ಡ್ ಸಿಎಂ!

ಕ್ಯಾನ್ಸಲ್(ರದ್ದು) ಆಗಬಹುದು, ಇಲ್ಲವೇ ರಿನೀವಲ್ (ನವೀಕರಣ) ಆಗಬಹುದು. ಸಿದ್ದರಾಮಯ್ಯನವರೇ ಪದೇ ಪದೆ ಕೈಮಾಂಡ್ ಹೇಳುವವರೆಗೆ ಇರುತ್ತೇನೆ ಎಂದು ಹೇಳುತ್ತಿದ್ದಾರೆ. ಹಾಗಾಗಿ ಮನೆ ಓನರ್ ಹೇಳುವಷ್ಟು ದಿನ ಇರುತ್ತಾರೆ. ಇತ್ತ ಡಿ.ಕೆ.ಶಿವಕುಮಾರ್ ಮನೆ ಖಾಲಿ ಮಾಡು, ನಿಮ್ಮ ಲೀಸ್ ಪಿರಿಯಾಡ್ ಮುಗಿದಿದೆ, ನಾನು ಬರಬೇಕು ಎನ್ನುತ್ತಿದ್ದಾರೆ ಎಂದು ವ್ಯಂಗ್ಯವಾಡಿದ್ದಾರೆ.

ಇನ್ನು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ಇದೊಂದು ರೀತಿ ಲೀಸ್ ಕಂ ಸೇಲ್ ಇದ್ದಂತೆ. ಲೀಸ್‌ಗಿಂತ ಒಂದೇ ಬಾರಿ ಸೇಲ್ ಮಾಡೋಣ ಎಂದು ಹೈಕಮಾಂಡ್ ಕಾಯುತ್ತಿದೆ. ಇನ್ನೂ ಯಾರಿಗೆ ಸೇಲ್ ಎಂದು ಸರಿಯಾಗಿ ಫಿಕ್ಸ್ ಆಗಿಲ್ಲ ಎಂದು ಜರಿದಿದ್ದಾರೆ. ವಿಪಕ್ಷ ನಾಯಕರ ಹೇಳಿಕೆಗೆ ತಿರುಗೇಟು ನೀಡಿರುವ ಸಿಎಂ ಸಿದ್ದರಾಮಯ್ಯ, ಕುಮಾರಸ್ವಾಮಿ ಹಾಗೂ ಬಿಜೆಪಿಯವರು ಹೇಳುವುದೆಲ್ಲಾ ಸುಳ್ಳು. ಅದಕ್ಕೆಲ್ಲಾ ಉತ್ತರ ಕೊಡೋಕಾಗುತ್ತಾ ಎಂದು ಪ್ರಶ್ನಿಸಿದ್ದಾರೆ.

ಮೈಸೂರು ನಗರಪಾಲಿಕೆ ವ್ಯವಸ್ಥಿತ ಯೋಜನೆ

ಹೊರ ಹೊಮ್ಮಿತ್ತು. ಬಳಿಕ 2016–17ರಲ್ಲೂ ಮೊದಲ ಸ್ಥಾನ ಪಡೆಯಿತು. ಆದರೆ ನಂತರದಲ್ಲಿ ಅದು ಸಾಧ್ಯವಾಗಲೇ ಇಲ್ಲ. 2023–24ರಲ್ಲಿ 8ನೇ ಸ್ಥಾನ ಹಾಗೂ 2025–26ರಲ್ಲಿ 3 ಸ್ಥಾನಕ್ಕೆ ಮೈಸೂರು ತೃಪ್ತಿಪಟ್ಟುಕೊಳ್ಳಬೇಕಾಯಿತು. ಅಗ್ರ ಸ್ಥಾನ ಪಡೆಯಲು ಪಾಲಿಕೆ ವ್ಯವಸ್ಥಿತ ಕಾರ್ಯಕ್ರಮ ರೂಪಿಸಲಿಲ್ಲ ಎಂಬ ಬಗ್ಗೆ ವ್ಯಾಪಕ ಆಕ್ರೋಶ ವ್ಯಕ್ತವಾಯಿತು. ಪಕ್ಷಾತೀತವಾಗಿ ಎಲ್ಲಾ ರಾಜಕೀಯ ಪಕ್ಷಗಳು ಅಸಮಾಧಾನ ವ್ಯಕ್ತಪಡಿಸಿದವು. ಈ ಬಗ್ಗೆ ಮೈಸೂರು ಜನರಲ್ಲಿ ಕೂಡ ಬೇಸರ ಮೂಡಿತ್ತು.

ಆದರೆ ಈ ಬಾರಿಯ ಸ್ವಚ್ಛ ಸರ್ವೇಕ್ಷಣೆಯಲ್ಲಿ ಮೈಸೂರು ಅವಶ್ಯವಾಗಿ ಇಡೀ ದೇಶದಲ್ಲೆ ಪ್ರಥಮ ಸ್ಥಾನ ಪಡೆಯಲು ಪಾಲಿಕೆ ವ್ಯವಸ್ಥಿತ ಕಾರ್ಯಕ್ರಮ ರೂಪಿಸಿದೆ. ಸ್ವಚ್ಛ ಸರ್ವೇಕ್ಷಣಾ ತಂಡ ಮೈಸೂರಿಗೆ ಬರುವ ಮುನ್ನವೇ ಪರಿಣಾಮಕಾರಿಯಾಗಿ ಸ್ವಚ್ಛತಾ ಕಾರ್ಯಕ್ಕೆ ಯೋಜನೆ ಹಾಕಿಕೊಳ್ಳಲಾಗಿದೆ. ಸ್ವಚ್ಛ ಸರ್ವೇಕ್ಷಣಾ ಅಭಿಯಾನದಲ್ಲಿ ಎಲ್ಲಾ ಸಂಘ–ಸಂಸ್ಥೆ, ನಾಗರಿಕರನ್ನು ಭಾಗಿ ಮಾಡಿಕೊಂಡು ಯಶಸ್ವಿಗೊಳಿಸಲು ಜ.13ರಿಂದ ಮೈಸೂರು ಪಾಲಿಕೆಯಲ್ಲಿ ಸಂಘ–ಸಂಸ್ಥೆ ಪ್ರತಿನಿಧಿಗಳ ಸಭೆಯನ್ನು ಪ್ರತ್ಯೇಕವಾಗಿ ನಡೆಸಲು ದಿನಾಂಕಗಳನ್ನು ನಿಗದಿ ಮಾಡಲಾಗಿದೆ. ಪಾಲಿಕೆಯ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ಸಭೆ ನಡೆಯಲಿದೆ. ಮಾರುಕಟ್ಟೆ ವರ್ತಕರ ಸಂಘ, ಹೋಟೆಲ್ ಮಾಲೀಕರ ಸಂಘ, ಕಲ್ಯಾಣ ಮಂಟಪಗಳ ಮಾಲೀಕರ ಸಂಘ, ಮೈಸೂರು ಚೇಂಬರ್ ಅಂಡ್ ಕಾಮರ್ಸ್, ಆಟೋ ಚಾಲಕರ ಸಂಘ, ಟ್ಯಾಕ್ಸಿ ಚಾಲಕರ ಸಂಘ, ಟಾಂಗಾವಾಲಾಗಳ ಸಂಘ, ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ನೌಕರರ ಸಂಘ, ಕೈಗಾರಿಕೋದ್ಯಮಿಗಳ ಸಂಘ, ಅಪಾರ್ಟ್‌ಮೆಂಟ್ ನಾಗರಿಕರ ಸಂಘಗಳ ಪದಾಧಿಕಾರಿಗಳನ್ನು ಕರೆಯಲಾಗಿದೆ. ಸ್ವಚ್ಛ ಸರ್ವೇಕ್ಷಣೆಯ ಮಾರ್ಗ ಸೂಚಿಗಳನ್ನು ಅವರಿಗೆ ಮನವರಿಕೆ ಮಾಡಿ ಯಾವ ರೀತಿ ಸ್ವಚ್ಛತೆಯನ್ನು ಕಾಪಾಡಬೇಕು ಎಂಬ ಬಗ್ಗೆ ಮಾಹಿತಿ ನೀಡಲಾಗುತ್ತದೆ.

ಜನಪ್ರತಿನಿಧಿಗಳ ಆಳ್ವಿಕೆ ಇಲ್ಲದೆ ಅನುದಾನ ಕಡಿತ!

ಸರ್ಕಾರದ ನಿಯಮದಂತೆ ಯೋಜನಾ ಆಯೋಗದ ಅನುದಾನ ಪಡೆಯಬೇಕಾದರೆ ಜನಪ್ರತಿನಿಧಿಗಳ ಆಡಳಿತ ಇರಬೇಕು. ಹಾಗಾಗಿ ಮೈಸೂರು ಪಾಲಿಕೆಗೆ ಕಳೆದ 2 ವರ್ಷದಿಂದ ಯೋಜನಾ ಆಯೋಗದ 1.20 ಕೋಟಿ ಅನುದಾನ ಬಂದಿಲ್ಲ. 15 ಮತ್ತು 16ನೇ ಯೋಜನಾ ಆಯೋಗದಿಂದ ತಲಾ 60 ಲಕ್ಷದಂತೆ 120 ಲಕ್ಷ ಪಾಲಿಕೆಗೆ ಬರಬೇಕಾಗಿತ್ತು. ಬಾರದೇ ಬಹಳಷ್ಟು ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿವೆ. ಇತ್ತೀಚಿಗೆ ಮಧ್ಯಪ್ರದೇಶದ ಇಂಧೋರ್ ಸ್ವಚ್ಛ ಸರ್ವೇಕ್ಷಣೆಯಲ್ಲಿ ಸತತ ಮೊದಲ ಸ್ಥಾನ ಪಡೆಯುತ್ತಿದೆ. ಕೇಂದ್ರ ಸರ್ಕಾರ ಇಂಧೋರ್ ನಗರವನ್ನು ಸ್ಮಾರ್ಟ್ ಸಿಟಿಯಾಗಿ ಘೋಷಣೆ ಮಾಡಿ, ಅಗತ್ಯ ಅನುದಾನ ನೀಡುತ್ತಿದೆ. ಈ ಅನುದಾನ ಬಳಸಿಕೊಂಡಿರುವ ಇಂಧೋರ್ ಕಸ ಸಂಗ್ರಹ, ವಿಲೇವಾರಿ, ಮತ್ತು ಕಂಡ ಕಂಡಲ್ಲಿ ಕಸ ಬೀಸಾಡುವವರಿಗೆ ದಂಡ ಸೇರಿದಂತೆ ಇತರೆ ಕಟ್ಟುನಿಟ್ಟಿನ ಕ್ರಮ ಕೈಗೊಂಡು ಯೋಜನೆ ಅಚ್ಚುಕಟ್ಟಾಗಿ ಅನುಷ್ಠಾನ ಮಾಡಲು ಎಐ ಆಧಾರಿತ ತಂತ್ರಾಂಶ ಅಳವಡಿಸಿಕೊಂಡಿದೆ. ಈ ಎಲ್ಲಾ ಕಾರಣದಿಂದ ಇಂಧೋರ್‌ಗೆ ಸ್ವಚ್ಛ ಸರ್ವೇಕ್ಷಣೆಯಲ್ಲಿ ಅಗ್ರ ಸ್ಥಾನ ಪಡೆಯುತ್ತಿದೆ. ಆದರೆ ಮೈಸೂರು ಪಾಲಿಕೆಗೆ ಇತ್ತೀಚಿಗೆ ದಸರಾ ಹೊರತುಪಡಿಸಿ ಅಭಿವೃದ್ಧಿ ಕಾರ್ಯಕ್ಕೆ ಸರ್ಕಾರದ ಅನುದಾನ ಬರುವುದು ನಿಂತಿದೆ. ಸ್ವಚ್ಛ ಸರ್ವೇಕ್ಷಣೆಯಲ್ಲಿ ಮೈಸೂರು ಹಿಂದುಳಿಯಲು ಇದೂ ಒಂದು ಕಾರಣವಾಗಿದೆ.

ಪೌರಕಾರ್ಮಿಕರು ನಮ್ಮಂತೆ ಮನುಷ್ಯರಲ್ಲವೆ...

ಸ್ವಚ್ಛ ಸರ್ವೇಕ್ಷಣಾ ಅಭಿಯಾನದಲ್ಲಿ ಪೌರ ಕಾರ್ಮಿಕರಿಗಿಂತ ಜನ ಸಾಮಾನ್ಯರ ಪಾತ್ರ ಬಹು ಮುಖ್ಯವಾಗಿದೆ. ಪೌರ ಕಾರ್ಮಿಕರು ತಮ್ಮ ಶಕ್ತಿ ಮೀರಿ ಸ್ವಚ್ಛತೆ ಮಾಡುತ್ತಾರೆ. ಆದರೆ ನಾಗರಿಕರು ರಸ್ತೆಯಲ್ಲಿ ಪದೇ ಪದೆ ಕಸ ಬೀಸಾಡುತ್ತಿದ್ದರೆ ಪೌರ ಕಾರ್ಮಿಕರು ಎಷ್ಟು ತಾನೆ ಸ್ವಚ್ಛತೆ ಮಾಡಲು ಸಾಧ್ಯ. ಪೌರ ಕಾರ್ಮಿಕರು ನಮ್ಮಂತೆ ಮನುಷ್ಯರು ಎಂಬುದ ಅರಿತು ಪ್ರತಿಯೊಬ್ಬರು ಸ್ವಚ್ಛತೆ ಕಾಪಾಡಬೇಕು.

ಸ್ವಚ್ಛತೆ ನನ್ನ ಹೊಣೆ ಎಂದು ಅರಿತು ತಮ್ಮ ಮನೆ, ಕಚೇರಿ ಸುತ್ತ ಮುತ್ತ ಸ್ವಚ್ಛತೆ ಕಾಪಾಡಿದರೆ ಮೈಸೂರು ಈ ಬಾರಿಯ ಸ್ವಚ್ಛ ಸರ್ವೇಕ್ಷಣೆಯಲ್ಲಿ ಮೊದಲ ಸ್ಥಾನ ಪಡೆಯುವುದರಲ್ಲಿ ಅನುಮಾನವೇ ಇಲ್ಲ.

ಸ್ವೀಪಿಂಗ್ ಮೆಷಿನ್ ಬಳಕೆಗೆ ರೂಟ್ ಮ್ಯಾಪ್

ಮೈಸೂರು ಪಾಲಿಕೆಯಲ್ಲಿ 5 ಸ್ವೀಪಿಂಗ್ ಮೆಷಿನ್‌ಗಳಿದ್ದು, ನಗರದ ಹೃದಯ ಭಾಗವಾದ ದೇವರಾಜ ಅರಸ್ ರಸ್ತೆ ಶಿವರಾಂ ಪೇಟೆ, ಅರಮನೆ ಸುತ್ತ ಅಶೋಕ ರಸ್ತೆ, ಸಯ್ಯಾಜಿ ರಾವ್ ರಸ್ತೆ ಸೇರಿದಂತೆ ಇತರೆಡೆ ಸ್ವಚ್ಛ ಕಾರ್ಯ ಕೈಗೊಳ್ಳಲಾಗುವುದು. ಅಲ್ಲದೆ ಹುಣಸೂರು ರಸ್ತೆ, ಹೆಚ್.ಡಿ.ಕೋಟೆ ರಸ್ತೆ, ಮೈಸೂರು ನೀಲಗಿರಿ ರಸ್ತೆ, ಬನ್ನೂರು ರಸ್ತೆ, ತಿ.ನರಸೀಪುರ ರಸ್ತೆ ಸೇರಿದಂತೆ ಇತರೆ ರಸ್ತೆಗಳನ್ನು ಸ್ವೀಪಿಂಗ್ ಮೆಷಿನ್ ಬಳಸಿ ಸ್ವಚ್ಛತೆ ಮಾಡಲು ರೂಟ್ ಮ್ಯಾಪ್ ಹಾಕಿಕೊಳ್ಳಲಾಗಿದೆ. ರಾತ್ರಿ ವೇಳೆ ಮಾತ್ರವೇ ಸ್ವೀಪಿಂಗ್ ಮೆಷಿನ್‌ನಿಂದ ಸ್ವಚ್ಛತಾ ಕಾರ್ಯ ಕೈಗೊಳ್ಳಲಾಗುವುದು. ಅಲ್ಲದೆ ನಗರದ ಹೃದಯ ಭಾಗದಲ್ಲಿ ಪೌರಕಾರ್ಮಿಕರಿಂದ ರಾತ್ರಿಯೇ ಸ್ವಚ್ಛತಾ ಕಾರ್ಯ ಮಾಡಲೂ ತೀರ್ಮಾನಿಸಲಾಗಿದೆ.

ಮಂಡ್ಯದಲ್ಲಿ ಜಾಗತಿಕ ಮಟ್ಟದ ಕ್ರೀಡಾ ಮೂಲ ಸೌಕರ್ಯಕ್ಕೆ ಕೇಂದ್ರ 14 ಕೋಟಿ ಬಿಡುಗಡೆ

ಹೆಚ್.ಡಿ.ಕುಮಾರಸ್ವಾಮಿ ಮನವಿಗೆ ಕೇಂದ್ರ ಕ್ರೀಡಾ ಸಚಿವ ಮಾಂಡವೀಯ ಸ್ಪಂದನೆ

ನವದೆಹಲಿ: ಮಂಡ್ಯ ಲೋಕಸಭೆ ಕ್ಷೇತ್ರದಲ್ಲಿ ಜಾಗತಿಕ ಗುಣಮಟ್ಟದ ಕ್ರೀಡಾ ಮೂಲ ಸೌಕರ್ಯ ಕಲ್ಪಿಸುವ ಉದೇಶಕ್ಕಾಗಿ ಕೇಂದ್ರ ಸಚಿವ ಹೆಚ್.ಡಿ.ಕುಮಾರ ಸ್ವಾಮಿ ಅವರ ಮನವಿಯ ಮೇರೆಗೆ ಕೇಂದ್ರ ಸರ್ಕಾರವು 14 ಕೋಟಿ ಮಂಜೂರು ಮಾಡಿದೆ.

ಜಿಲ್ಲೆಯಲ್ಲಿ ಕ್ರೀಡಾ ಸೌಕರ್ಯವನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ಸಚಿವ ಕುಮಾರಸ್ವಾಮಿ ಅವರು ಕೇಂದ್ರದ ಕ್ರೀಡಾ ಮತ್ತು ಯುವಜನ ಸಬಲೀಕರಣ ಖಾತೆ ಸಚಿವ ಮನ್ಸುಖ್ ಮಾಂಡವೀಯ ಅವರಿಗೆ ಪತ್ರ ಬರೆದು, ವಿನಂತಿಸಿದ್ದರು.

ಮನವಿಗೆ ತಕ್ಷಣ ಸ್ಪಂದಿಸಿರುವ ಕ್ರೀಡಾ ಸಚಿವರು, ಖೇಲೋ ಇಂಡಿಯಾ ಯೋಜನೆಯಡಿ ಮಂಡ್ಯ ಜಿಲ್ಲೆಯಲ್ಲಿ ಬಹುಪಯೋಗಿ ಕ್ರೀಡಾ ಸೌಲಭ್ಯ ನಿರ್ಮಾಣಕ್ಕೆ 14 ಕೋಟಿ ಮಂಜೂರು ಮಾಡಿದ್ದಾರೆ. ಇದರಲ್ಲಿ ಮಂಡ್ಯದ ಕೃಷಿ ವಿಜ್ಞಾನ ವಿಶ್ವವಿದ್ಯಾಲಯದಲ್ಲಿ ಬಹುಪಯೋಗಿ ಒಳಾಂಗಣ ಕ್ರೀಡಾಂಗಣ ನಿರ್ಮಾಣಕ್ಕೆ ಆಡಳಿತಾತ್ಮಕ ಅನು ಮೋದನೆ ನೀಡಲಾಗಿದೆ ಎಂದು ಸಚಿವ ಕುಮಾರಸ್ವಾಮಿ ತಿಳಿಸಿದ್ದಾರೆ.



ಕುಮಾರಸ್ವಾಮಿ



ಮಾಂಡವಿಯಾ

ಮಂಡ್ಯ ಜಿಲ್ಲೆಯ ಅನೇಕ ಕ್ರೀಡಾಪಟುಗಳು ರಾಷ್ಟ್ರೀಯ ಮತ್ತು ಅಂತಾ ರಾಷ್ಟ್ರೀಯ ಮಟ್ಟದಲ್ಲಿ ರಾಜ್ಯ ಮತ್ತು ರಾಷ್ಟ್ರವನ್ನು ಪ್ರತಿನಿಧಿಸಿದ್ದಾರೆ. ಅನೇಕ ಯುವ ಪ್ರತಿಭೆಗಳು ಜಿಲ್ಲೆಯಲ್ಲಿ ಅವಕಾಶ ಸಿಗದೆ ಹೊರ ಭಾಗಗಳಲ್ಲಿ ತರಬೇತಿಗೆ ಹೋಗುತ್ತಿದ್ದಾರೆ. ಅನೇಕ ಕ್ರೀಡಾಪಟುಗಳು ರಾಷ್ಟ್ರೀಯ ಶಿಬಿರಗಳಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಅಂತಹ ಸೌಕರ್ಯವನ್ನು ಮಂಡ್ಯದಲ್ಲಿಯೇ ಒದಗಿಸುವ ಉದೇಶದಿಂದ ಈ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಗುತ್ತಿದೆ. ನನ್ನ ಮನವಿಗೆ ಸ್ಪಂದಿಸಿದ ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಅವರಿಗೆ ಧನ್ಯವಾದ ತಿಳಿಸುತ್ತೇನೆ ಎಂದು ಸಚಿವರು ಹೇಳಿದ್ದಾರೆ.

ಕೇಂದ್ರದ ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರವು ದೇಶದ ಉದ್ದಗಲಕ್ಕೂ ಜಾಗತಿಕ ಗುಣಮಟ್ಟದ ಕ್ರೀಡಾ ಸೌಕರ್ಯ ಅಭಿವೃದ್ಧಿಪಡಿಸಿ, ಗ್ರಾಮೀಣ ಮಟ್ಟದ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡುತ್ತಿದೆ. ಈ ಯೋಜನೆಯ ಭಾಗವಾಗಿ ಮಂಡ್ಯದಲ್ಲಿ 14 ಕೋಟಿ ವೆಚ್ಚದಲ್ಲಿ ಅತ್ಯುತ್ತಮ ಗುಣಮಟ್ಟದ ಕ್ರೀಡಾ ಸೌಲಭ್ಯವನ್ನು ನಿರ್ಮಾಣ ಮಾಡಲಾಗುವುದು ಎಂದು ಮಾಧ್ಯಮ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಬಹುಪಯೋಗಿ ಕ್ರೀಡಾ ಸೌಲಭ್ಯಕ್ಕೆ ಈಗ ಅನುಮೋದನೆ ದೊರೆತಿರುವುದರಿಂದ ಮಂಡ್ಯ ಕ್ರೀಡಾ ಅಭಿವೃದ್ಧಿ ಮತ್ತು ಉತ್ತೇಜನದಲ್ಲಿ ಹೊಸ ಯುಗಕ್ಕೆ ನಾಂದಿಯಾಗಲಿದೆ. ಈ ಕ್ರೀಡಾ ಸಮುಚ್ಚಯದಲ್ಲಿ ಯುವ ಕ್ರೀಡಾಪಟುಗಳ ತರಬೇತಿ, ಜಿಲ್ಲಾ ಮತ್ತು ರಾಜ್ಯ ಮಟ್ಟದ ಸ್ಪರ್ಧೆಗಳನ್ನು ಆಯೋಜಿಸುವುದರ ಜೊತೆಗೆ ಸಾರ್ವಜನಿಕರಲ್ಲಿ ಫಿಟ್‌ನೆಸ್ ಅನ್ನು ಉತ್ತೇಜಿಸುವ ಸೌಲಭ್ಯಗಳನ್ನು ಕಲ್ಪಿಸಲಾಗುತ್ತದೆ. ಕೃಷಿ ಆಧರಿತವಾದ ಮಂಡ್ಯ ಜಿಲ್ಲೆ ಪ್ರತಿಭೆಗಳ ಆಗರ. ಆನೇಕ ಪ್ರತಿಭಾವಂತರು ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಗಳಿಸಿದ್ದಾರೆ. ಈ ನಿಟ್ಟಿನಲ್ಲಿ ಕ್ರೀಡೆಯನ್ನು ಉತ್ತೇಜಿಸುವುದು ಅಗತ್ಯವಾಗಿದೆ. ಆರೋಗ್ಯವಂತ ಸಶಕ್ತ ಮಂಡ್ಯ ಜಿಲ್ಲೆ ನಿರ್ಮಾಣಕ್ಕೆ ಈ ಯೋಜನೆ ಪೂರಕವಾಗಿದೆ. ಇದು ಪ್ರಧಾನಿ ಮೋದಿ ಅವರ ಕನಸು ಕೂಡ ಆಗಿದೆ ಎಂದು ಸಚಿವ ಕುಮಾರಸ್ವಾಮಿ ಹೇಳಿದ್ದಾರೆ.

ಸಿದ್ದರಾಮಯ್ಯನವರೇ 2028ರವರೆಗೆ ಸಿಎಂ ಆಗಿರಲಿ...

ಶಾಸಕ ಬಸವರಾಜ ರಾಯರೆಡ್ಡಿ ಪತ್ರಕ್ಕೆ ಡಿಕೆಶಿ ಆಪ್ತ ಶಿವಗಂಗಾ ಆಕ್ರೋಶ

ಬೆಂಗಳೂರು: ಸಿದ್ದರಾಮಯ್ಯ ಅವರೇ 2028ರವರೆಗೂ ಮುಖ್ಯಮಂತ್ರಿಯಾಗಿರಲಿ ಎಂದು ಶಾಸಕ ಬಸವರಾಜ ರಾಯರೆಡ್ಡಿ ಹೈಕಮಾಂಡ್‌ಗೆ ಪತ್ರ ಬರೆದಿರುವುದಕ್ಕೆ ಆಕ್ರೋಶ ವ್ಯಕ್ತಪಡಿಸಿರುವ ಶಾಸಕ ಬಸವರಾಜ್ ಶಿವಗಂಗಾ, ನಾನು ಸಂಕ್ರಾಂತಿ ನಂತರ ಮಾತನಾಡುತ್ತೇನೆ ಎಂದು ಪುನರುಚ್ಚರಿಸಿದ್ದಾರೆ.

ಅಧಿಕಾರ ಹಸ್ತಾಂತರ ವಿಚಾರವಾಗಿ ಆರಂಭದಿಂದಲೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪರ ಬ್ಯಾಟ್ ಬೀಸುತ್ತಿರುವ ಶಿವಗಂಗಾ, ಶಾಸಕ ಬಸವರಾಜ ರಾಯರೆಡ್ಡಿ ಪತ್ರ ಬರೆದಿರುವುದು ಪಕ್ಷಕ್ಕೆ ಒಳ್ಳೆಯದಲ್ಲ ಎಂದು ಕಿಡಿಕಾರಿದ್ದಾರೆ.

ಬಸವರಾಜ ರಾಯರೆಡ್ಡಿ ಹಿರಿಯರಿದ್ದಾರೆ. ಅವರ ಮಾತನ್ನು ಹೈಕಮಾಂಡ್ ಗಮನಿಸಬೇಕಾಗಿದೆ. ಪಕ್ಷದ ಆಂತರಿಕ ಬೆಳವಣಿಗೆಗಳ ಬಗ್ಗೆ ಯಾರೂ ಮಾತನಾಡಬೇಡಿ ಎಂದು ಹೈಕಮಾಂಡ್ ಸೂಚನೆ ನೀಡಿದೆ. ನಾಯಕತ್ವ ಬದಲಾವಣೆ ವಿಚಾರವಾಗಿ ಸಿಎಂ ಸಿದ್ದರಾಮಯ್ಯ ಕೂಡ ಹೈಕಮಾಂಡ್ ಮಾತಿಗೆ ಬದ್ಧ ಎಂದಿದ್ದಾರೆ.

ಸಂಕ್ರಾಂತಿ ನಂತರ ನಾನೂ ಮಾತನಾಡುತ್ತೇನೆ...



ರಾಯರೆಡ್ಡಿ



ಶಿವಗಂಗಾ

ಸಿಎಲ್‌ಪಿ ಸಭೆಯಲ್ಲೂ ಈ ವಿಚಾರವನ್ನು ನಾವು ಒಪ್ಪಿ ಕೊಂಡಿದ್ದೇವೆ. ಹೀಗಿರುವಾಗ ರಾಯರೆಡ್ಡಿ ಹೇಳಿಕೆ ಪರಿಗಣಿಸುವುದು ಬೇಡ. ಈ ಬೆಳವಣಿಗೆ ಪಕ್ಷದ ಹಿತದೃಷ್ಟಿಯಿಂದ ಒಳ್ಳೆಯದಲ್ಲ. ಪ್ರತಿಯೊಬ್ಬ ಶಾಸಕರಿಗೂ ಅವರದ್ದೇ ಆದ ಗೌರವ ಇದೆ. ಒಬ್ಬರಿಗೆ ನೋಟಿಸ್ ನೀಡುವುದು, ಮತ್ತಿನ್ಯಾರಿಗೋ ನೀಡದಿರುವುದು ಸರಿಯಲ್ಲ ಎಂದು ಅಸಮಾಧಾನ ಹೊರ ಹಾಕಿದರು.

ಜ.17ರ ಬಳಿಕ ನಾವು ಮಾತನಾಡುತ್ತೇವೆ. ಶಾಸಕ ಕೆ.ಎನ್.ರಾಜಣ್ಣ ಅವರು ಎರಡೆರಡು ಬಾರಿ ಹೇಳಿಕೆ ನೀಡಿದ್ದಾರೆ. ನುಡಿದಂತೆ ನಡೆಯಬೇಕು ಅಂತಲೂ ಹೇಳಿದ್ದಾರೆ. ರಾಯರೆಡ್ಡಿ, ರಾಜಣ್ಣ, ನಾನು ಯಾರೂ ಕೂಡ ಹೈಕಮಾಂಡ್ ಅಲ್ಲ. ಸದ್ಯ ಸಿಎಂ ಕುರ್ಚಿ ಖಾಲಿ ಇಲ್ಲ ಹೈಕಮಾಂಡ್ ಹೇಳುವ ಎಲ್ಲಾ ಮಾತಿಗೂ ನಾವು ಬದ್ಧ. ಡಿ.ಕೆ.ಶಿವಕುಮಾರ್ ಅವರನ್ನು ಅಸ್ಸಾಂ ಚುನಾವಣಾ ವೀಕ್ಷಕರಾಗಿ ನೇಮಕ ಮಾಡಿರೋದು ಅವರ ಪರಿಶ್ರಮಕ್ಕೆ ಸಿಕ್ಕ ಜಯ. ಅವರಿಗೆ ಸಾಮರ್ಥ್ಯ ಇದೆ ಅಂತಾನೆ ಜವಾಬ್ದಾರಿ ನೀಡಿರೋದು. ಪ್ರತಿಯೊಬ್ಬರಿಗೂ ಹೈಕಮಾಂಡ್ ಕೂಲಿ ಕೊಡಬೇಕು. ಹೈಕಮಾಂಡ್‌ಗೆ ಎಲ್ಲಾ ಮಾಹಿತಿ ಇದೆ. ಎಲ್ಲವನ್ನೂ ಗಮನಿಸುತ್ತಿದೆ. ಕೆಪಿಸಿಸಿ ಅಧ್ಯಕ್ಷ ಸ್ಥಾನ ಅಥವಾ ಸಿಎಂ ಕುರ್ಚಿ ವಿಚಾರ ಸದ್ಯ ಚರ್ಚೆ ಆಗಿಲ್ಲ ಎಂದರು.

ಸುದೀರ್ಘ ಅವಧಿಯ ಸಿಎಂ ಎಂದು ದಾಖಲೆ ಸೃಷ್ಟಿಸಿದ ಹಿನ್ನೆಲೆಯಲ್ಲಿ ಸಿಎಂಗೆ ಶಾಸಕ ಬಸವರಾಜ ರಾಯರೆಡ್ಡಿ ಅವರು ಪತ್ರ ಬರೆದು, ಅಭಿನಂದಿಸಿದ್ದರು. ಆ ಪತ್ರದಲ್ಲಿ ನೀವೇ 2028ರವರೆಗೆ ಸಿಎಂ ಆಗಿರಬೇಕು ಎಂದು ಉಲ್ಲೇಖಿಸಿದ್ದರು.

ಸ್ವಚ್ಛ ಸರ್ವೇಕ್ಷಣಾ ಅಭಿಯಾನಕ್ಕೆ ವಿದ್ಯುಕ್ತ ಚಾಲನೆ: ಕುಕ್ಕರಹಳ್ಳಿ ಕೆರೆಯಲ್ಲಿ ಸ್ವಚ್ಛತಾ ಕಾರ್ಯ



ಮೈಸೂರಿನ ಕುಕ್ಕರಹಳ್ಳಿ ಕೆರೆಯಲ್ಲಿ ಸ್ವಚ್ಛ ಸರ್ವೇಕ್ಷಣಾ ಅಭಿಯಾನದ ಅಂಗವಾಗಿ ನಗರಪಾಲಿಕೆ ನೌಕರರು ಸೇರಿದಂತೆ ವಿವಿಧ ಸಂಘ-ಸಂಸ್ಥೆಯವರು ಸ್ವಚ್ಛತಾ ಕಾರ್ಯ ಕೈಗೊಂಡು ಸಂಗ್ರಹಿಸಿದ ತ್ಯಾಜ್ಯ.

ಮೈಸೂರು,ಜ.10(ಬಿಎಲ್‌ಯು)-ಸ್ವಚ್ಛ ಸರ್ವೇಕ್ಷಣಾ ಅಭಿಯಾನದ ಅಂಗವಾಗಿ ಮೈಸೂರು ನಗರ ಪಾಲಿಕೆಯು ನಗರದ ಕುಕ್ಕರಹಳ್ಳಿ ಕೆರೆಯಲ್ಲಿ ವಿವಿಧ ಸಂಘ-ಸಂಸ್ಥೆಗಳ ಸಹಯೋಗದೊಂದಿಗೆ ಸ್ವಚ್ಛತಾ ಕಾರ್ಯ ಕೈಗೊಂಡಿತ್ತು. ಈ ವೇಳೆ ಒಟ್ಟು 410 ಕೆ.ಜಿ. ತ್ಯಾಜ್ಯವನ್ನು ಸಂಗ್ರಹಿಸಲಾಯಿತು. ಕುಕ್ಕರಹಳ್ಳಿ ಕೆರೆಯಲ್ಲಿ ಮತ್ತಷ್ಟು ತ್ಯಾಜ್ಯವಿದ್ದು, ಹಂತ ಹಂತವಾಗಿ ತೆರವು ಮಾಡುವ ಬಗ್ಗೆ ತೀರ್ಮಾನ ಕೈಗೊಳ್ಳಲಾಯಿತು. ಮೈಸೂರಿನ ಜೆಎಸ್‌ಎಸ್ ವಿದ್ಯಾಪೀಠ, ಎಂಐಟಿ, ಎಸ್‌ಜೆಸಿಇ, ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ, ಯುವರಾಜ ಕಾಲೇಜು, ಎನ್‌ಎಸ್‌ಎಸ್, ಎನ್ ಸಿಸಿ ವಿದ್ಯಾರ್ಥಿಗಳು ಅಭಿಯಾನದಲ್ಲಿ ಭಾಗವಹಿಸಿದ್ದರು.

ಮೈಸೂರು ಗ್ರಾಹಕ ಪರಿಷತ್, ಕ್ಲೀನ್ ಮೈಸೂರು ಫೌಂಡೇಷನ್, ರಘುಲಾಲ್ ಮೆಡಿಕಲ್ಸ್ ಸೇರಿದಂತೆ ವಿವಿಧ ಸ್ವಯಂ ಸೇವಕ ಸಂಸ್ಥೆಗಳ ಸದಸ್ಯರು ಸಹ ಅಭಿಯಾನದಲ್ಲಿ ಕೈ ಜೋಡಿಸಿದ್ದರು. ಪಾಲಿಕೆ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಆದ ಸ್ವಚ್ಛ ಭಾರತ ಮಿಷನ್ ನೋಡಲ್ ಅಧಿಕಾರಿ ಕೆ.ಎಸ್.ಮೃತ್ಯುಂಜಯ, ಸಹಾಯಕ ಕಾರ್ಯನಿರ್ವಹಣಾ ಇಂಜಿನಿಯರ್ ಮೀನಾಕ್ಷಿ ಸೇರಿದಂತೆ ಇತರರು ಭಾಗವಹಿಸಿದ್ದರು.

ಸ್ವಚ್ಛತೆ ಬಗ್ಗೆ ಅರಿವು ಮೂಡಿಸಲು ಶಾಲಾ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ



ಸ್ವಚ್ಛ ಸರ್ವೇಕ್ಷಣಾ ಅಭಿಯಾನದ ಅಂಗವಾಗಿ ಮೈಸೂರಿನ ಕುಕ್ಕರಹಳ್ಳಿ ಕೆರೆಯ ಬಳಿ ಶನಿವಾರ ಶಾಲಾ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ ಆಯೋಜಿಸಲಾಗಿತ್ತು.

ಇದೇ ವೇಳೆ ಸ್ವಚ್ಛತೆ ಬಗ್ಗೆ ಮಕ್ಕಳಲ್ಲಿ ಜಾಗೃತಿ ಮೂಡಿಸಲು ಕುಕ್ಕರಹಳ್ಳಿ ಕೆರೆಯ ಬಳಿ ಶಾಲಾ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ ಆಯೋಜಿಸಿತ್ತು.

ಕೆಪಿ ಕಾನ್ವೆಂಟ್, ಸೆಂಟ್ ಪಾಲ್ ಶಾಲೆ, ಲಿಟಲ್ ಇನ್ಫೆಂಟ್ ಶಾಲೆ, ಅಮೃತ್ ವಿದ್ಯಾಲಯ, ವಿದ್ಯಾವರ್ಧಕ ಮತ್ತು ಪ್ರಗತಿ ವಿದ್ಯಾಲಯದ ಶಾಲಾ ಮಕ್ಕಳು ಚಿತ್ರ ಕಲಾ ಸ್ಪರ್ಧೆಯಲ್ಲಿ ಉತ್ಸಾಹದಿಂದ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಸ್ವಚ್ಛತೆ ಹಾಗೂ ಪರಿಸರ ಸಂರಕ್ಷಣೆ ಕುರಿತು ಕಲಾತ್ಮಕ ಚಿತ್ರಗಳನ್ನು ಬಿಡಿಸಿದರು. ಈ ಸ್ಪರ್ಧೆಯ ಮೂಲಕ ಮಕ್ಕಳಿಗೆ ಸ್ವಚ್ಛತೆ ಬಗ್ಗೆ ಪರಿಣಾಮಕಾರಿ ಅರಿವು ಮೂಡಿಸಲಾಯಿತು. ಚಿತ್ರಕಲಾ ಸ್ಪರ್ಧೆಯಲ್ಲಿ ಕೆ.ಪಿ.ಕಾನ್ವೆಂಟ್‌ನ 5ನೇ ತರಗತಿಯ ವಿದ್ಯಾರ್ಥಿನಿ ವೀಣಾಕುಮಾರಿ ಪ್ರಥಮ ಸ್ಥಾನವನ್ನು, ಪ್ರಗತಿ ವಿದ್ಯಾಕೇಂದ್ರದ 7ನೇ ತರಗತಿ ವಿದ್ಯಾರ್ಥಿ ಜಿ.ಹರ್ಷಿತ್ ದ್ವಿತೀಯ ಸ್ಥಾನವನ್ನು ಹಾಗೂ ಅಮೃತ ವಿದ್ಯಾಲಯದ 4ನೇ ತರಗತಿ ವಿದ್ಯಾರ್ಥಿನಿ ಅನ್ವಿತಾ ತೃತೀಯ ಬಹುಮಾನವನ್ನು ಪಡೆದರು.

ಬರಗೂರು ರಾಮಚಂದ್ರಪ್ಪನವರ 'ಸೌಹಾರ್ದ ಭಾರತ ಸಮಾನತೆಯ ಸ್ನೇಹಿತ' ಕೃತಿ ಬಿಡುಗಡೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಾಡೋಜ ಬರಗೂರು ರಾಮಚಂದ್ರಪ್ಪ ಅವರ 'ಸೌಹಾರ್ದ ಭಾರತ ಸಮಾನತೆಯ ಸ್ನೇಹಿತ' ಕೃತಿಯನ್ನು ಮುಕ್ತ ವಿವಿ ಅಕ್ಕ ಮಹದೇವಿ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ನಿರ್ದೇಶಕರಾದ ಪ್ರೊ. ಕವಿತಾ ರೈ ಬಿಡುಗಡೆಗೊಳಿಸಿದರು.

ಮೈಸೂರು, ಜ.10(ಜಿಎ)-ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಡಾ.ರಾಜ್ ಕುಮಾರ್ ಫಿಲಂ ಇನ್‌ಸ್ಟಿಟ್ಯೂಟ್, ಮೈಸೂರು ವಿವಿ ಸಂಶೋಧಕರ ಸಂಘ, ದಲಿತ ವಿದ್ಯಾರ್ಥಿಗಳ ವೇದಿಕೆ ಮೊದಲಾದವುಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಾಡೋಜ ಬರಗೂರು ರಾಮಚಂದ್ರಪ್ಪ ಅವರ 'ಸೌಹಾರ್ದ ಭಾರತ ಸಮಾನತೆಯ ಸ್ನೇಹಿತ' ಕೃತಿಯನ್ನು ಮುಕ್ತ ವಿವಿ ಅಕ್ಕ ಮಹದೇವಿ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ನಿರ್ದೇಶಕರಾದ ಪ್ರೊ. ಕವಿತಾ ರೈ ಬಿಡುಗಡೆಗೊಳಿಸಿದರು.

ನಂತರ ಮಾತನಾಡಿದ ಅವರು, ಸಿನಿಮಾ ರಂಗದಲ್ಲೂ ಸಕ್ರಿಯರಾಗಿರುವ ಹಾಗೂ ಬಂಡಾಯದ ಮೇರು ವ್ಯಕ್ತಿತ್ವವಾಗಿ ಬೆಳೆದಿರುವ ಬರಗೂರು ರಾಮಚಂದ್ರಪ್ಪ ಅವರ ಸಾಮಾಜಿಕ ಬದ್ಧತೆ ಈ ಕೃತಿಯಲ್ಲಿ ಮೂಡಿ ಬಂದಿದೆ. ಜನ ಮಾನಸದ ಬಗೆಗಿನ ಅವರ ಅಲೋಚನೆ ಅಭಿವ್ಯಕ್ತಗೊಂಡಿದೆ. ಹೀಗಾಗಿ ಈ ಕೃತಿ ಬಹು ಮುಖ್ಯವಾದುದಾಗಿದೆ. ನಾವಿಂದು ರೋಗಗ್ರಸ್ಥ ಸಮಾಜದ ನಡುವೆ ಬದುಕುತ್ತಿದ್ದೇವೆಯೇ ಎಂಬ ಚಿಂತೆಗೆ ದೂಡಲ್ಪಟ್ಟಿದ್ದೇವೆ. ಇಂತಹ ಸಾಮಾಜಿಕ ದುಸ್ಥರದ ಸಂದರ್ಭದಲ್ಲಿ ಈ ಕೃತಿ ಸಕಾಲಿಕವಾದುದಾಗಿದೆ ಎಂದರು.

ಸೌಹಾರ್ದತೆ, ಸಮಾನತೆ ಭಾರತದ ಎರಡು ಕಣ್ಣುಗಳಾಗಿದ್ದು, ದ್ವೇಷ ಬಿಟ್ಟು ದೇಶ ಹೇಗೆ ಬದುಕು ಕಟ್ಟಬಹುದೆಂಬುದನ್ನು ಈ ಕೃತಿ ತೋರಿದೆ. ಈ ವೇಳೆ ವಿವೇಕಾನಂದ, ಗಾಂಧಿ ಹಾಗೂ ಅಂಬೇಡ್ಕರ್ ಅವರು ಧರ್ಮದ ಬಗ್ಗೆ ಹೊಂದಿದ್ದ ಅಭಿಪ್ರಾಯ ಇಲ್ಲಿ ವಿಶ್ಲೇಷಣೆಗೊಂಡಿದೆ. ಆದರೆ ಇವರ ಚಿಂತನೆಗೆ ವಿರುದ್ಧವಾಗಿ ಇಂದಿನ ದಿನಗಳಲ್ಲಿ ಧರ್ಮವನ್ನು ತಮ ತಮಗೆ ಬೇಕಾದ ರೀತಿ ಹೇಗೆ ಬಳಸಿಕೊಳ್ಳಲಾಗುತ್ತಿದೆ. ಇದನ್ನು ಸಹಾ ಈ ಕೃತಿಯಲ್ಲಿ ಅನಾವರಣಗೊಳಿಸಲಾಗಿದೆ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ನಟ್ರಾಜ್ ಶಿವು, ವರಹಳ್ಳಿ ಆನಂದ್, ತಲಕಾಡು ಕೃಷ್ಣಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ...



ಮೈಸೂರಿನ ಯಾದವ(ಗೊಲ್ಲರ) ಸಂಘದ ವತಿಯಿಂದ ದಿವಾನ್ಸ್ ರಸ್ತೆಯಲ್ಲಿರುವ ಸಂಘದ ಆವರಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಮುಡಾ ಮಾಜಿ ಅಧ್ಯಕ್ಷ, ಜಿಲ್ಲಾ ಯಾದವ ಸಂಘದ ಅಧ್ಯಕ್ಷರೂ ಆದ ಡಿ.ಧ್ರುವಕುಮಾರ್, ನಗರಪಾಲಿಕೆ ಮಾಜಿ ಸದಸ್ಯ ಎನ್.ಪ್ರಕಾಶ್, ನಾಗೇಶ್ ಯಾದವ್, ಯೋಗೇಶ್ ಯಾದವ್, ಜವರೇಗೌಡ, ಸತ್ಯನಾರಾಯಣ ಯಾದವ್ ಮತ್ತಿತರರು ಉಪಸ್ಥಿತರಿದ್ದರು.

ಕ್ರೀಡೆ ಮೂಲಕ ಜೀವನದಲ್ಲಿ ಉನ್ನತ ಮಟ್ಟಕ್ಕೇರಬಹುದು

● ಶಾಸಕ ಟಿ.ಎಸ್.ಶ್ರೀವತ್ಸ ಅಭಿಮತ ● ರಾಜ್ಯ ಮಟ್ಟದ ಸೀನಿಯರ್ ಖೋ-ಖೋ ಚಾಂಪಿಯನ್ ಶಿಪ್‌ಗೆ ಚಾಲನೆ



ಉದ್ಘಾಟನಾ ಪಂದ್ಯದಲ್ಲಿ ಮೈಸೂರು ಖೋ-ಖೋ ತಂಡವನ್ನು ಅತಿಥಿ ಗಣ್ಯರು ಪರಿಚಯಿಸಿಕೊಂಡರು.

▶ ರಾಜ್ಯ ಮಟ್ಟದ ಸೀನಿಯರ್ ಖೋಖೋ ಚಾಂಪಿಯನ್ ಶಿಪ್ 2026ರಲ್ಲಿ ಮೈಸೂರು ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಯ 10 ತಂಡಗಳು ಭಾಗವಹಿಸಿದ್ದವು. ಈ ತಂಡಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಲಾಗಿದ್ದು, ಪ್ರತಿ ಗುಂಪಿನಲ್ಲಿ ಎರಡು ತಂಡಗಳು ಅರ್ಹತೆ ಪಡೆದು, ಮುಂದಿನ ಹಂತಕ್ಕೆ ತಲುಪುತ್ತವೆ. ಜೊತೆಗೆ ಈ ಟೂರ್ನಿಯಲ್ಲಿ ಭಾಗವಹಿಸಿ ಉತ್ತಮ ಪ್ರದರ್ಶನ ನೀಡುವ ಆಟಗಾರರನ್ನು ಆಯ್ಕೆಗಾರರ ಸಮಿತಿ ರಾಜ್ಯ ಮಟ್ಟಕ್ಕೆ ಆಯ್ಕೆ ಮಾಡಿಕೊಳ್ಳಲಿದೆ.

ಮೈಸೂರು, ಜ.10(ವಿವಿಹೆಚ್)-ಕ್ರೀಡೆಯೆಂಬುದು ಬದುಕಿಗೆ ಸ್ಫೂರ್ತಿ ತುಂಬುವ ಚಟುವಟಿಕೆ. ಈ ಕ್ರೀಡೆಯ ಜೊತೆಗೆ ಕ್ರೀಡಾಪಟುಗಳು ಶಿಸ್ತು, ಸಂಯಮವನ್ನು ಮೈಗೂಡಿಸಿಕೊಂಡರೆ ಜೀವನದಲ್ಲಿ ಉನ್ನತ ಮಟ್ಟಕ್ಕೆ ತಲುಪಬಹುದು ಎಂದು ಶಾಸಕ ಟಿ.ಎಸ್ ಶ್ರೀವತ್ಸ ತಿಳಿಸಿದರು.

ಮೈಸೂರಿನ ಕುವೆಂಪುನಗರದ ವಿವೇಕಾನಂದ ಕ್ರೀಡಾಂಗಣದಲ್ಲಿ ಕರ್ನಾಟಕ ಅಮೇಚೂರ್ ಖೋಖೋ ಅಸೋಸಿಯೇಷನ್ (ಕೆಎಕೆಕೆಎ) ಹಾಗೂ ಮೈಸೂರು ಜಿಲ್ಲಾ ಅಮೆಚ್ಯೂರ್ ಖೋಖೋ ಅಸೋಸಿಯೇಷನ್(ಎಂಡಿಎಕೆಕೆಎ) ವತಿಯಿಂದ ಕರ್ನಾಟಕ ಅಮೇಚೂರ್ ಖೋಖೋ ಸಂಸ್ಥೆಯ ಮಾಜಿ ಅಧ್ಯಕ್ಷ ಎನ್.ಪ್ರಕಾಶ್ ಸ್ಮರಣಾರ್ಥ ಆಯೋಜಿಸಲಾಗಿರುವ ಪುರುಷರಿಗಾಗಿ ರಾಜ್ಯ ಮಟ್ಟದ ಸೀನಿಯರ್ ಖೋಖೋ ಚಾಂಪಿಯನ್ ಶಿಪ್ 2026 ಪಂದ್ಯಾವಳಿ ಉದ್ಘಾಟಿಸಿ ಮಾತನಾಡಿದರು.

ರಾಜ್ಯದ ಅನೇಕ ಜಿಲ್ಲೆಯಿಂದ ಮೈಸೂರಿಗೆ ಆಗಮಿಸಿ ಕ್ರೀಡೆಯಲ್ಲಿ ತೊಡಗಿಸಿಕೊಳ್ಳುತ್ತಿರುವುದು ಅತ್ಯಂತ ಶ್ಲಾಘನೀಯ. ಕ್ರೀಡೆಯೆಂಬುದೇ ಹಾಗೆ ಎಲ್ಲರನ್ನು ತನ್ನತ್ತ ಸೆಳೆಯುತ್ತಿರುತ್ತದೆ. ಇಂತಹ ಕ್ರೀಡಾ ಚಟುವಟಿಕೆಗಳ ಆಯೋಜನೆಗೆ ಮೈಸೂರು ಹೆಸರುವಾಸಿಯಾಗಿದ್ದು, ಇಲ್ಲಿ ಕ್ರೀಡೆಗೆ ಯಾವಾಗಲೂ ಪ್ರೋತ್ಸಾಹವಿರುತ್ತದೆ ಎಂದರು.

ಇತ್ತೀಚೆಗೆ ಮೈಸೂರಿನಲ್ಲಿ ಅಂಧ ಹೆಣ್ಣುಮಕ್ಕಳ ಕ್ರಿಕೆಟ್ ಕ್ರೀಡಾಕೂಟ ಆಯೋಜನೆಗೊಂಡಿತ್ತು. ಕ್ರೀಡೆಯಲ್ಲಿ ಆಸಕ್ತಿಯಿರದ ಎಷ್ಟೋ ಜನರ ನಡುವೆ, ಅಂಧ ಹೆಣ್ಣು ಮಕ್ಕಳು ಬರೀ ಚೆಂಡಿನ ಒಳಗೆ ಹಾಕಲಾಗಿರುವ ಗೆಜ್ಜೆ ಶಬ್ದ ಆಲಿಸಿಕೊಂಡು ಅತ್ಯುತ್ತಮ ಪ್ರದರ್ಶನ ತೋರಿದರು. ಇದು ಕ್ರೀಡಾ ಸ್ಫೂರ್ತಿ ಹಾಗೂ ಕ್ರೀಡೆಯ ಶಕ್ತಿ ಏನೆಂಬುದು ತಿಳಿಯುತ್ತದೆ ಎಂದು ವಿವರಿಸಿದರು.

ಮೈಸೂರು ಜಿಲ್ಲಾ ಅಮೇಚೂರ್ ಖೋಖೋ ಅಸೋಸಿಯೇಷನ್ ಅಧ್ಯಕ್ಷ ನಾಗರಾಜ್ ವಿ.ಬೈರಿ ಮಾತನಾಡಿ, ಖೋ-ಖೋ ಆಟ ಸೋಲನ್ನು ಸ್ವೀಕರಿಸುವುದನ್ನು, ಗೆಲುವಿನ ಹಿಂದೆ ಓಡುವುದನ್ನು ಕಲಿಸುವ ಮೂಲಕ, ಪ್ರತಿಯೊಬ್ಬರ ಆತ್ಮವಿಶ್ವಾಸ ಹೆಚ್ಚಿಸಲು ಸಹಕಾರಿಯಾಗುತ್ತದೆ. ಖೋಖೋ ನಮ್ಮ ದೇಶಿಯ ಕ್ರೀಡೆ. ಅದು ನಮ್ಮ ಅಸ್ಮಿತೆ. ಈ ಕ್ರೀಡೆಯನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವ ಕೆಲಸ ಆಗಬೇಕಿದೆ. ಆ ಮೂಲಕ ಈ ಕ್ರೀಡೆಯನ್ನು ಒಲಂಪಿಕ್‌ನಲ್ಲಿ ಸೇರಿಸುವಂತಾಗಬೇಕು ಎಂದು ತಿಳಿಸಿದರು.

ಎಂಡಿಎಕೆಕೆಎ ಹಿರಿಯ ಉಪಾಧ್ಯಕ್ಷ ಸಿ.ಎಸ್ ಮಂಜುನಾಥ್, ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ, ಉಪಾಧ್ಯಕ್ಷರಾದ ಎಚ್.ಆರ್.ಭಗವಾನ್, ಎನ್.ಅಶೋಕ್, ಎನ್.ಜೀವೇಂದ್ರ ಕುಮಾರ್, ಖಜಾಂಚಿ ಸಂದೇಶ್ ಪ್ರಕಾಶ್, ಕೆಎಕೆಕೆಎ ಕಾರ್ಯದರ್ಶಿ ಚಿನ್ನಮೂರ್ತಿ, ಸಹ ಕಾರ್ಯದರ್ಶಿ ಸಿ.ಎಫ್ ಜಾಡರ್, ನಮ್ಮೂರು ನಮ್ಮೋರು ಸಮಾಜ ಸೇವಾ ಟ್ರಸ್ಟ್ ಮೈಸೂರು ಅಧ್ಯಕ್ಷ ಬಿಡನ ಹಳ್ಳಿ ಸತೀಶ್ ಗೌಡ, ಸಮಾಜಸೇವಕ ಬಿ.ಸುಂದರ್ ಮತ್ತಿತರರು ಉಪಸ್ಥಿತರಿದ್ದರು.

ಬಜೆಟ್ ಬಳಿಕವೇ ಬದಲಾವಣೆ



ಬೀದರ್: ಮುಖ್ಯಮಂತ್ರಿ ಬದಲಾವಣೆ ಚರ್ಚೆಗಳ ನಡುವೆ ಸದ್ಯಕ್ಕೆ ಯಾವುದೇ ಬದಲಾವಣೆ ಕಷ್ಟ ಏನಿದ್ದರೂ ರಾಜ್ಯದ ಭಂಡಾರ ಅಂದರೆ ಬಜೆಟ್ ಬಳಿಕವೇ ಬದಲಾವಣೆ ಎಂದು ಕೋಡಿಮಠದ ಸ್ವಾಮೀಜಿ ಭವಿಷ್ಯ ನುಡಿದಿದ್ದಾರೆ.

ಬೀದರ್ ನಗರದಲ್ಲಿ ಶನಿವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು ಒಮ್ಮೆ ಹಾಲುಮತದವರ ಕೈಗೆ ಅಧಿಕಾರ ಬಂದರೆ ಬಿಡಿಸಿಕೊಳ್ಳುವುದು ಕಷ್ಟ. ಈ ಸಮಾಜದಿಂದ ಸಿದ್ದರಾಮಯ್ಯನವರು ಮೊಟ್ಟ ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿದ್ದಾರೆ. ಹಾಗಾಗಿ, ಆ ಸಮಾಜಕ್ಕೆ ಅಧಿಕಾರ ಸಿಕ್ಕಿದೆ. ಅವರನ್ನು ಇಳಿಸುವುದು ಕಷ್ಟ, ಅವರಾಗಿಯೇ ಸಿಎಂ ಸ್ಥಾನವನ್ನು ಬಿಟ್ಟು ಕೊಟ್ಟರೆ ಬೇರೆಯವರು ಮುಖ್ಯಮಂತ್ರಿಯಾಗಬಹುದು. ಆದರೆ, ಅವರು ಬಿಟ್ಟು ಕೊಡಲ್ಲ, ಇಳಿಯೋದೂ ಇಲ್ಲ. ಯುಗಾದಿ ಕಳೆದ ನಂತರವೇ ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಹೇಳುವೆ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ನಮಗೆ ಪರಿಚಯಸ್ಥರು. ಅವರ ಕುರಿತು ಹೇಳಲು ಸದ್ಯಕ್ಕೆ ಏನೂ ಇಲ ಎಂದಿದ್ದಾರೆ.

ಕಾಳೇನ ಅಗ್ರಹಾರದಿಂದ ತಾವರೆಕೆರೆವರೆಗೆ ಇಂದಿನಿಂದ ಮೆಟ್ರೋ ರೈಲು ಪರೀಕ್ಷಾರ್ಥ ಸಂಚಾರ

ಬೆಂಗಳೂರು: ಬನ್ನೇರುಘಟ್ಟ ರಸ್ತೆಯ ಕಾಳೇನ ಅಗ್ರಹಾರದಿಂದ ತಾವರೆಕೆರೆವರೆಗಿನ 7.5 ಕಿ.ಮೀ. ಉದ್ದದ ಗುಲಾಬಿ ಮಾರ್ಗದಲ್ಲಿ ಪರೀಕ್ಷಾರ್ಥ ಮೆಟ್ರೋ ರೈಲು ಸಂಚಾರವು ಭಾನುವಾರದಿಂದ ಆರಂಭವಾಗಲಿದ್ದು, ವರ್ಷಾಂತ್ಯದೊಳಗೆ ಈ ಮಾರ್ಗದಲ್ಲಿ ವಾಣಿಜ್ಯ ಕಾರ್ಯಾಚರಣೆ ನಡೆಸಲು ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ(ಬಿಎಂಆರ್‌ಸಿಎಲ್) ಸಿದ್ಧತೆ ನಡೆಸಿದೆ. ಈ ಮಾರ್ಗದಲ್ಲಿ ಏಪ್ರಿಲ್‌ವರೆಗೆ ಪರೀಕ್ಷಾರ್ಥ ರೈಲು ಸಂಚಾರ ನಡೆಯಲಿದೆ. ಈ ಅವಧಿಯಲ್ಲಿ ಟ್ರ್ಯಾಕ್ಷನ್, ಬ್ರೇಕ್, ಆಸಿಲೇಷನ್, ಸಿಗ್ನಲಿಂಗ್, ವಿದ್ಯುತ್ ಮತ್ತು ದೂರ ಸಂಪರ್ಕ ವ್ಯವಸ್ಥೆ ಸೇರಿದಂತೆ ಇನ್ನಿತರೆ ಹಲವು ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಬಳಿಕ ಆರ್‌ಡಿಎಸ್‌ಒ, ಸಿಎಂಆರ್‌ಎಸ್ ತಜ್ಞರ ತಂಡಗಳು ಪರಿಶೀಲನೆ ನಡೆಸಿ ವರದಿ ಸಲ್ಲಿಸಲಿವೆ. ಈ ವರದಿ ಆಧರಿಸಿ ಕೇಂದ್ರ ರೈಲ್ವೆ ಮಂಡಳಿಯು ಸುರಕ್ಷತಾ ಪ್ರಮಾಣಪತ್ರ ನೀಡಲಿದ್ದು, ಆನಂತರವೇ ವಾಣಿಜ್ಯ ಸಂಚಾರ ಆರಂಭಿಸಲಾಗುತ್ತದೆ ಎನ್ನಲಾಗಿದೆ.

ದೇಶ - ವಿದೇಶ

ಯೂಟ್ಯೂಬ್ ನೋಡಿಕೊಂಡು ಆಪರೇಷನ್; ಮಹಿಳೆ ಸಾವು



ನವದೆಹಲಿ: ಹೊಟ್ಟೆ ನೋವಿನಿಂದ ನರಳುತ್ತಿದ್ದ ಗರ್ಭಿಣಿಗೆ ನಕಲಿ ವೈದ್ಯನೊಬ್ಬ ಯೂಟ್ಯೂಬ್ ವಿಡಿಯೋ ನೋಡಿಕೊಂಡು ಆಪರೇಷನ್ ಮಾಡಿ ಎಡವಟ್ಟು ಮಾಡಿದ್ದಾನೆ.

ನಕಲಿ ವೈದ್ಯನ ಹುಚ್ಚಾಟದಿಂದ ಮಹಿಳೆ ಮೃತಪಟ್ಟಿದ್ದು, ಅದೃಷ್ಟವಶಾತ್ ಮಗು ಬದುಕುಳಿದಿದೆ. ಬಿಹಾರದ ಭಾಗಲ್ಪುರದಲ್ಲಿ ಈ ಅಮಾನವೀಯ ಘಟನೆ ನಡೆದಿದ್ದು, ಆತ ಅಕ್ರಮವಾಗಿ ನಡೆಸುತ್ತಿದ್ದ ಆಸ್ಪತ್ರೆಯನ್ನು ಸೀಜ್ ಮಾಡಲಾಗಿದೆ. ಆದರೆ ಮಹಿಳೆಯ ಕುಟುಂಬದವರು ಇನ್ನೂ ಪ್ರಕರಣ ದಾಖಲಿಸಿಲ್ಲ ಎಂದು ತಿಳಿದುಬಂದಿದೆ.

ಜಾರ್ಖಂಡ್‌ನ ಠಾಕೂರ್‌ಗಂಟಿ ಮೋದಿಯಾದ ರೋಷನ್ ಪತ್ನಿ ಸ್ವಾತಿ ದೇವಿ ಮೃತಪಟ್ಟಿದ್ದು, ಇವರು ಗರ್ಭಿಣಿಯಾದ ನಂತರ ರಸಲ್‌ಪುರದಲ್ಲಿರುವ ತವರು ಮನೆಯಲ್ಲಿದ್ದುಕೊಂಡು, ಶ್ರೀಮಠ ಸ್ಥಾನದ ಬಳಿಯ ನಕಲಿ ವೈದ್ಯರ ಬಳಿ ಚಿಕಿತ್ಸೆ ಪಡೆಯುತ್ತಿದ್ದರು. ಹಠಾತ್ತನೆ ಹೆರಿಗೆ ನೋವಿನಿಂದ ಆಸ್ಪತ್ರೆಗೆ ಹೋಗಿದ್ದಾಗ ನಕಲಿ ವೈದ್ಯ ಹೆರಿಗೆಯ ಕಾರ್ಯವಿಧಾನವನ್ನು ಅರಿಯಲು ಯೂಟ್ಯೂಬ್ ವೀಡಿಯೊ ನೋಡಲು ಆರಂಭಿಸಿದ್ದಾನೆ. ಕೊನೆಗೆ ಅಗತ್ಯ ವೈದ್ಯಕೀಯ ಸಹಾಯವಿಲ್ಲದೆಯೇ ಆಪರೇಷನ್ ಮಾಡಿದ್ದಾನೆ. ಈ ವೇಳೆ ಮಹಿಳೆಗೆ ತೀವ್ರ ರಕ್ತಸ್ರಾವವಾಗಿ ಸಾವನ್ನಪ್ಪಿದ್ದಾರೆ. ವಿಷಯ ತಿಳಿಯುತ್ತಿದ್ದಂತೆ ಆಸ್ಪತ್ರೆಗೆ ಮುತ್ತಿಗೆ ಹಾಕಿ ವೈದ್ಯರ ವಿರುದ್ಧ ಆಕ್ರೋಶ ಹೊರಹಾಕಿದ್ದಾರೆ.

ನೊಬೆಲ್ ಶಾಂತಿ ಪ್ರಶಸ್ತಿಗೆ ನನ್ನಷ್ಟು ಅರ್ಹರು ಯಾರಿಲ್ಲ!



ನ್ಯೂಯಾರ್ಕ್: 'ಭಾರತ ಮತ್ತು ಪಾಕಿಸ್ತಾನ ನಡುವಿನ ಯುದ್ಧ ನಿಲ್ಲಿಸಿದ್ದು ನಾನೇ', 'ನೊಬೆಲ್ ಶಾಂತಿ ಪ್ರಶಸ್ತಿ ಪಡೆಯಲು ತಮ್ಮಷ್ಟು ಅರ್ಹರು ಇತಿಹಾಸದಲ್ಲಿ ಯಾರೂ ಇಲ್ಲ' ಘೋಷಣೆಗಳನ್ನು ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪುನರುಚ್ಚರಿಸಿದ್ದಾರೆ. ಶ್ವೇತಭವನದಲ್ಲಿ ತೈಲ ಮತ್ತು ಅನಿಲ ಕಾರ್ಯನಿರ್ವಾಹಕರೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಟ್ರಂಪ್, ಕಳೆದ ವರ್ಷ ಮೇ ತಿಂಗಳಲ್ಲಿ ನಡೆದ ಭಾರತ ಮತ್ತು ಪಾಕಿಸ್ತಾನ ಸಂಘರ್ಷದಲ್ಲಿ 8 ಜೆಟ್‌ಗಳನ್ನು ಹೊಡೆದುರುಳಿಸಿದ್ದೇವೆ ಎಂದು ಮತ್ತೆ ಹೇಳಿದ್ದಾರೆ. ಆದರೆ ಅವರು ಹೊಡೆದುರುಳಿಸಿದ ಜೆಟ್‌ಗಳು ಯಾವ ದೇಶಕ್ಕೆ ಸೇರಿದವು ಎಂಬುದನ್ನು ಸ್ಪಷ್ಟಪಡಿಸಿಲ್ಲ.

ಜನ ನನ್ನನ್ನು ಇಷ್ಟಪಡುತ್ತಾರೋ ಇಲ್ಲವೋ, ಆದರೆ 36 ವರ್ಷಗಳಿಂದ, 32, 28 ಹಾಗೂ 25 ವರ್ಷ ಗಳಿಂದ ನಡೆಯುತ್ತಿದ್ದ ದೊಡ್ಡದಾದ 8 ಯುದ್ಧಗಳನ್ನು ನಾನು ನಿಲ್ಲಿಸಿದ್ದೇನೆ. ಭಾರತ ಮತ್ತು ಪಾಕಿಸ್ತಾನದಂತೆ ಸಂಘರ್ಷ ಪ್ರಾರಂಭಿಸಲು ಸಿದ್ಧವಾಗಿದ್ದವರನ್ನೂ ಸುಮ್ಮನಾಗಿಸಿದ್ದೇನೆ. ಶ್ವೇತಭವನದಲ್ಲಿ ಎರಡನೇ ಅವಧಿಯ 8 ತಿಂಗಳೊಳಗೆ ಎಂಟು ಯುದ್ಧಗಳನ್ನು ನಿಲ್ಲಿಸಿರುವುದರಿಂದ ಇತಿಹಾಸದಲ್ಲಿ ನನಗಿಂತ ನೊಬೆಲ್ ಶಾಂತಿ ಪ್ರಶಸ್ತಿಗೆ ಅರ್ಹರು ಯಾರೂ ಇಲ್ಲ. ಈ ಬಗ್ಗೆ ನಾನು ಹೆಮ್ಮೆಪಡಲು ಬಯಸುವುದಿಲ್ಲ. ಆದರೆ ಬೇರೆ ಯಾರು ಯುದ್ಧಗಳನ್ನು ಇತ್ಯರ್ಥಪಡಿಸಲಿಲ್ಲ ಎಂದು ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ವೀಸಾ ಪಾಸ್‌ಪೋರ್ಟ್ ಇಲ್ಲದೆ ಗಡಿ ಪ್ರವೇಶ; ಚೀನಿ ಮಹಿಳೆ ಸೆರೆ



ಲಕ್ನೋ: ಭಾರತ-ನೇಪಾಳ ಗಡಿಯ ಮೂಲಕ ಉತ್ತರ ಪ್ರದೇಶದ ಮಹಾರಾಜಗಂಜ್ ಜಿಲ್ಲೆಯಲ್ಲಿ ಮಾನ್ಯವಾದ ವೀಸಾ ಮತ್ತು ಪಾಸ್‌ಪೋರ್ಟ್ ಇಲ್ಲದೆ ಭಾರತವನ್ನು ಪ್ರವೇಶಿಸಲು ಯತ್ನಿಸಿದ ಚೀನಿ ಮಹಿಳೆಯನ್ನು ಬಂಧಿಸಲಾಗಿದೆ. ಯಾವುದೇ ವೀಸಾ ಇಲ್ಲದೆ ಭಾರತ-ನೇಪಾಳ ಗಡಿಯಲ್ಲಿ ದೇಶದ ಒಳಗೆ ನುಸುಳಿದ್ದು, ಈ ಮಹಿಳೆಯನ್ನು ಹುಯಾಜಿಯಾ ಜಿ ಎಂದು ಗುರುತಿಸಲಾಗಿದೆ. ಈಕೆ ಶುಕ್ರವಾರ ಮಧ್ಯಾಹ್ನ ಉತ್ತರ ಪ್ರದೇಶದ ಮಹಾರಾಜ್‌ಗಂಜ್ ಬೈರಿಯಾ ಬಜಾರ್ ಬಳಿ ಪಾದಚಾರಿ ಮಾರ್ಗದಿಂದ ಭಾರತಕ್ಕೆ ಪ್ರವೇಶಿಸುತ್ತಿದ್ದಾಗ ಪತ್ತೆಯಾಗಿದ್ದಾಳೆ. ಈಕೆಯನ್ನು ಸಶಸ್ತ್ರ ಸೀಮಾಬಲ್ ಪಡೆಯ ಅಧಿಕಾರಿಗಳು ಬಂಧಿಸಿ ವಿಚಾರಣೆ ನಡೆಸಿದ ನಂತರ ಪೊಲೀಸರಿಗೆ ಒಪ್ಪಿಸಲಾಗಿದೆ. ಈ ಕುರಿತು ಮಾತನಾಡಿರುವ ನೌತನ್ವಾ ಠಾಣೆಯ ಅಧಿಕಾರಿ ಪುರುಷೋತ್ತಮ ರಾವ್, ಮಹಿಳೆಯ ಬಳಿ ದೊರೆತ ಚೀಟಿಯ ಆಧಾರದ ಮೇಲೆ ಈಕೆ ಚೀನಿ ಪ್ರಜೆಯೆಂದು ಗುರುತಿಸಲಾಗಿದೆ. ಆಕೆಯ ಹೆಸರು ಸದ್ಯ ಹುಯಾಜಿಯಾ ಜಿ ಎಂದು ತಿಳಿದಿದ್ದು, ಭಾಷಾ ಸಮಸ್ಯೆಯಿಂದಾಗಿ ಆಕೆಯ ಕಡೆಯಿಂದ ಯಾವುದೇ ನಿರ್ದಿಷ್ಟ ಮಾಹಿತಿ ಸಂಗ್ರಹಿಸಲು ಸಾಧ್ಯವಾಗಿಲ್ಲ. ಹಾಗಾಗಿ ಹೆಚ್ಚಿನ ತನಿಖೆ ಬಳಿಕ ಆಕೆಯ ಮೂಲ, ಭಾರತಕ್ಕೆ ಭೇಟಿ ನೀಡಿರುವ ಉದ್ದೇಶವೇನು ಎಂದು ತಿಳಿಯಬೇಕಿದೆ ಎಂದಿದ್ದಾರೆ.

ಇರಾನ್‌ನಲ್ಲಿ ಭುಗಿಲೆದ್ದ ಹಿಂಸಾಚಾರ; ರಾಜಧಾನಿಯಲ್ಲೇ 217 ಮಂದಿ ಬಲಿ



ಟೆಹ್ರಾನ್: ಇರಾನ್ ಸರ್ಕಾರದ ವಿರುದ್ಧ ನಡೆಯುತ್ತಿರುವ ಪ್ರತಿಭಟನೆ ಈಗ 13 ದಿನಕ್ಕೆ ಕಾಲಿಟ್ಟಿದ್ದು, ಹಿಂಸಾಚಾರ ಮತ್ತಷ್ಟು ಹೆಚ್ಚಿದೆ ಸರ್ಕಾರದ ಸೂಚನೆ ಮೇರೆಗೆ ಭದ್ರತಾ ಪಡೆಗಳು ಹಲವು ಸ್ಥಳಗಳಲ್ಲಿ ಗುಂಡು ಹಾರಿಸಿದ್ದು, 200ಕ್ಕೂ ಹೆಚ್ಚು ಮಂದಿ ಸಾವನ್ನಪ್ಪಿರುವುದಾಗಿ ವರದಿಯಾಗಿದೆ. ವೈದ್ಯರ ಮಾಹಿತಿ ಪ್ರಕಾರ, ರಾಜಧಾನಿ ಟೆಹ್ರಾನ್‌ನಲ್ಲಿರುವ 6 ಆಸ್ಪತ್ರೆಗಳಲ್ಲಿ ಕನಿಷ್ಠ 217 ಪ್ರತಿಭಟನಾಕಾರರು ಸಾವನ್ನಪ್ಪಿದ್ದಾರೆ. ಈ ಪೈಕಿ ಹೆಚ್ಚಿನವರು ಗುಂಡಿನ ದಾಳಿಗೆ ಬಲಿಯಾಗಿದ್ದಾರೆ ಎಂದು ತಿಳಿದುಬಂದಿದೆ. ಅಲ್ಲದೇ ಉತ್ತರ ಟೆಹ್ರಾನ್‌ನಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಯುವ ಸಮೂಹದ ಮೇಲೆ ಏಕಾಏಕಿ ಗುಂಡಿನ ಮಳೆಗರೆದಿದ್ದು, 30ಕ್ಕೂ ಹೆಚ್ಚು ಮಂದಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಖಮೇನಿ ಸರ್ಕಾರದ ವಿರುದ್ಧ 2025ರ ಡಿ.28ರಂದು ಶುರುವಾದ ಪ್ರತಿಭಟನೆಗಳು ತೀವ್ರ ಸ್ವರೂಪ ಪಡೆಯುತ್ತಿದ್ದಂತೆ ದೇಶಾದ್ಯಂತ ಇಂಟರ್‌ನೆಟ್ ಮತ್ತು ಫೋನ್ ಸಂಪರ್ಕಗಳನ್ನ ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿದೆ. ಇರಾನ್‌ನಿಂದ ಗಡಿಪಾರು ಆಗಿರುವ ಯುವರಾಜ ರೇಜಾ ಪಹ್ಲವಿ ಅವರು ಸಾಮೂಹಿಕ ಪ್ರತಿಭಟನೆಗೆ ಕರೆ ನೀಡಿದ ಬೆನ್ನಲ್ಲೇ ತಡರಾತ್ರಿ ಟೆಹರಾನ್ ಮತ್ತು ಇತರ ನಗರಗಳಲ್ಲಿ ಸಾವಿರಾರು ಜನರು ಬೀದಿಗಿಳಿದು ಖಮೇನಿ ವಿರುದ್ಧ ಘೋಷಣೆ ಕೂಗುತ್ತಿದ್ದಾರೆ. ಮುಲ್ಲಾಗಳೇ ದೇಶಬಿಟ್ಟು ತೊಲಗಿ ಎಂದು ಜನರು ಘೋಷಣೆ ಕೂಗಿ ಟೆಹರಾನ್‌ನಲ್ಲಿರುವ ಸರ್ಕಾರಿ ಕಚೇರಿಗೆ ಬೆಂಕಿ ಹಾಕಿ ಆಕ್ರೋಶ ಹೊರಹಾಕಿದ್ದಾರೆ.

10 ತಿಂಗಳ ಮಗುವಿಗೆ ವಿಷವುಣಿಸಿ ಆತ್ಮಹತ್ಯೆಗೆ ಶರಣಾದ ತಾಯಿ



ಹೈದರಾಬಾದ್: ಕೌಟುಂಬಿಕ ಕಲಹದಿಂದ ಬೇಸತ್ತು ಮಹಿಳೆಯೊಬ್ಬಳು ತನ್ನ 10 ತಿಂಗಳ ಮಗನಿಗೆ ವಿಷವುಣಿಸಿ ತಾನೂ ಆತ್ಮಹತ್ಯೆಗೆ ಶರಣಾದ ಘಟನೆ ಹೈದರಾಬಾದ್‌ನಲ್ಲಿ ನಡೆದಿದೆ. ತಾಯಿ ಮತ್ತು ಮಗು ಸತ್ತಿರುವುದನ್ನು ನೋಡಿ ಮಗುವಿನ ಅಜ್ಜಿ ಕೂಡ ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಆತ್ಮಹತ್ಯೆಗೆ ಶರಣಾದ ಮಹಿಳೆ ಸುಷ್ಮಾ (27). 4 ವರ್ಷಗಳ ಹಿಂದೆ ಚಾರ್ಟರ್ಡ್ ಅಕೌಂಟೆಂಟ್ ಆಗಿದ್ದ ಯಶವಂತ್ ರೆಡ್ಡಿ ಎಂಬುವರನ್ನು ವಿವಾಹವಾಗಿದ್ದರು. ಇತ್ತೀಚಿನ ದಿನಗಳಲ್ಲಿ ದಂಪತಿ ಆಗಾಗ ಜಗಳವಾಡುತ್ತಿದ್ದರು ಎಂದು ಕುಟುಂಬದವರು ಪೊಲೀಸರಿಗೆ ತಿಳಿಸಿದ್ದಾರೆ. ಸುಷ್ಮಾ ಕಾರ್ಯಕ್ರಮವೊಂದಕ್ಕೆ ಸಂಬಂಧಿಸಿದಂತೆ ಶಾಪಿಂಗ್‌ಗಾಗಿ ತನ್ನ ತಾಯಿ ಲಲಿತಾ (44) ಅವರ ಮನೆಗೆ ಹೋಗಿದ್ದರು. ಈ ವೇಳೆ ತನ್ನ ಮಗುವಿನೊಂದಿಗೆ ಮತ್ತೊಂದು ಕೋಣೆಗೆ ಹೋಗಿ, ಮಗುವಿಗೆ ವಿಷ ನೀಡಿ, ನಂತರ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಪತಿ ಕೆಲಸ ಮುಗಿಸಿ ವಾಪಸ್ ಮನೆಗೆ ಬಂದು ರೂಮ್ ಒಳಗಿನಿಂದ ಲಾಕ್ ಆಗಿರುವುದನ್ನು ಕಂಡು, ಬಾಗಿಲು ಒಡೆದು ನೋಡಿದ್ದಾರೆ. ಈ ವೇಳೆ ಹೆಂಡತಿ ಮತ್ತು ಮಗ ಪ್ರಜ್ಞಾಹೀನ ಸ್ಥಿತಿಯಲ್ಲಿ ಬಿದ್ದಿರುವುದು ಗೊತ್ತಾಗಿದೆ. ತಕ್ಷಣ ಅವರನ್ನು ಆಸ್ಪತ್ರೆಗೆ ಸಾಗಿಸಲಾಯಿತು. ವೈದ್ಯರು ಇಬ್ಬರು ಮೃತಪಟ್ಟಿದ್ದಾರೆ ಎಂದು ತಿಳಿಸಿದ್ದಾರೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡು ಶವಗಳನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಿದ್ದಾರೆ. ಈ ಸಂಬಂಧ ಕುಟುಂಬದ ಸದಸ್ಯರ ಹೇಳಿಕೆಗಳನ್ನು ದಾಖಲಿಸಿದ್ದಾರೆ.

ಎಸ್‌ಪಿ ಹೆಸರಿನಲ್ಲಿ ನಕಲಿ ಫೇಸ್‌ಬುಕ್ ಖಾತೆ: ಏನೂ ಪ್ರತಿಕ್ರಿಯೆ ನೀಡಬೇಡಿ

ಮಡಿಕೇರಿ: ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್.ಬಿಂದುಮಣಿ ಹೆಸರಿನಲ್ಲಿ ಕಿಡಿಗೇಡಿಗಳು ನಕಲಿ ಫೇಸ್ ಬುಕ್ ಖಾತೆಯನ್ನು ತೆರೆದು 'ಫ್ರೆಂಡ್ ರಿಕ್ವೆಸ್ಟ್' ಕಳುಹಿಸುತ್ತಿದ್ದಾರೆ. ಇದಕ್ಕೆ ಸಾರ್ವಜನಿಕರು ಪ್ರತಿಕ್ರಿಯೆ ನೀಡಬಾರದು ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.



ಕಿಡಿಗೇಡಿಗಳು ಎಸ್.ಪಿ ಹೆಸರಿನಲ್ಲಿ ತೆರೆದಿರುವ ನಕಲಿ ಫೇಸ್‌ಬುಕ್ ಖಾತೆ.

ಇತ್ತೀಚೆಗಷ್ಟೇ ಕೊಡಗು ಎಸ್‌ಪಿಯಾಗಿ ಅಧಿಕಾರ ವಹಿಸಿಕೊಂಡ ಬಿಂದುಮಣಿ ಅವರ ಹೆಸರನ್ನು ದುರ್ಬಳಕೆ ಮಾಡಿರುವ ಪ್ರಕರಣ ಬೆಳಕಿಗೆ ಬಂದಿದೆ. 'ಬಿಂದು ಮಣಿ ಐಪಿಎಸ್, ಎಸ್‌ಪಿ ಕೊಡಗು ಡಿಸ್ಟ್ರಿಕ್ಟ್' ಎಂದು ನಕಲಿ ಫೇಸ್ ಬುಕ್ ಖಾತೆ ಸೃಷ್ಟಿಸಿ ಹಲವರಿಗೆ 'ಫ್ರೆಂಡ್ ರಿಕ್ವೆಸ್ಟ್' ಕಳುಹಿಸಲಾಗಿದೆ. ಜ.9ರಂದು ಇದು ವ್ಯಾಪಕವಾಗಿದ್ದು, ಹಲವು ಪತ್ರಕರ್ತರು ಹಾಗೂ ಪ್ರಮುಖ ವ್ಯಕ್ತಿಗಳಿಗೂ 'ರಿಕ್ವೆಸ್ಟ್' ಹೋಗಿದೆ. ಕೆಲವರು ಸಂಶಯಗೊಂಡು ಪ್ರೊಫೈಲ್ ಪರಿಶೀಲಿಸಿದಾಗ ಲಾಕ್ ಆಗಿರುವುದು ಕಂಡು ಬಂದಿದೆ. ಮತ್ತೆ ಕೆಲವರು 'ಫ್ರೆಂಡ್ ರಿಕ್ವೆಸ್ಟ್'ಗೆ ಒಪ್ಪಿಗೆ ಸೂಚಿಸಿದ್ದಾರೆ. ಈ ವಿಚಾರ ಮಡಿಕೇರಿ ಪೊಲೀಸರ ಗಮನಕ್ಕೆ ಬಂದಿದ್ದು, ಇದೊಂದು ನಕಲಿ ಫೇಸ್ ಬುಕ್ ಖಾತೆ ಎಂದು ಸ್ಪಷ್ಟಪಡಿಸಿದ್ದಾರೆ. ಸಾರ್ವಜನಿಕರು ಪ್ರತಿಕ್ರಿಯೆ ನೀಡಬಾರದು ಎಂದು ಮನವಿ ಮಾಡಿರುವ ಪೊಲೀಸರು ಅಧಿಕಾರಿಗಳು ಕಿಡಿಗೇಡಿಗಳ ಪತ್ತೆಗೆ ತನಿಖೆ ಕೈಗೊಂಡಿದ್ದಾರೆ.

ಪುರಸಭೆ ವ್ಯಾಪ್ತಿ ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿ ಪ್ರಗತಿದಾಯಕ: ಪೊನ್ನಣ್ಣ


ಕಾಂಕ್ರೀಟ್ ರಸ್ತೆ ಉದ್ಘಾಟಿಸಿದ ಶಾಸಕ ಎ.ಎಸ್. ಪೊನ್ನಣ್ಣ.

ವಿರಾಜಪೇಟೆ, ಜ.10–ಪುರಸಭೆ ವ್ಯಾಪ್ತಿಯ ರಸ್ತೆ ಚರಂಡಿ ಸೇರಿದಂತೆ ಇತರ ಅಭಿವೃದ್ಧಿ ಕಾಮಗಾರಿಗಳಿಗೆ ಮುಖ್ಯಮಂತ್ರಿಗಳು ನೀಡಿರುವ 20 ಕೋಟಿ ವಿಶೇಷ ಅನುದಾನದಲ್ಲಿ ಕೆಲ ಕಾಮಗಾರಿ ಮುಗಿದಿದ್ದು ಉಳಿದ ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿದೆ ಎಂದು ಶಾಸಕ ಎ.ಎಸ್. ಪೊನ್ನಣ್ಣ ಹೇಳಿದ್ದಾರೆ.

ನಗರದ ನಿಸರ್ಗ ಬಡಾವಣೆಯಲ್ಲಿ 24 ಲಕ್ಷ ಅನುದಾನದಲ್ಲಿ ಮೂರು ನೂತನ ಕಾಂಕ್ರೀಟ್ ರಸ್ತೆ ಸೇರಿದಂತೆ ವಿಜಯಗರ 3ನೇ ಹಂತದಲ್ಲಿ ರೂ.5 ಲಕ್ಷ ವೆಚ್ಚದಲ್ಲಿ ನಿರ್ಮಿಸಲಾಗಿದ್ದ ಕಾಂಕ್ರೀಟ್ ರಸ್ತೆ ಉದ್ಘಾಟಿಸಿ ಮಾತನಾಡಿದ ಅವರು, ನೂತನ ಬಡಾವಣೆ ಅಭಿವೃದ್ಧಿ ಹೊಂದಲು ಅಲ್ಲಿಗೆ ರಸ್ತೆ ಚರಂಡಿ ಮತ್ತು ಮೂಲ ಸೌಲಭ್ಯಗಳನ್ನು ಒದಗಿಸಿ ಕೊಡುವುದು ಸ್ಥಳಿಯ ಸಂಸ್ಥೆಗಳ ಜವಾಬ್ದಾರಿಯಾಗಿದ್ದು, ಇದಕ್ಕೆ ಸ್ಥಳಿಯ ನಿವಾಸಿಗಳ ಸಹಕಾರವೂ ಅಗತ್ಯ. ಆದರೆ ಅಭಿವೃದ್ಧಿ ಕಾರ್ಯಗಳಿಗೆ ಕೆಲವರಿಂದ ಅಡ್ಡಿಯಾಗುತ್ತಿರುವುದು ಸರಿಯಲ್ಲ. ಉಳಿದಿರುವ ರಸ್ತೆ ಮತ್ತು ಚರಂಡಿಗಳ ಕಾಮಗಾರಿಯನ್ನು ಹಂತ–ಹಂತವಾಗಿ ನಡೆಸಲಾಗುವುದು ಎಂದರು.

ಪುರಸಭೆ ಮುಖ್ಯಾಧಿಕಾರಿ ಪಿ.ಕೆ.ನಾಚಪ್ಪ, ಹಿರಿಯ ಅಭಿಯಂತರ ಹೇಮಕುಮಾರ್, ನಿಸರ್ಗ ಬಡಾವಣೆಯ ಎ.ಮನೋಜ್, ಟಿ.ಎಂ.ತಿಮ್ಮಯ್ಯ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಿ.ರಂಜಿ ಪೂಣಚ್ಚ, ಅಲ್ಪಸಂಖ್ಯಾತರ ಜಿಲ್ಲಾ ಸಮಿತಿಯ ಪಿ.ಎ.ಹನೀಫ್, ಕೊಳಮಂಡ ರಫೀಕ್, ಯುವ ಕಾಂಗ್ರೆಸ್ ಶಭೀರ್, ಪುರಸಭೆ ಮಾಜಿ ಅಧ್ಯಕ್ಷೆ ಎಂ.ಕೆ ದೇಚಮ್ಮ, ಉಪಾಧ್ಯಕ್ಷೆ ಫಸಿಹ ತಬಸಂ, ಬಟ್ಟಕಳಂಡ ರಾಜ, ಪಾಡಿ ಇಗ್ಗುತಪ್ಪ ದೇವಸ್ಥಾನ ವ್ಯವಸ್ಥಾಪನಾ ಸಮಿತಿಯ ಪರದಂಡ ವಿಠಲ, ಪುರಸಭೆ ಮಾಜಿ ಸದಸ್ಯರಾದ ಎಸ್.ಎಚ್.ಮತೀನ್, ಸಿ.ಕೆ.ಪೃಥ್ವಿನಾಥ್, ರಜನಿಕಾಂತ್, ಮಹ್ಮದ್ ರಾಫಿ, ಜಲೀಲ್, ಭಾಗವಹಿಸಿದ್ದರು.

ರಾಷ್ಟ್ರ ಮಟ್ಟದ ಸರ್ಕಲ್ ಕಬಡ್ಡಿಗೆ ಕೊಡಗಿನ ಯುವಕ ಆಯ್ಕೆ



ಕುಶಾಲನಗರ, ಜ.10–ಉತ್ತರಾಖಂಡದಲ್ಲಿ ಆರಂಭವಾಗಿರುವ 19ನೇ ಸೀನಿಯರ್ ಸರ್ಕಲ್ ಸ್ಟೈಲ್ ರಾಷ್ಟ್ರೀಯ ಕಬಡ್ಡಿ ಚಾಂಪಿಯನ್ ಶಿಪ್ ರಾಜ್ಯ ತಂಡಕ್ಕೆ ಕೊಡಗಿನ ಯುವಕ ಆಯ್ಕೆಯಾಗಿದ್ದಾರೆ.

ಜಿಲ್ಲೆಯ ಸೋಮವಾರಪೇಟೆ ತಾಲೂಕಿನ ನೆಗಳಲೆ ಗ್ರಾಮದ ಕ್ರೀಡಾಪಟು ಡಿ.ಆರ್. ಜ್ಞಾನೇಶ್ ಆಯ್ಕೆಯಾಗಿರುವವರು. ಈತ ಗ್ರಾಮದ ಡಿ.ಆರ್. ರವಿ, ಎನ್.ಆರ್. ಜ್ಯೋತಿ ದಂಪತಿಗಳ ಪುತ್ರ, ಉತ್ತರಾಖಂಡದ ನೈನಿತಾಲ್‌ನ ಬಾಜ್‌ಪುರದ ಶ್ರೀ ಗುರುದ್ವಾರ ಸಾಹಿಬ್‌ನಲ್ಲಿ ಇಂದಿನಿಂದ ಜ.13ರವರೆಗೆ ನಡೆಯುವ 19ನೇ ಸೀನಿಯರ್ ಸರ್ಕಲ್ ಸ್ಟೈಲ್ ರಾಷ್ಟ್ರೀಯ ಕಬಡ್ಡಿ ಚಾಂಪಿಯನ್ ಶಿಪ್‌ನ ರಾಜ್ಯ ತಂಡಕ್ಕೆ ಆಯ್ಕೆಯಾಗಿದ್ದಾರೆ ಎಂದು ಕೊಡಗು ಜಿಲ್ಲಾ ಅಮೆಚೂರು ಕಬಡ್ಡಿ ಅಸೋಸಿಯೇಷನ್ ಕಾರ್ಯದರ್ಶಿ ಬಿ.ಡಿ. ಕಪಿಲ್ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪೆರಾಜೆ ಶ್ರೀ ಶಾಸ್ತಾವು ದೇವಾಲಯದಲ್ಲಿ ಬಿಜೆಪಿ ಶಕ್ತಿ ಕೇಂದ್ರದಿಂದ ವಿಶೇಷ ಪೂಜೆ


ಶ್ರೀ ಶಾಸ್ತಾವು ದೇವಾಲಯದಲ್ಲಿ ಬಿಜೆಪಿ ಶಕ್ತಿ ಕೇಂದ್ರದಿಂದ ವಿಶೇಷ ಪೂಜೆ ಸಲ್ಲಿಸಲಾಯಿತು.

ನಾಪೋಕ್ಲು, ಜ.10 (ದುಗ್ಗಳ)–ಪೆರಾಜೆ ಶ್ರೀ ಶಾಸ್ತಾವು ದೇವಾಲಯದಲ್ಲಿ ಬಿಜೆಪಿ ಶಕ್ತಿ ಕೇಂದ್ರದ ವತಿಯಿಂದ ಶ್ರೀ ಸೋಮನಾಥ ದೇವಸ್ಥಾನದ ಸ್ವಾಭಿಮಾನ ಪರ್ವ, ಸಾವಿರ ವರ್ಷಗಳ ಅಖಂಡ ನಂಬಿಕೆ ಶಿವನ ಶಾಶ್ವತ ಶಕ್ತಿಯ ಪ್ರತೀಕದ ಹಿನ್ನಲೆಯಲ್ಲಿ ಶನಿವಾರ ವಿಶೇಷ ಪೂಜೆ ಮತ್ತು ಪ್ರಾರ್ಥನೆ ಸಲ್ಲಿಸಲಾಗಿದೆ.

ಮಡಿಕೇರಿ ಬಿಜೆಪಿ ಗ್ರಾಮಾಂತರ ಮಂಡಲ ಅಧ್ಯಕ್ಷ ನಾಗೇಶ್ ಕುಂದಲ್ಪಾಡಿ ವಿಶೇಷ ಪ್ರಾರ್ಥನೆಯನ್ನು ಸಲ್ಲಿಸಿ ದಿನದ ಮಹತ್ವದ ಬಗ್ಗೆ ಮಾತನಾಡಿದರು. ಶಕ್ತಿ ಕೇಂದ್ರದ ಪ್ರಮುಖ ಸುಭಾಷ್ ಬಂಗಾರಕೋಡಿ, ಬಿಜೆಪಿ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಪ್ರವೀಣ್ ಮಾಜಿಕೊಡಿ, ಪೆರಾಜೆ ಪಂಚಾಯತ್ ಉಪಾಧ್ಯಕ್ಷ ನಂಜಪ್ಪ ನಿಡ್ಯಮಲೆ ಕಾರ್ಯಕರ್ತರು, ಗ್ರಾಮಸ್ಥರು ಉಪಸ್ಥಿತರಿದ್ದರು.

ಜ.13 ರಿಂದ 26 ವರೆಗೆ ಬೈತೂರು ಉತ್ಸವ



ವಿರಾಜಪೇಟೆ: ಕೇರಳದ ಉಳಿಕಲ್‌ನಲ್ಲಿರುವ ಶ್ರೀ ಆದಿ ಬೈತೂರ್ ಕಾಲಿಯಾರ್ ದೇವಸ್ಥಾನದ ವಾರ್ಷಿಕ ಉತ್ಸವವು ಜ.13 ರಿಂದ 26 ವರೆಗೆ ನಡೆಯಲಿದೆ ಎಂದು ಬೈತೂರು ದೇವಸ್ಥಾನದ ತಕ್ಕ ಮುಖ್ಯಸ್ಥರಾದ ಪುಗ್ಗೆರ ಪೊನ್ನಪ್ಪ ತಿಳಿಸಿದ್ದಾರೆ.

ಜ.22(8ಊಟ್)ರಂದು ಪುಗ್ಗೆರ ಕುಟುಂಬದ ಎತ್ತು ಪೋರಾಟ, ಅಕ್ಕಿ ಅಳೆಯುವುದು, 23 (9ಊಟ್) ರಂದು ನಾಡಿನ ಎತ್ತು ಪೋರಾಟ ಅಕ್ಕಿ ಅಳೆಯುವುದು, ರಾತ್ರಿ 8.30 ಗಂಟೆಗೆ ಪುಗ್ಗೆರ ಕುಟುಂಬದ ವಿಶೇಷ ಪೂಜೆ, 9 ಗಂಟೆಗೆ ಬೇಟೆ ಕುರುಮಗನ್ ದೇವಸ್ಥಾನದಲ್ಲಿ ಒಂದು ಸಾವಿರ ತೆಂಗಿನಕಾಯಿ ಹೊಡೆಯುವುದು, 24(10 ಊಟ್)ರಂದು ದೊಡ್ಡ ಹಬ್ಬ, ಅಪರಾಹ್ನ 2.30 ಗಂಟೆಗೆ ಆನೆ ಅಂಬಾರಿ ಪ್ರದಕ್ಷಿಣೆ, 25(11ಊಟ್)ರಂದು ಪೂರ್ವಾಹ್ನ 9.30 ಗಂಟೆಗೆ ಕೊಡಗಿನ ಎಲ್ಲಾ ತಿರುವಳಕಾರರ ದರ್ಶನ ಹಾಗೂ ಬೈತೂರಪ್ಪ ದೇವರ ಆಶೀರ್ವಾದ ಕಾರ್ಯಕ್ರಮ ನಡೆಯಲಿದೆ. ಹಬ್ಬಕ್ಕೆ ಬರುವ ಭಕ್ತಾದಿಗಳು ಕೊಡಗಿನ ಸಾಂಪ್ರದಾಯಿಕ ಉಡುಪಿನೊಂದಿಗೆ ಬರಬೇಕೆಂದು ಹೇಳಿದ್ದಾರೆ.

ಶ್ರೀ ಆದಿ ಬೈತೂರಪ್ಪ ಭಕ್ತ ಜನ ಸಂಘದ ಅಧ್ಯಕ್ಷ ಅಮ್ಮಣಕುಟ್ಟಂಡ ಕಿರಣ್ ಸುಬ್ರಮಣಿ ಮಾತನಾಡಿ, ಹಬ್ಬದ ಸಮಯದಲ್ಲಿ ಅನ್ನದಾನಕ್ಕೆ ಭಕ್ತಾದಿ ಗಳಿಂದ ಅಕ್ಕಿ, ತರಕಾರಿ, ಬೆಲ್ಲ, ತೆಂಗಿನಕಾಯಿ ಹಾಗೂ ಇತರೆ ಸಾಮಾಗ್ರಿಗಳನ್ನು ನೀಡುವವರು ಜ.10ರ ನಂತರ ಶ್ರೀ ಆದಿ ಬೈತೂರಪ್ಪ ಭಕ್ತಜನ ಸಂಘದ ಕಚೇರಿ, ಕೆಎಸ್‌ಆರ್‌ಟಿಸಿ ಬಸ್ಸು ನಿಲ್ದಾಣದ ಬಳಿ, ಆತ್ರೇಯ ಆಸ್ಪತ್ರೆಯ ಮುಂಭಾಗ ಇರುವ ಗಣಪ ಟ್ರೇಡರ್ಸ್‌ನಲ್ಲಿ ನೀಡಬಹುದಾಗಿದೆ ಎಂದು ಹೇಳಿದರು

ಗೋಷ್ಠಿಯಲ್ಲಿ ಶ್ರೀ ಆದಿ ಬೈತೂರಪ್ಪ ಭಕ್ತ ಜನ ಸಂಘದ ಸಂಚಾಲಕ ಚೇಂದಂಡ ಶಿವುಕುಮಾರ್, ಖಜಾಂಜಿ ಅಲ್ಲಪಂಡ ಲಿಖಿತ್ ಮುತ್ತಣ್ಣ, ನಿರ್ದೇಶಕರಾದ ಬಡುವಮಂಡ ಜೀವನ್, ಮಂಡೇಪಂಡ ರಿಶು ಕಾರ್ಯಪ್ಪ ಉಪಸ್ಥಿತರಿದ್ದರು.

ರೋಗಿಗಳೊಂದಿಗೆ ಸೌಜನ್ಯದಿಂದ ವರ್ತಿಸಲು ಸಿಬ್ಬಂದಿಗೆ ಸೂಚನೆ

ಮಡಿಕೇರಿ, ಜ.10– ರೋಗಿಗಳು ಹಾಗೂ ರೋಗಿಗಳ ಸಂಬಂಧಿಕರೊಂದಿಗೆ ಸೌಜನ್ಯದಿಂದ ವರ್ತಿಸುವಂತೆ ಜಿಲ್ಲಾಸ್ಪತ್ರೆಯ ಸಿಬ್ಬಂದಿಗಳಿಗೆ ಶಾಸಕ ಡಾ.ಮಂತರ್ ಗೌಡ ಕಟ್ಟು ನಿಟ್ಟಿನ ಸೂಚನೆ ನೀಡಿದ್ದಾರೆ.

ಜಿಲ್ಲಾ ಆಸ್ಪತ್ರೆಯಲ್ಲಿ ರೋಗಿಗಳಿಗೆ ಅನಾನುಕೂಲಗಳಾಗುತ್ತಿದ್ದು, ಸಿಬ್ಬಂದಿ ಸೌಜನ್ಯ ತೋರುತ್ತಿಲ್ಲ ಎನ್ನುವ ಗಂಭೀರ ದೂರುಗಳು ಕೇಳಿ ಬಂದ ಹಿನ್ನೆಲೆಯಲ್ಲಿ ಶಾಸಕರು ಆಸ್ಪತ್ರೆಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಚಿಕಿತ್ಸೆಗಾಗಿ ಆಸ್ಪತ್ರೆಗೆ ಬರುವ ರೋಗಿಗಳು ಹಾಗೂ ಸಂಬಂಧಿಸಿದವರೊಂದಿಗೆ ಗೌರವಯುತವಾಗಿ ನಡೆದುಕೊಳ್ಳಬೇಕು. ಸೂಕ್ತ ರೀತಿಯಲ್ಲಿ ಸ್ಪಂದನೆ ನೀಡಬೇಕೆಂದು ವೈದ್ಯಕೀಯ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ನಂತರ ರೋಗಿಗಳೊಂದಿಗೆ ಸಮಾಲೋಚನೆ ನಡೆಸಿ ಸೌಲಭ್ಯಗಳ ಕುರಿತು ಚರ್ಚಿಸಿದರು. ಆಸ್ಪತ್ರೆಯ ಲೋಪದೋಷಗಳನ್ನು ತಕ್ಷಣ ಸರಿಪಡಿಸಿ ಉತ್ತಮ ರೀತಿಯ ಜನಸ್ನೇಹಿ ವಾತಾವರಣವನ್ನು ಸೃಷ್ಟಿಸುವಂತೆ ವೈದ್ಯಾಧಿಕಾರಿಗಳಿಗೆ ಸಲಹೆ ನೀಡಿದರು.


ಶಾಸಕ ಡಾ.ಮಂತರ್ ಗೌಡ ಜಿಲ್ಲಾಸ್ಪತ್ರೆಗೆ ದಿಢೀರ್ ಭೇಟಿ ನೀಡಿ ರೋಗಿಗಳ ಅಹವಾಲು ಆಲಿಸಿದರು.

ಅಲ್ಪಸಂಖ್ಯಾತರಿಗೆ ಸ್ಥಾನ ಕಲ್ಪಿಸಲು ಮುಖ್ಯಮಂತ್ರಿಗೆ ಮನವಿ

ಮಡಿಕೇರಿ, ಜ.10– ಅಲ್ಪಸಂಖ್ಯಾತರಿಗೆ ವಿಧಾನ ಪರಿಷತ್ ಸ್ಥಾನ, ನಿಗಮ ಮಂಡಳಿಗಳಲ್ಲಿ ಅಧ್ಯಕ್ಷ ಸ್ಥಾನ ನೀಡಬೇಕೆಂದು ಆಗ್ರಹಿಸಿ ಜಿಲ್ಲಾ ಕಾಂಗ್ರೆಸ್‌ನ ಅಲ್ಪಸಂಖ್ಯಾತರ ನಿಯೋಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿತು.

ಶಾಸಕರಾದ ಎ.ಎಸ್.ಪೊನ್ನಣ್ಣ ಮತ್ತು ಡಾ.ಮಂತರ್ ಗೌಡರ ನೇತೃತ್ವದಲ್ಲಿ ಮುಖ್ಯಮಂತ್ರಿಗಳನ್ನು ಭೇಟಿಯಾದ ಅಲ್ಪಸಂಖ್ಯಾತ ಮುಖಂಡರು. ಕೊಡಗು ಜಿಲ್ಲೆಯ ಶೇ.99 ರಷ್ಟು ಅಲ್ಪಸಂಖ್ಯಾತರು ಕಾಂಗ್ರೆಸ್ ಪಕ್ಷವನ್ನೇ ಬೆಂಬಲಿಸುತ್ತಾ ಬಂದಿದ್ದಾರೆ. ಯಾವುದೇ ಚುನಾವಣೆ ಬಂದರೂ ತಮ್ಮ ರಾಜಕೀಯ ನಿಲುವನ್ನು ಬದಲಾಯಿಸದ ಅಲ್ಪಸಂಖ್ಯಾತರು ಇತರ ಪಕ್ಷಗಳನ್ನು ಬೆಂಬಲಿಸದೆ ನಿರಂತರವಾಗಿ ಕಾಂಗ್ರೆಸ್ ಪಕ್ಷದ ಬಲವನ್ನು ಹೆಚ್ಚಿಸುತ್ತಲೇ ಬಂದಿದ್ದಾರೆ.

ಇದೀಗ ಜಿಲ್ಲೆಯ ಎರಡೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಶಾಸಕರೇ ಇದ್ದು, ರಾಜ್ಯದಲ್ಲಿ ಕಾಂಗ್ರೆಸ್ ಸರಕಾರವಿದೆ. ಆದರೆ ಕೊಡಗಿನ ಅಲ್ಪಸಂಖ್ಯಾತರಿಗೆ ಯಾವುದೇ ಸ್ಥಾನಮಾನ ದೊರೆಯದೆ ಇರುವುದು ಬೇಸರ ಮೂಡಿಸಿದೆ. ಆದ್ದರಿಂದ ವಿಧಾನ ಪರಿಷತ್ ಸ್ಥಾನ ಮತ್ತು ನಿಗಮ ಮಂಡಳಿಗಳಲ್ಲಿ ಅಧ್ಯಕ್ಷ ಸ್ಥಾನವನ್ನು ನೀಡಿ ಪಕ್ಷಕ್ಕೆ ನಾವು ನೀಡುತ್ತಿರುವ ಬೆಂಬಲಕ್ಕೆ ಪ್ರತಿಫಲ ನೀಡಬೇಕೆಂದು ಮನವಿ ಮಾಡಿದರು. ಕೊಡಗು ಜಿಲ್ಲಾ ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷ ಅಬ್ದುಲ್ ರೆಹಮಾನ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕೆ.ಎ. ಇಸ್ಮಾಯಿಲ್, ಹೆಚ್.ಎ. ಹಂಸ, ಕೆಪಿಸಿಸಿ ಸದಸ್ಯ ಕೆ.ಎ. ಯಾಕುಬ್, ಪ್ರಮುಖರಾದ ಕೂಡಿಗೆ ಹಮೀದ್ ಸೇರಿದಂತೆ ಪಕ್ಷದ ಎಲ್ಲಾ ಅಲ್ಪಸಂಖ್ಯಾತ ಮುಖಂಡರು ಭಾಗವಹಿಸಿದ್ದರು.


ಅಲ್ಪಸಂಖ್ಯಾತರಿಗೆ ಸೂಕ್ತ ಸ್ಥಾನಮಾನ ಕೋರಿ ಜಿಲ್ಲಾ ಕಾಂಗ್ರೆಸ್‌ನ ಅಲ್ಪಸಂಖ್ಯಾತರ ನಿಯೋಗ ಮುಖ್ಯಮಂತ್ರಿಗೆ ಮನವಿ ಸಲ್ಲಿಸಿತು.

ಸುಳ್ಳೀರ ನಾಗೇಶ ನಿಧನ



ನಾಪೋಕ್ಲು: ಸಮೀಪದ ಪಾರಾಣೆ ಕೊಣಂಜಗೇರಿ ಗ್ರಾಮದ ನಿವಾಸಿ ಸುಳ್ಳೀರ ನಾಗೇಶ (ಬೋಜು71) ಶುಕ್ರವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿ ಯರು ಸೇರಿದಂತೆ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶನಿವಾರ ಪಾರಾಣೆ ಕೊಣಂಜಗೇರಿ ಗ್ರಾಮದಲ್ಲಿ ನಡೆಯಿತೆಂದು ಕುಟುಂಬದ ಮೂಲಗಳು ತಿಳಿಸಿವೆ.

ಆಕ್ಸಿಜನ್ ದುರಂತದ ಸಂತ್ರಸ್ತ ಕುಟುಂಬಗಳ ಸದಸ್ಯರಿಗೆ

ಜ.26, ಉದ್ಯೋಗ ನೇಮಕಾತಿ ಪತ್ರ ವಿತರಣೆ


ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಮಾತನಾಡಿದರು.

ಚಾಮರಾಜನಗರ, ಜ.10–ಕೋವಿಡ್ ಸಂದರ್ಭದಲ್ಲಿ ಜಿಲ್ಲಾ ಸಾರ್ವಜನಿಕ ಆಸ್ಪತ್ರೆಯಲ್ಲಿ ಆಕ್ಸಿಜನ್ ದೊರೆಯದೆ ಸಾವನ್ನಪ್ಪಿದ್ದ ಕುಟುಂಬದ ಸದಸ್ಯರೊಬ್ಬರಿಗೆ ಜ.26ರಂದು ಖಾಯಂ ಉದ್ಯೋಗದ ನೇಮಕಾತಿ ಪತ್ರವನ್ನು ವಿತರಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ವೆಂಕಟೇಶ್ ಪ್ರಕಟಿಸಿದ್ದಾರೆ.

ಈ ದುರಂತದಲ್ಲಿ ಒಟ್ಟು 36 ಮಂದಿ ಸಾವನ್ನಪ್ಪಿದ್ದರು. ಈ ಪೈಕಿ 26 ಮಂದಿಗೆ ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಯ ವಿವಿಧ ಇಲಾಖೆಗಳಲ್ಲಿ ಅವರ ಶೈಕ್ಷಣಿಕ ಅರ್ಹತೆಗೆ ಅನುಗುಣವಾಗಿ ಉದ್ಯೋಗ ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿತ್ತು. ಅದರಂತೆ ಉದ್ಯೋಗ ನೀಡಲಾಗಿದ್ದು, ಜ.26 ರಂದು 26 ಮಂದಿಗೆ ಉದ್ಯೋಗ ನೇಮಕಾತಿ ಪತ್ರ ನೀಡಲಾಗುವುದು ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಉಳಿದ ಸಂತ್ರಸ್ತ ಕುಟುಂಬಸ್ಥರು ಅನಕ್ಷರಸ್ಥರಾಗಿರುವ ಹಿನ್ನೆಲೆಯಲ್ಲಿ ಅವರಿಗೆ ಪರಿಹಾರ ನೀಡಲು ತೀರ್ಮಾನಿಸಲಾಗಿದೆ. ಶೀಘ್ರವೇ ಅವರಿಗೂ ಪರಿಹಾರ ನೀಡಲಾಗುವುದು ಎಂದರು.

ಅಭಿವೃದ್ಧಿ ಕುಂಠಿತ : ಕೇಂದ್ರ ಸರ್ಕಾರವು ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆಗೆ ಬದಲಾಗಿ ವಿಬಿ–ಜಿ ರಾಮ್–ಜಿ ಉದ್ಯೋಗ ಖಾತರಿ ಯೋಜನೆಯನ್ನು ಜಾರಿಗೊಳಿಸುವುದರಿಂದ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ ಕುಂಠಿತವಾಗಲಿದೆ ಎಂದು ಆರೋಪಿಸಿದರು

ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಯಿಂದ ದೇಶದ ಪ್ರಗತಿ ಸಾಧ್ಯವೆಂಬ ಮಹಾತ್ಮ ಗಾಂಧೀಜಿ ಅವರ ಕನಸನ್ನು ಸಾಕಾರಗೊಳಿಸುವ ಉದ್ದೇಶದಿಂದ 2005ರಲ್ಲಿ ಅಂದಿನ ಪ್ರಧಾನಿ ಮನಮೋಹನ್ ಸಿಂಗ್ ಮಹಾತ್ಮ ಗಾಂಧೀಜಿ ಉದ್ಯೋಗ ಖಾತರಿ ಯೋಜನೆಯನ್ನು ಜಾರಿಗೊಳಿಸಿದ್ದರು. ಈ ಯೋಜನೆಯಿಂದ ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಆಯಾಯಾ ಗ್ರಾಪಂ ತಮ್ಮ ವ್ಯಾಪ್ತಿಯಲ್ಲಿ ನಡೆಯಬಹುದಂತಹ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ಧರಿಸಿ ಸ್ಥಳೀಯ ಕೂಲಿ ಕಾರ್ಮಿಕರ ಮೂಲಕ ಕಾಮಗಾರಿಗಳನ್ನು ನಡೆಸಲಾಗುತ್ತಿತ್ತು. ಈ ಯೋಜನೆಯು ಬಡವರಿಗೆ ಹೆಚ್ಚು ಸಹಕಾರಿಯಾಗಿತ್ತು . ಆದರೆ, ಇತ್ತೀಚೆಗೆ ಕೇಂದ್ರ ಸರ್ಕಾರ ಜಾರಿಗೊಳಿಸಲು ಮುಂದಾಗಿರುವ ವಿಬಿ ರಾಮ್–ಜಿ ಉದ್ಯೋಗ ಖಾತರಿ ಯೋಜನೆಯು ಸಂಪೂರ್ಣವಾಗಿ ಕೇಂದ್ರ ಸರ್ಕಾರದ ಹಿಡಿತಕ್ಕೆ ಒಳಗಾಗುತ್ತದೆ.

ನರೇಗಾ ಯೋಜನೆಗೆ ಕೇಂದ್ರ ಸರ್ಕಾರ ಶೇ. 90ರಷ್ಟು ಅನುದಾನವನ್ನು, ರಾಜ್ಯ ಸರ್ಕಾರ ಶೇ. 10ರಷ್ಟು ಅನುದಾನವನ್ನು ನೀಡುತ್ತಿತ್ತು. ಇದರಿಂದ ದೇಶದ ಬಹುತೇಕ ಗ್ರಾಮಗಳು ಅಭಿವೃದ್ಧಿ ಹೊಂದಿವೆ. ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ. ರಸ್ತೆ, ಚರಂಡಿ, ಕೆರೆಗಳ ಅಭಿವೃದ್ಧಿ ಸೇರಿದಂತೆ ಸಾಕಷ್ಟು ಅಭಿವೃದ್ಧಿ ಕಾಮಗಾರಿಗಳು ನಡೆದಿದ್ದವು. ಆದರೆ ಕೇಂದ್ರದ ಈ ನಿರ್ಧಾರದಿಂದ ಕಾಮಗಾರಿಗಳನ್ನು ನಿರ್ಲಕ್ಷ್ಯ ಮಾಡಿದಂತಾಗಿ ಗ್ರಾಪಂ ಅಧಿಕಾರವನ್ನು ಕಸಿದುಕೊಳ್ಳುವಂತಾಗುತ್ತದೆ. ಅಲ್ಲದೆ ಕೇಂದ್ರ ಸರ್ಕಾರ ಶೇ.60 ರಷ್ಟು ಮಾತ್ರ ಅನುದಾನ ನೀಡಿ, ರಾಜ್ಯ ಸರ್ಕಾರಕ್ಕೆ ಹೆಚ್ಚುವರಿ ಶೇ.40ರಷ್ಟು ಅನುದಾನ ನಿಗದಿಪಡಿಸಿ ಸರ್ಕಾರಕ್ಕೆ ಹೆಚ್ಚಿನ ಹೊರೆ ಉಂಟು ಮಾಡಲಾಗುತ್ತಿದೆ ಎಂದು ದೂರಿದರು.

ಪ್ರತಿಭಟನೆ: ಮಹಾತ್ಮ ಗಾಂಧೀಜಿ ಅವರ ಹೆಸರನ್ನು ತೆಗೆಯುತ್ತಿರುವುದು ಸರಿಯಲ್ಲ. ಹೀಗಾಗಿ, ಕೇಂದ್ರ ಸರ್ಕಾರ ವಿಬಿ ರಾಮ್–ಜಿ ಯೋಜನೆಯನ್ನು ಕೈ ಬಿಟ್ಟು ಹಿಂದಿನ ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆಯನ್ನೇ ಮುಂದುವರಿಸಬೇಕು. ಇಲ್ಲದಿದ್ದರೆ ಕೇಂದ್ರ ಸರ್ಕಾರದ ವಿರುದ್ಧ ಹಂತ–ಹಂತವಾಗಿ ಪ್ರತಿಭಟನೆ ನಡೆಸಲಾಗುವುದು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ, ಎಚ್.ಎಂ. ಗಣೇಶಪ್ರಸಾದ್, ಮಾಜಿ ಶಾಸಕರಾದ ಆರ್. ನರೇಂದ್ರ, ನಂಜುಂಡ ಸ್ವಾಮಿ, ಕಾಡಾ ಅಧ್ಯಕ್ಷ ಮರಿಸ್ವಾಮಿ ಚೂಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ, ಕಾಂಗ್ರೆಸ್ ಜಿಲ್ಲಾ ವಕ್ತಾರ ಶಿವಕುಮಾರ್ ಹಾಜರಿದ್ದರು.

ಅಕ್ಕ ಪಡೆ ಗಸ್ತು ವಾಹನಕ್ಕೆ ಜಿಲ್ಲಾ ಉಸ್ತುವಾರಿ ಸಚಿವರಿಂದ ಚಾಲನೆ


ಅಕ್ಕ ಪಡೆ ಗಸ್ತು ವಾಹನ ಕಾರ್ಯಾಚರಣೆಗೆ ಉಸ್ತುವಾರಿ ಸಚಿವ ವೆಂಕಟೇಶ್ ಹಸಿರು ನಿಶಾನೆ ತೋರಿದರು.

ಚಾಮರಾಜನಗರ, ಜ.10–ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆಗಾಗಿ ರಾಜ್ಯಸರ್ಕಾರ ಜಾರಿಗೊಳಿಸಿರುವ ಮಹತ್ವಾಕಾಂಕ್ಷಿ ನೂತನ ಯೋಜನೆ 'ಅಕ್ಕ ಪಡೆ' ಗಸ್ತು ವಾಹನಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಚಾಲನೆ ನೀಡಿದರು.

ನಗರದ ಭುವನೇಶ್ವರಿ (ಪಚ್ಚಪ್ಪ) ವೃತ್ತದಲ್ಲಿ ಜಿಲ್ಲಾ ಪೊಲೀಸ್ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಯೋಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಕ್ಕ ಪಡೆ ಗಸ್ತು ವಾಹನವನ್ನು ಪೊಲೀಸ್ ಇಲಾಖೆಗೆ ಹಸ್ತಾಂತರಿಸಿ ವಾಹನ ಕಾರ್ಯಾಚರಣೆಗೆ ಹಸಿರು ನಿಶಾನೆ ತೋರಿದರು.

ಮಹಿಳೆಯರು ಮತ್ತು ಮಕ್ಕಳ ವಿರುದ್ಧ ನಡೆಯುವ ದೌರ್ಜನ್ಯಗಳನ್ನು ಪರಿಣಾಮಕಾರಿಯಾಗಿ ತಡೆಯುವ ಸದುದ್ದೇಶದಿಂದ ಸರ್ಕಾರವು ಯೋಜನೆ ಜಾರಿಗೊಳಿಸಿದೆ. ಮಹಿಳೆಯರು ಮತ್ತು ಮಕ್ಕಳ ವಿರುದ್ಧ ನಡೆಯುವ ಲೈಂಗಿಕ ಕಿರುಕುಳ, ಅತ್ಯಾಚಾರ, ಮಾನವ ಕಳ್ಳಸಾಗಣೆ, ಬಾಲ್ಯವಿವಾಹ, ವರದಕ್ಷಿಣೆ ಕಿರುಕುಳದಂತಹ ದೌರ್ಜನ್ಯಗಳನ್ನು ತಡೆಯಲು ಅಕ್ಕ ಪಡೆ ಗಸ್ತು ವಾಹನವು ನೆರವಾಗಲಿದೆ. ಇಂದಿನ ಆಧುನಿಕ, ತಂತ್ರಜ್ಞಾನ ಯುಗದಲ್ಲಿ ಮಹಿಳೆಯರು, ಮಕ್ಕಳ ವಿರುದ್ಧ ನಡೆಯುವ ದೌರ್ಜನ್ಯಗಳನ್ನು ತಡೆದು, ಕಾನೂನು ಅರಿವು ಮೂಡಿಸಿ ಸಂಕಷ್ಟದಲ್ಲಿರುವವರಿಗೆ ತಕ್ಷಣವೇ ರಕ್ಷಣೆ ಮತ್ತು ನೆರವು ನೀಡಲು ಅಕ್ಕ ಪಡೆ ಜಿಲ್ಲೆಯಲ್ಲಿ ಇಂದಿನಿಂದ ಕಾರ್ಯಾಚರಣೆ ಆರಂಭಿಸಲಿದೆ. ವಾಹನದಲ್ಲಿ ಮಹಿಳಾ ಪೊಲೀಸ್ ಇರಲಿದ್ದು, ಗೃಹ ರಕ್ಷಕ ದಳ ಸಿಬ್ಬಂದಿ ಪೊಲೀಸರಿಗೆ ನೆರವು ನೀಡಲಿದ್ದಾರೆ. ಗಸ್ತು ವಾಹನವು ಪ್ರತಿದಿನ ಶಾಲಾ ಕಾಲೇಜು, ಬಸ್, ರೈಲು ನಿಲ್ದಾಣ, ಬಾಲಕಿಯರ ವಿದ್ಯಾರ್ಥಿ ನಿಲಯ, ಮಾರುಕಟ್ಟೆ, ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡಿ ಮಹಿಳೆಯರು ಮತ್ತು ಮಕ್ಕಳ ವಿರುದ್ಧ ನಡೆಯುವ ದೌರ್ಜನ್ಯಗಳನ್ನು ತಡೆ ಯಲು ಪ್ರಮುಖ ಪಾತ್ರ ವಹಿಸಲಿದೆ ಎಂದು ಎಂದು ಸುದ್ದಿಗಾರರ ಬಳಿ ತಿಳಿಸಿದರು.

ಅಕ್ಕ ಪಡೆಯು ಶಾಲಾ ಕಾಲೇಜುಗಳಲ್ಲಿ ದೌರ್ಜನ್ಯಗಳ ಕುರಿತು ಮುಂಜಾಗ್ರತಾ ಕ್ರಮಗಳ ಬಗ್ಗೆ ಜಾಗೃತಿ ಮೂಡಿಸುವುದು, ಫೋಕ್ಸೋ ಹಾಗೂ ಸೈಬರ್ ಅಪರಾಧ ಮತ್ತು ಮಾದಕ ವಸ್ತುಗಳ ಸೇವನೆ ಕುರಿತ ದುಷ್ಪರಿಣಾಮಗಳ ಬಗ್ಗೆ ಮಹಿಳೆಯರು ಮತ್ತು ಮಕ್ಕಳಲ್ಲಿ ಅರಿವು ಮೂಡಿಸಿ ಧೈರ್ಯ ತುಂಬಲಿದೆ. ವಾರದಲ್ಲಿ ಒಂದು ದಿನ ತಾಲೂಕುಗಳ ವ್ಯಾಪ್ತಿಯಲ್ಲಿ ಸಂಚರಿಸುವ ವಾಹನವು ಅಲ್ಲಿನ ಜನಸಂದಣಿ ಪ್ರದೇಶಗಳಲ್ಲಿ ನಡೆಯುವ ದೌರ್ಜನ್ಯಗಳನ್ನು ತಡೆಯುವ ಮೂಲಕ ಮಹಿಳೆ ಯರು ಮತ್ತು ಮಕ್ಕಳ ಸುರಕ್ಷತೆಗೆ ಆದ್ಯತೆ ನೀಡಲಿದೆ ಎಂದು ಅವರು ಹೇಳಿದರು.

ಶಾಸಕ ಸಿ.ಪುಟ್ಟರಂಗಶೆಟ್ಟಿ, ಶಾಸಕ ಎಚ್.ಎಂ. ಗಣೇಶ್ ಪ್ರಸಾದ್, ಕಾಡಾ ಅಧ್ಯಕ್ಷ ಪಿ. ಮರಿಸ್ವಾಮಿ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಹಮದ್ ಅಸ್ಗರ್ ಮುನ್ನಾ, ಜಿಲ್ಲಾಧಿಕಾರಿ ಶ್ರೀರೂಪ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಮುತ್ತುರಾಜ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಂ.ಎಸ್. ಶಶಿಧರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಎಚ್.ಆರ್. ಸುರೇಶ್, ಡಿವೈಎಸ್‌ಪಿ ಸ್ನೇಹರಾಜ್, ಧರ್ಮೇಂದ್ರ, ಪೊಲೀಸ್ ಅಧಿಕಾರಿಗಳು, ಉಪಸ್ಥಿತರಿದ್ದರು.

ರೈತ ಉಳಿದರೆ ಮಾತ್ರ ದೇಶ ಉಳಿಯಲು ಸಾಧ್ಯ: ಸುತ್ತೂರು ಶ್ರೀ


ವಿಶ್ವ ರೈತ ದಿನಾಚರಣೆ ರಾಜ್ಯಮಟ್ಟದ ರೈತ ಚಿಂತನಾ ಸಮಾವೇಶವ ಸುತ್ತೂರಿನ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಪುಸ್ತಕ ಬಿಡುಗಡೆ ಮಾಡಿದರು.

ಚಾಮರಾಜನಗರ: ರೈತ ಉಳಿದರೆ ಮಾತ್ರ ದೇಶ ಉಳಿಯುತ್ತದೆ ಎಂದು ಸುತ್ತೂರಿನ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿ ಪ್ರಾಯಪಟ್ಟಿದ್ದಾರೆ.

ನಗರದ ವರನಟ ಡಾ.ರಾಜ್‌ಕುಮಾರ್ ಕಲಾ ಮಂದಿರದಲ್ಲಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ, ರಾಜ್ಯ ರೈತಸಂಘ ಹಾಗೂ ಹಸಿರುಸೇನೆ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದ ವತಿಯಿಂದ ನಡೆದ ವಿಶ್ವ ರೈತ ದಿನಾಚರಣೆ ರಾಜ್ಯಮಟ್ಟದ ರೈತ ಚಿಂತನಾ ಸಮಾವೇಶದ ಸಾನಿಧ್ಯ ವಹಿಸಿ ಮಾತನಾಡಿ ಅವರು, ಯಾವುದೇ ಬೆಳೆಗೂ ರೋಗಗಳು ಹರಡುತ್ತಿದ್ದು, ಬೆಳೆಯು ರೋಗಮುಕ್ತವಾಗಲು ರಸಾಯನ ಸಿಂಪಡಣೆ ಮಾಡುತ್ತಿದ್ದಾರೆ. ಇದರಿಂದ ಆಹಾರ ಪದಾರ್ಥಗಳು ವಿಷವಾಗುತ್ತಿದ್ದು, ನಾವು ಸೇವನೆ ಮಾಡುವ ಆಹಾರದ ಜೊತೆಗೆ ವಿಷವೂ ದೇಹಕ್ಕೆ ಸೇರುತ್ತಿದೆ ಎಂದರು.

ರೈತರ ದುಡಿಗೆ ಬೆಲೆ ಕಟ್ಟಲು ಸಾಧ್ಯವಿಲ್ಲ. ರೈತರು ಬೆಳೆದ ಪದಾರ್ಥಗಳಗಳಿಗೆ ಸರ್ಕಾರ ಸೂಕ್ತ ಬೆಲೆ ನಿಗದಿ ಮಾಡಿದರೆ ರೈತರಿಗೆ ಸಂಜೀವಿನಿಯಾಗುತ್ತದೆ. ಸಾವಯವ ಕೃಷಿ ಬೆಳೆಯಬೇಕು ಆಗ ಮನುಷ್ಯ ಆರೋಗ್ಯವಾಗಿರಲು ಸಾಧ್ಯವಾಗುತ್ತದೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ರೈತರ ಬಗ್ಗೆ ಅಪಾರ ಕಾಳಜಿ ಹೊಂದಿದ್ದಾರೆ. ಸರ್ಕಾರ ಯಾವಾಗಲೂ ಸರ್ಕಾರ ರೈತರ ಪರವಾಗಿರುತ್ತದೆ. ರೈತರು ಬೆಳೆದ ಪದಾರ್ಥಗಳಿಂದ ಬೆಂಬಲ ಬೆಲೆ ಸಿಗಬೇಕು ಎನ್ನುವುದು ನಮ್ಮ ಆಶಯವಾಗಿದೆ. ಕೇಂದ್ರ ಸರ್ಕಾರ ಕೂಡ ರೈತ ಪರ ಕಾರ್ಯಕ್ರಮಗಳನ್ನು ಜಾರಿ ಮಾಡಲಿ ಎಂದರು.

ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎ.ಆರ್.ಕೃಷ್ಣಮೂರ್ತಿ, ಎಚ್.ಎಂ.ಗಣೇಶಪ್ರಸಾದ್, ವಿಧಾನ ಪರಿಷತ್ ಸದಸ್ಯ ಶಿವಕುಮಾರ್, ಕೊಡಗು ವಿಶ್ವವಿದ್ಯಾಲಯ ಕುಲಪತಿ ಪ್ರೊ.ಅಶೋಕ್ ಎಸ್.ಆಲೂರ್, ಹನೂರು ನಿಶಾಂತ್, ತೇಜಸ್ ಪಟೇಲ್, ನಾರಾಯಣ್ ರೆಡ್ಡಿ, ಮಾತನಾಡಿದರು. ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಪ್ರಾಸ್ತಾವಿಕ ಭಾಷಣ ಮಾಡಿದರು. ವಿಶ್ವ ರೈತ ದಿನಾಚರಣೆ ಸಮಿತಿ ಗೌರವಾಧ್ಯಕ್ಷ ಪ್ರೊ.ಎಸ್.ಶಿವರಾಜಪ್ಪ, ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಶ್ರೀರೂಪ, ಎಸ್ಪಿ ಮುತ್ತುರಾಜು, ಜಿಲ್ಲಾಧ್ಯಕ್ಷ ಹಾಲಿನ ನಾಗರಾಜು ಇತರರು ಹಾಜರಿದ್ದರು.

ಮಹದೇವಶೆಟ್ಟಿ ನಿಧನ



ಬೇಗೂರು, ಜ.10–ಗ್ರಾಪಂ ಮಾಜಿ ಸದಸ್ಯ ಮಹದೇವಶೆಟ್ಟಿ(62) ಶುಕ್ರವಾರ ಗ್ರಾಮದಲ್ಲಿ ನಿಧನರಾದರು. ಇವರು ಪತ್ನಿ, ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ ಇವರ ಅಂತ್ಯಕ್ರಿಯೆ ಗ್ರಾಮದ ರುದ್ರಭೂಮಿಯಲ್ಲಿ ನಡೆಯಿತು.

ಕೆರೆಗಳ ತುಂಬಿಸುವ ಯೋಜನೆಗೆ ಉಪ ಮುಖ್ಯಮಂತ್ರಿಗಳಿಗೆ ಶಾಸಕರ ಆಹ್ವಾನ


ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಡಿಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ತಾಲೂಕಿನ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಲು ಆಹ್ವಾನಿಸಿದರು.

ಗುಂಡ್ಲುಪೇಟೆ, ಜ–10 (ಸೋಮ್.ಜಿ) ತಾಲೂಕಿನ ಪ್ರಮುಖ ನೀರಾವರಿ ಯೋಜನೆಯಾದ 110 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಹಾಗೂ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಲು ಪಟ್ಟಣಕ್ಕೆ ಆಗಮಿಸುವಂತೆ ಶಾಸಕ ಎಚ್.ಎಂ. ಗಣೇಶ್‌ಪ್ರಸಾದ್ ಬೆಂಗಳೂರಿನಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಿ ಆಹ್ವಾನಿಸಿದರು.

ಸದ್ಯ ಚಾಲ್ತಿಯಲ್ಲಿರುವ ಆಲಂಬೂರು ಏತ ನೀರಾವರಿ ಯೋಜನೆಯಲ್ಲಿ ಗುಂಡ್ಲುಪೇಟೆ ತಾಲೂಕಿನ 4ನೇ ಹಂತದ ಕೆರೆಗಳು ಹಾಗೂ ಚಾ.ನಗರ ತಾಲೂಕಿನ ಕೆರೆಗಳಿಗೂ ನೀರು ತುಂಬಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ತಾಲೂಕಿನ 4ನೇ ಹಂತದ ಕೆರೆಗಳಿಗೆ ಪೈಪ್ ಲೈನ್ ಮಾಡಿ ದರೆ ಎರಡೂ ತಾಲೂಕುಗಳ ಕೆರೆಗಳಿಗೂ ನೀರು ತುಂಬಿಸಬಹುದು. ಆದ್ದರಿಂದ ಪೈಪ್‌ಲೈನ್ ಕಾಮಗಾರಿಗೆ ಹೆಚ್ಚಿನ ಅನುದಾನ ಬಿಡುಗಡೆ ಮಾಡುವಂತೆ ಕೋರಿದರು.

ಶಾಲಾ ಅಭಿವೃದ್ಧಿ ಮಂಡಲಿ ರಚನೆ

ಬೇಗೂರು: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಅಭಿವೃದ್ಧಿ ಮಂಡಲಿಯನ್ನು ರಚನೆ ಮಾಡಲಾಯಿತು.

ಅಧ್ಯಕ್ಷರಾಗಿ ವೆಂಕಟರಾಜು, ಉಪಾಧ್ಯಕ್ಷರಾಗಿ ರಾಜೇಶ್ವರಿ ಆಯ್ಕೆಯಾದರು. ಮುಖ್ಯ ಶಿಕ್ಷಕ ಅಕ್ಕ ಮಹದೇವಮ್ಮ, ಚಂದ್ರಶೇಖರ್, ಅನ್ನಪೂರ್ಣಮ್ಮ, ಸವಿತ, ಜಯಲಕ್ಷ್ಮಿ, ಮಂಗಳಮ್ಮ ಹಾಜರಿದ್ದರು.

ಜ.13ರಿಂದ ಕಾಫಿ ವಿತ್ ಚೀಫ್ ಆಫೀಸರ್ ವಿನೂತನ ಕಾರ್ಯಕ್ರಮ

ಗುಂಡ್ಲುಪೇಟೆ, ಜ–10 (ಸೋಮ್.ಜಿ) ಕಾಫಿ ವಿತ್ ಚೀಫ್ ಆಫೀಸರ್ ಎಂಬ ವಿನೂತನ ಕಾರ್ಯಕ್ರಮವನ್ನು ಜ.13 ರಿಂದ ಆಯೋಜನೆ ಮಾಡಲಾಗಿದೆ ಎಂದು ಪುರಸಭೆ ಮುಖ್ಯಾಧಿಕಾರಿ ಎಸ್.ಸರವಣ ತಿಳಿಸಿದ್ದಾರೆ. ಈ ಕುರಿತು ಮಾತನಾಡಿದ ಅವರು, ಸಾರ್ವಜನಿಕರನ್ನು ವಾರ್ಡಿನಲ್ಲಿ ಭೇಟಿ ಮಾಡಿ, ಅವರ ಪ್ರಮುಖ ಸಮಸ್ಯೆಗಳಾದ ಕುಡಿಯುವ ನೀರು, ಕಸದ ವಿಲೇವಾರಿ ಸಮಸ್ಯೆ, ಒಳಚರಂಡಿ, ಬೀದಿ ದೀಪಗಳ ನಿರ್ವಹಣೆ ಮತ್ತು ಇ–ಸ್ವತ್ತುಗಳಂತಹ ಮೂಲ ಸೌಕರ್ಯಗಳ ಬಗ್ಗೆ ತಿಳಿದು, ಪರಿಹಾರವನ್ನು ದೊರೆಕಿಸಿ ಕೊಡುವ ಉದ್ದೇಶದಿಂದ ಜ.13ರ ಬೆಳಗ್ಗೆ 11 ರಿಂದ ಕಾಫಿ ವಿತ್ ಚೀಫ್ ಆಫೀಸರ್ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗಿದೆ ಎಂದು 'ಮೈಸೂರು ಮಿತ್ರ'ನಿಗೆ ತಿಳಿಸಿದರು.



ವಾರದ ಮಿತ್ರ

ಸಾಪ್ತಾಹಿಕ ಪುರವಣಿ

ಮೈಸೂರು ಮಿತ್ರ

ಭಾನುವಾರ 11-01-2026



ಜನವರಿ 12, ರಾಷ್ಟ್ರೀಯ ಯುವದಿನ ತನ್ನಿಮಿತ್ತ ಈ ಲೇಖನ.

ಏಳಿ... ಎದ್ದೇಳಿ...

ಏನೇ ಆಗಲಿ ಗುರಿ ಸ್ಥಿರವಾಗಿರಬೇಕು. ಎಂತಹ ಕಠಿಣ ಸಂದರ್ಭದಲ್ಲೂ ಮಾಡುವ ಪ್ರಯತ್ನದಲ್ಲಿ ರಾಜಿ ಇರಕೂಡದು. ಅದಾದಾಗಲೇ ಯಶಸ್ಸು ನಮ್ಮದಾಗುತ್ತದೆ ಎಂಬ ತನ್ನ ಅಂತರಂಗದ ಮಹಾಗುರು ಶ್ರೀ ರಾಮಕೃಷ್ಣ ಪರಮಹಂಸರ ಸೂಕ್ತಿಗಳನ್ನು, ಅಮೃತ ನುಡಿಗಳನ್ನು ನಡೆಯಲ್ಲಿ... ನುಡಿಯಲ್ಲಿ... ಅಕ್ಷರಶಃ ಆಚರಿಸಿ ಜಗತ್ತಿಗೆ ತೋರಿಸಿ ಜನಕೋಟಿಯ ಹೃನ್ಮನದಲ್ಲಿ ಜಾಗೃತಿಯ ಬೆಳಕು ಚೆಲ್ಲಿ ಸ್ಫೂರ್ತಿಯ ಶಿಖರ ಏರಿದವರು ವಿವೇಕಾನಂದರು. ಸಿಂಹದೋಪಾದಿಯಲ್ಲಿ ದೃಢ ಸಂಕಲ್ಪದೊಂದಿಗೆ ದಿಟ್ಟ ಹೆಜ್ಜೆಯಿಡುವ ಯುವ ಸಮೂಹಕ್ಕೆ ಅವರು ದಾರಿ ದೀಪ. ಅಷ್ಟೇ ಅಲ್ಲ ಮಹಾನ್ ದಿಕ್ಸೂಚಿ. ಭವಿಷ್ಯದ ಯುವ ಜನಾಂಗಕ್ಕೆ ಚೈತನ್ಯದ, ಒಳಿತಿನ ಹೂರಣದ ಉದಾತ್ತ ಭಾವನೆಗಳ ಮಹಾ ಭಂಡಾರ ಕೊಟ್ಟ ಮಹಾದಾರ್ಶನಿಕರು.

ಭಾರತದ ಸಂಸ್ಕೃತಿಯ ಪ್ರತೀಕವಾದ ಸಹೋದರ, ಸಹೋದರಿಯರ ಪ್ರೀತಿಯ ಸಂಕೇತವಾದ ವಿವೇಕಾನಂದರು ತಮ್ಮ ವಜ್ರ ಕಂಠದಿಂದ 'ನನ್ನ ಪ್ರಿಯ ಸಹೋದರ, ಸಹೋದರಿಯರೇ...' ಪಾಂಚಜನ್ಯ ಮೊಳಗಿಸಿದ ಪ್ರೀತಿಯ ಕರೆ ಅಮೆರಿಕೆಯ ಷಿಕಾಗೋ ನಗರ ಮಾತ್ರವಲ್ಲ ಇಡೀ ಪ್ರಪಂಚವನ್ನೇ ಸೂಜಿಗಲ್ಲಿನಂತೆ ಸೆಳೆದದ್ದು, ವಿಶ್ವ ಜನಸಾಗರವನ್ನು ಮೂಕ ವಿಸ್ಮಯಗೊಳಿಸಿದ್ದು ಈಗ ಇತಿಹಾಸ. ಅಷ್ಟೇ ಅಲ್ಲ ತನ್ಮೂಲಕ ವಿಶ್ವವನ್ನೇ ಗೆದ್ದು ವಿಶ್ವವಿಜೇತ ವಿವೇಕಾನಂದರೆನಿಸಿದ್ದು ವಿಶ್ವದ ಮಹತ್ವಪೂರ್ಣ ಚರಿತ್ರೆಯಾಗಿದೆ. ಭಾರತದ ಮಹೋನ್ನತ ಮೌಲ್ಯಗಳನ್ನು, ಆಚಾರ ವಿಚಾರಗಳನ್ನು ಪ್ರತಿಯೊಬ್ಬರ ಹೃದಯ ತುಂಬಿ ಬರುವಂತೆ ವಿಶ್ವದ ಭೂಪಟದಲ್ಲಿ ಅಚ್ಚೊತ್ತಿದ ವಿವೇಕಾನಂದರಿಂದ ಇವತ್ತಿಗೂ ಪಾಶ್ಚಾತ್ಯರಲ್ಲಿ ನಮ್ಮ ಭಾರತ ದೇಶದ ಬಗ್ಗೆ ಬಹುದೊಡ್ಡ ಗೌರವವಿದೆ. ವಿವೇಕಾನಂದರ ವಾಣಿ ಎಂದರೆ ಅಮೃತದಲ್ಲಿ ಅದ್ದಿ ತೆಗೆದ ನುಡಿ ಮಾಲೆ. ಚೈತನ್ಯ ತುಂಬಿದ ಈ ಅಮೃತ ನುಡಿಮಾಲೆಯನ್ನು ವಿಶ್ವ ಮಾತೆಯ ಕೊರಳಿಗೆ ಅಲಂಕರಿಸಿ ಮಾನವ ಕುಲವನ್ನು ಬೆಳಕಿನತ್ತ ಮುನ್ನಡೆಸಿದ ಮಹಾ ಮಾನವತಾವಾದಿ ವಿವೇಕಾನಂದರು ಭಾರತದ ಹೆಮ್ಮೆ ಮಾತ್ರವಲ್ಲ ವಿಶ್ವದ ಹಿರಿಮೆಯೂ ಹೌದು.

ಐದು ಸಾವಿರ ವರ್ಷಗಳಿಗೂ ಮಿಗಿಲಾದ ಭವ್ಯ ಇತಿಹಾಸ, ದಿವ್ಯ ಸಂಸ್ಕೃತಿ, ಮಹೋನ್ನತ ಪರಂಪರೆಗಳುಳ್ಳ ದೇಶ ನಮ್ಮದು. ಇಲ್ಲಿ ಪ್ರಾಚೀನ, ಅರ್ವಾಚೀನ ಮಹಾಪುರುಷರು, ಸಂತರು, ದಾರ್ಶನಿಕರು, ಆಧ್ಯಾತ್ಮ ವೀರರು, ಜ್ಞಾನಿಗಳು ನಿರಂತರವಾಗಿ ಚೈತನ್ಯ ತುಂಬುತ್ತ ಬಂದಿದ್ದಾರೆ. ಇವರೆಲ್ಲರೂ ಸರ್ವರ ಸುಖಕ್ಕಾಗಿ, ಸರ್ವರ ಏಳಿಗೆಗಾಗಿ, ಸರ್ವ ಜೀವರಾಶಿಗಳಿಗೂ ಒಳಿತನ್ನೇ ಬಯಸುವುದಕ್ಕಾಗಿ ಮನುಷ್ಯ ಮನಸ್ಸುಗಳನ್ನು ಜಾಗೃತಿಗೊಳಿಸಿ ಹದವಾದ ಪಾಕಕ್ಕೆ ತರುವುದರಲ್ಲೇ ತಮ್ಮ ಆಯುಷ್ಯ ತೆತ್ತವರು. ಅಲ್ಪಾಯುಷ್ಯದಲ್ಲೇ ಅಗಾಧವಾದ ಸಾಧನೆಗೈದು ದೇಶಕ್ಕೆ ಮುಂಬೆಳಕು ನೀಡಿದವರು. ಇವರಲ್ಲಿ ಅಧ್ಯಾತ್ಮವೀರರಾಗಿ. ಜ್ಞಾನ ಸೂರ್ಯರಾಗಿ, ವಿವೇಕ ಪ್ರಭೆಯಾಗಿ ವಿಶ್ವದೆತ್ತರಕ್ಕೂ ಭಾರತದ ಹಿರಿಮೆಯನ್ನು ಎತ್ತಿ ಹಿಡಿದ ಕೀರ್ತಿ ವೀರ ಸನ್ಯಾಸಿ ಸ್ವಾಮಿ ವಿವೇಕಾನಂದರಿಗೆ ಸಲ್ಲುತ್ತದೆ.

"ನೀನು ಭಾರತವನ್ನು ತಿಳಿದು ಕೊಳ್ಳಬೇಕೆಂದರೆ ಮೊದಲು ವಿವೇಕಾನಂದರನ್ನು ಕುರಿತು ಅಧ್ಯಯನ ಮಾಡು. ಇದು ರವೀಂದ್ರನಾಥ ಟ್ಯಾಗೂರ್ ಅವರ ಮಾತು. ಅಕ್ಷರಶಃ ನಿಜ. ಏಕೆಂದರೆ ವಿವೇಕಾನಂದರು ಭಾರತಾಂಬೆಯ ಸುಪುತ್ರರಾಗಿ ಭಾರತದ ಸಂಸ್ಕೃತಿ ಸಂಪನ್ನತೆಯ ಮೌಲ್ಯವನ್ನೆಲ್ಲಾ ತಮ್ಮೊಳಗೆ ಮೇಳೈಸಿಕೊಂಡು ಒಂದು ರೀತಿ ಇಡೀ ಭಾರತವೇ ಅವರಾಗಿದ್ದರು. ಅಲ್ಲಿ ಭಾರತದ ವಿರಾಟ್ ದರ್ಶನವಿತ್ತು!

ವಿವೇಕಾನಂದರೆಂದರೆ ಒಳಿತಿನ ಹೊಳಪು. ಸಂಸ್ಕೃತಿಯ ಮಹಾಬೆಳಕು. ಸರ್ವಧರ್ಮಗಳಲ್ಲಿನ ಲೇಸನ್ನೆಲ್ಲಾ ಹೀರಿಕೊಂಡು ಅರಳಿದ್ದ ಭಾರತದ ಸುವರ್ಣಪುಷ್ಪ. ಮಾನವಪರ ಕಾಳಜಿಯ ತಮ್ಮ 'ವಿವೇಕ ಚಿಂತನೆಯ ಬೆಳಕಿನ ಅಸ್ತ್ರದಿಂದಲೇ ಇಡೀ

ವಿವೇಕಾನಂದರು ಕೇವಲ ರಾಮಕೃಷ್ಣಪರಮಹಂಸರ ಶಿಷ್ಯರಾಗದೆ ತಮ್ಮದೇ ರೀತಿಯಲ್ಲಿ ಬಹುದೊಡ್ಡ ಚಿಂತಕರಾಗಿ ಪ್ರಸಿದ್ಧಿ ಪಡೆದವರು. ಅವರ ಮುಖ್ಯ ಕೊಡುಗೆ ಎಂದರೆ, ಅದ್ವೈತ ಸಿದ್ಧಾಂತ ಕೇವಲ ತಾತ್ವಿಕವಾಗಿ ಉಚ್ಚ ತಂತ್ರಜ್ಞಾನ ಮಾತ್ರವಲ್ಲದೆ ಸಾಮಾಜಿಕ ಹಾಗೂ ರಾಜಕೀಯ ದೃಷ್ಟಿಯಿಂದಲೂ ಉಪಯುಕ್ತ ಎಂಬುದನ್ನು ತೋರಿಸಿಕೊಟ್ಟರು. ಅವರ ಅಭಿಪ್ರಾಯದಂತೆ ರಾಮಕೃಷ್ಣ ಪರಮಹಂಸರಿಂದ ಅವರು ಪಡೆದ ಮುಖ್ಯ ಬೋಧನೆಗಳಲ್ಲಿ ಒಂದೆಂದರೆ ಎಲ್ಲರಲ್ಲಿಯೂ ದೇವರಿದ್ದಾನೆ ಎಂಬುದು. ಇದೇ ವಿವೇಕಾನಂದರ ಮಂತ್ರವಾಯಿತಲ್ಲದೆ ಇವರ ದರಿದ್ರನಾರಾಯಣ ಸೇವೆ ತತ್ವಕ್ಕೆ ಮಾರ್ಗಸೂಚಿ ಮಾಡಿಕೊಟ್ಟಿತು. ಈ ತತ್ವದಂತೆಯೇ ದೀನದಲಿತರ, ಬಡಜನರ ಸೇವೆಯಲ್ಲಿಯೇ ದೇವರ ಸೇವೆಯನ್ನು ಮಾಡುವ ಮಾರ್ಗವನ್ನು ಅವರು ಪಾಲಿಸಿದರು.

ವಿಶ್ವವನ್ನು ಗೆದ್ದ ವಿಶ್ವವಿಜೇತ. 'ನಮಗಿಂದು ಶಕ್ತಿ, ಶಕ್ತಿಬೇಕು ಎಂದು ಪದೇ ಪದೆ ಹೇಳುವೆನು. ಉಪನಿಷತ್ತುಗಳು ಶಕ್ತಿಯ ಮಹಾಗಣಿ. ಪ್ರಪಂಚಕ್ಕೆಲ್ಲಾ ದಾನ ಮಾಡುವಷ್ಟು ಶಕ್ತಿ ಅದರಲ್ಲಿದೆ. ಇಡೀ ಪ್ರಪಂಚವನ್ನೇ ಅದರಿಂದ ಜಾಗೃತಗೊಳಿಸಬಹುದು. ಇಡೀ ಪ್ರಪಂಚಕ್ಕೆ ಶಕ್ತಿಯನ್ನು ನೀಡಬಹುದು...... ಎಂದು ಸಾರಿದ ಸ್ವಾಮಿ ವಿವೇಕಾನಂದರು ವಿಶೇಷವಾಗಿ ಭಾರತದ ಘನತೆ, ಗೌರವ, ಆಶೋತ್ತರ, ಭವಿಷ್ಯಗಳೆಲ್ಲವೂ ದೇಶದ ಯುವಶಕ್ತಿಯ ಕೈನಲ್ಲಿದೆಯೆಂದೂ, ರಾಷ್ಟ್ರನಿರ್ಮಾಣದಲ್ಲಿ ಯುವ ಜನಾಂಗದ ಪಾತ್ರ ಮಹತ್ತರವಾದುದೆಂದೂ, ಸತ್ತಂತಿಹ ಯುವ ಶಕ್ತಿಯನ್ನು ಬಡಿದೆಚ್ಚರಿಸಿದ ಭವ್ಯ ತೇಜರು. ನೇತಾಜಿ ಸುಭಾಷ್ ಚಂದ್ರಬೋಸ್‌ರಂಥ ಸ್ವಾತಂತ್ರ್ಯ ಸೇನಾನಿಗಳಿಗೇ ಆಧ್ಯಾತ್ಮಿಕ ಗುರುವಾಗಿದ್ದವರು. ಯುವಜನರಿಗೆ ಸದಾ ಸ್ಫೂರ್ತಿದಾಯಕರು.

ಏಳಿ, ಎದ್ದೇಳಿ, ಗುರಿ ಮುಟ್ಟುವವರೆಗೆ ನಿಲ್ಲದಿರಿ. ನಿಮ್ಮ ಏಳ್ಗೆಗೆ ನೀವೇ ಶಿಲ್ಪಿ, ನಿಮ್ಮ ಭವಿಷ್ಯವನ್ನು ನೀವೇ ರೂಪಿಸಿಕೊಳ್ಳಿ ಎಂದು ಕರೆ ನೀಡಿದ ಈ ವಿವೇಕ ವಾಣಿಯೇ ವಿವೇಕಾನಂದರನ್ನು ಬೇರೆಲ್ಲರಿಗಿಂತ ಭಿನ್ನವಾಗಿ ನಿಲ್ಲಿಸುತ್ತದೆ. ಹಾಗೆಯೇ ಜನರಲ್ಲಿ ಅದರಲ್ಲೂ ಯುವಜನರಲ್ಲಿ ಸ್ಫೂರ್ತಿಯ ಸೆಲೆಯಾಗಿ ಉತ್ಸಾಹ ತುಂಬಿ ನವ ಚೈತನ್ಯ ತರುತ್ತದೆ. ಅರಿವವರಿಗೆ ಅವರ ಈ ಮಾತುಗಳೇ ಸಾಕು ಸಾಧನೆಯ ಶಿಖರವನ್ನು ಕಟ್ಟಲೂಬಹುದು, ಏರಲೂಬಹುದು. ಆದ್ದರಿಂದಲೇ ಯುವಶಕ್ತಿಯ ಸಾಧನೆಯ ಸಂಕೇತದಂತಿರುವ ವಿವೇಕಾನಂದರ ಜನ್ಮದಿನವಾದ ಜನವರಿ ಹನ್ನೆರಡನ್ನು ಅರ್ಥಾತ್ ವಿವೇಕಾನಂದ ಜಯಂತಿಯನ್ನು ರಾಷ್ಟ್ರೀಯ ಯುವದಿನವಾಗಿ ದೇಶ ಹೆಮ್ಮೆಯಿಂದ ಆಚರಿಸುತ್ತದೆ.

ಈ ರಾಷ್ಟ್ರೀಯ ಯುವ ದಿನಾಚರಣೆ ನಿಜಕ್ಕೂ ಸಾರ್ಥಕವಾಗಬೇಕಾದರೆ ವಿವೇಕಾನಂದರ ಚಿಂತನೆಗಳನ್ನು ಪ್ರತಿಯೊಬ್ಬರೂ ಅದರಲ್ಲೂ ಯುವ ಸಮೂಹ ಮೈಗೂಡಿಸಿಕೊಳ್ಳಬೇಕು. ವಿವೇಕಾನಂದರು ನಿರೀಕ್ಷಿಸಿದ್ದ ಭಾರತೀಯರು ನಾವಾಗಬೇಕು. ಅವರು ಆಶಿಸಿದ್ದ ಸಶಕ್ತ ಭವ್ಯ ಭಾರತವನ್ನು ನಾವಿಂದು ಕಟ್ಟಬೇಕು. ದೀನದೇವೋಭವ, ದಲಿತದೇವೋಭವ, ದರಿದ್ರದೇವೋಭವ ವಿವೇಕೋಕ್ತಿಗಳನ್ನು ಪಾಲಿಸಬೇಕು. ವಿವೇಕಾನಂದರು ಕಂಡ ಕನಸುಗಳನ್ನು ನನಸುಗೊಳಿಸುವ ಸನ್ಮಾರ್ಗದಲ್ಲಿ ನಾವು ಸಾಗಬೇಕು. ವಿಶ್ವದ ಯಾವುದೇ ದೇಶದ ಮುಂದೆ ಯಾವತ್ತೂ ನಮ್ಮ ಭಾರತ ತಲೆಬಾಗದೆ ತಲೆ ಎತ್ತಿ ನಿಲ್ಲುವಂತೆ ಪ್ರತಿಯೊಬ್ಬರೂ ದೇಶ ಕಟ್ಟಬೇಕು. ಇದೇ ನಾವು ವೀರ ಸನ್ಯಾಸಿ ವಿವೇಕಾನಂದರಿಗೆ ಸಲ್ಲಿಸುವ ಬಹುದೊಡ್ಡ ಸೆಲ್ಯೂಟ್. ಅಷ್ಟೇ ಅಲ್ಲ, ಇದು ಬ್ರಿಟಿಷರ ಸಂಕೋಲೆಯಲ್ಲಿ ನಲುಗಿದ್ದ ಭಾರತವನ್ನು ಪುನಶ್ಚೇತನಗೊಳಿಸುವಲ್ಲಿ ಅವಿರತವಾಗಿ ಶ್ರಮಿಸಿದ, ಸ್ವಾಭಿಮಾನ ಶೂನ್ಯರಾಗಿ ಪಾಶ್ಚಾತ್ಯ ಸಂಸ್ಕೃತಿಯ ಅಂಧಾನುಕರಣೆಯಲ್ಲಿದ್ದ ಭಾರತೀಯರಿಗೆ ವಿವೇಕದ ಅಮೃತ ಕುಡಿಸಿ ಹಿಂದೂ ಧರ್ಮವನ್ನು ಸಂರಕ್ಷಿಸುವಲ್ಲಿ ಹಾಗೂ ಅದರ ಸಾರವನ್ನು ತಿಳಿಸುವಲ್ಲಿ ಒಂದು ವೇದಿಕೆಯಂತೆ ಕೆಲಸ ಮಾಡಿ, ತಾಯಿ ಭಾರತಿಗೆ ತಮ್ಮನ್ನು ಸಂಪೂರ್ಣ ಸಮರ್ಪಿಸಿಕೊಂಡಿದ್ದ ದೇಶಕಂಡ ಮಹಾಚೇತನ, ಪುರುಷಸಿಂಹ ಸ್ವಾಮಿ ವಿವೇಕಾನಂದರಿಗೆ ನಾವು ನೀಡುವ ಮಹಾ ಗೌರವವೂ ಹೌದು.

ಇಂಥ ಧೀರೋದ್ಧಾತ ದಿವ್ಯಪುರುಷ, ಮಹಾಚೇತನ, ಮಹಾಚೈತನ್ಯ, ವಿಶ್ವವಿಜೇತ ಸ್ವಾಮಿ ವಿವೇಕಾನಂದರು ಜಗತ್ತಿಗೆ ಅವತರಿಸಿದ್ದು 1863ರ ಜನವರಿ 12ರಂದು ಕೊಲ್ಕತ್ತಾದ ಆಗರ್ಭ ಶ್ರೀಮಂತ ದತ್ತ ಮನೆತನದಲ್ಲಿ. ತಂದೆ ವಿಶ್ವನಾಥದತ್ತ, ತಾಯಿ ಭುವನೇಶ್ವರಿದೇವಿ. ವಿವೇಕಾನಂದರು ಕಾಶಿವಿಶ್ವನಾಥನ ವರದಿಂದ ಜನಿಸಿದವರೆಂದು ನಂಬಿದ್ದರಿಂದ ಇವರನ್ನು ಮೊದಮೊದಲು ವಿಶ್ವೇಶ್ವರನೆಂದು ಕರೆಯಲಾಗುತ್ತಿತ್ತು. ಮುಂದೆ ನರೇಂದ್ರ, ನರೇಂದ್ರನಾಥ ಎಂದು ಕರೆಯಲಾಯಿತು. ಶ್ರೀರಾಮಕೃಷ್ಣಪರಮಹಂಸರ ಶಿಷ್ಯರಾಗಿ ಸನ್ಯಾಸ ಸ್ವೀಕರಿಸಿದ ಮೇಲೆ ಇವರು ವಿವೇಕಾನಂದ ಎಂಬ ಹೆಸರನ್ನು ಪಡೆದು ವಿಶ್ವವಿಖ್ಯಾತರಾದರು. ಶ್ರೀರಾಮಕೃಷ್ಣ ಪರಮಹಂಸ ಹಾಗೂ ಸ್ವಾಮಿ ವಿವೇಕಾನಂದರ ಗುರುಶಿಷ್ಯ ಸಂಬಂಧ ಇಡೀ ಜಗತ್ತಿಗೆ ಮಾದರಿಯಾಗುವಂತದ್ದು! ಇಂಥ ಮಹಾಗುರುವನ್ನು ಪಡೆದದ್ದಕ್ಕೆ ವಿವೇಕಾನಂದರೂ, ಇಂಥ ಮಹಾಶಿಷ್ಯನನ್ನು ಪಡೆದದ್ದಕ್ಕೆ ಶ್ರೀರಾಮಕೃಷ್ಣರೂ ಒಬ್ಬರಿಗೊಬ್ಬರು ಮಹಾಭಾಗ್ಯಶಾಲಿಗಳಾಗಿದ್ದರು. ಒಟ್ಟಾರೆ ಇಂಥ ಮಹಾನ್ ಚೇತನಶಕ್ತಿಗಳನ್ನು ಪಡೆಯಲು ಇಡೀ ಪ್ರಪಂಚವೇ ಪುಣ್ಯ ಮಾಡಿತ್ತು!

ವಿವೇಕಾನಂದರು ಕೇವಲ ರಾಮಕೃಷ್ಣಪರಮಹಂಸರ ಶಿಷ್ಯರಾಗದೆ ತಮ್ಮದೇ ರೀತಿಯಲ್ಲಿ ಬಹುದೊಡ್ಡ ಚಿಂತಕರಾಗಿ ಪ್ರಸಿದ್ಧಿ ಪಡೆದವರು. ಅವರ ಮುಖ್ಯ ಕೊಡುಗೆ ಎಂದರೆ, ಅದ್ವೈತ ಸಿದ್ಧಾಂತ ಕೇವಲ ತಾತ್ವಿಕವಾಗಿ ಉಚ್ಚ ತಂತ್ರಜ್ಞಾನ ಮಾತ್ರವಲ್ಲದೆ ಸಾಮಾಜಿಕ ಹಾಗೂ ರಾಜಕೀಯ ದೃಷ್ಟಿಯಿಂದಲೂ ಉಪಯುಕ್ತ ಎಂಬುದನ್ನು ತೋರಿಸಿಕೊಟ್ಟರು. ಅವರ ಅಭಿಪ್ರಾಯದಂತೆ ರಾಮಕೃಷ್ಣಪರಮ



ಬನ್ನೂರು ಕೆ.ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167


ಹಂಸರಿಂದ ಅವರು ಪಡೆದ ಮುಖ್ಯ ಬೋಧನೆಗಳಲ್ಲಿ ಒಂದೆಂದರೆ ಎಲ್ಲರಲ್ಲಿಯೂ ದೇವರಿದ್ದಾನೆ ಎಂಬುದು. ಇದೇ ವಿವೇಕಾನಂದರ ಮಂತ್ರವಾಯಿತಲ್ಲದೆ ಇವರ ದರಿದ್ರನಾರಾಯಣ ಸೇವೆ ತತ್ವಕ್ಕೆ ಮಾರ್ಗಸೂಚಿ ಮಾಡಿಕೊಟ್ಟಿತು. ಈ ತತ್ವದಂತೆಯೇ ದೀನದಲಿತರ, ಬಡಜನರ ಸೇವೆಯಲ್ಲಿಯೇ ದೇವರ ಸೇವೆಯನ್ನು ಮಾಡುವ ಮಾರ್ಗವನ್ನು ಅವರು ಪಾಲಿಸಿದರು. ಎಲ್ಲರಲ್ಲಿಯೂ ದೇವರಿದ್ದು, ಎಲ್ಲರೂ ಸಮಾನರೆಂದಾದ ಮೇಲೆ ಕೆಲವರಿಗೆ ಮಾತ್ರ ಏಕೆ ಹೆಚ್ಚು ಬೆಲೆ ಬರಬೇಕು ಎಂಬ ಪ್ರಶ್ನೆಯನ್ನು ವಿವೇಕಾನಂದರು ಕೇಳಿ ಕೊಂಡರು. ಅವರ ಅಂತಿಮವಾದ ತೀರ್ಪೆಂದರೆ ಭಕ್ತನು ಮೋಕ್ಷವನ್ನು ಅನುಭವಿಸಿದಾಗ ನಮ್ಮಲ್ಲಿರುವ ಎಲ್ಲ ಭೇದ-ಭಾವಗಳು ಇಲ್ಲವಾಗಿ, ಉಳಿಯುವುದೆಂದರೆ ಬ್ರಹ್ಮನೊಂದಿಗೆ ತಮ್ಮ ಐಕ್ಯವನ್ನು ಅರಿಯದ ಮತ್ತು ಕೆಳ ತುಳಿಯಲ್ಪಟ್ಟಿರುವ ತಳಸ್ತರದ ಜನರ ಬಗೆಗೆ ಸಂತಾಪ ಹಾಗೂ ಅವರಿಗೆ ಸಹಾಯ ಮಾಡುವ ಸದೃಢ ನಿರ್ಧಾರ!

ನಿನ್ನನ್ನು ದುರ್ಬಲಗೊಳಿಸುವ ಆಲೋಚನೆಗಳು ನಿನ್ನ ಬಳಿ ಬರಲು ಬಿಡಬೇಡಿಯೆನ್ನುತ್ತಾರೆ ವಿವೇಕಾನಂದರು. ಮನುಷ್ಯ ಜೀವನದಲ್ಲಿ ಎದುರಾಗುವ ಪ್ರತಿಯೊಂದು ಸಮಸ್ಯೆಗಳಿಗೂ ವಿವೇಕಾನಂದರ ಮಾತುಗಳಲ್ಲಿ ಮದ್ದುಂಟು. ಇದೊಂದು ರೀತಿ ದಿವೌಷಧಿ. ಭವ್ಯ ಔಷಧಿ ಕೂಡ. ಇವರ ಆತ್ಮವಿಶ್ವಾಸ, ಆತ್ಮಸ್ಥೈರ್ಯ, ಮನೋವಿಕಾಸ ಎಂಬುದು ಭವ್ಯ ಭವಿಷ್ಯದ ಬಂಗಾರದ ಬದುಕಿನ ನಿರೀಕ್ಷೆಯಲ್ಲಿರುವ ಯುವ ಸಮುದಾಯಕ್ಕೆ ಸಂಜೀವಿನಿಯಿದ್ದಂತೆ. ಯುವಜನರು ಸಮಸ್ಯೆಯ ಸುಳಿಯಲ್ಲಿ ಸಿಲುಕಿ ನಿತ್ರಾಣಗೊಂಡಾಗ, ನಿರಾಶೆಯಿಂದ ಕುಗ್ಗಿ ಹೋದಾಗ ವಿವೇಕಾನಂದರ ಸೂಕ್ತಿಗಳು ಅಮ್ಲಜನಕದಂತೆ ಚೈತನ್ಯಗೊಳಿಸುತ್ತವೆ. ಜ್ಞಾನ ಜ್ಯೋತಿಯಾಗಿ ಯುವ ಪೀಳಿಗೆ ಮುನ್ನಡೆಯಲು, ಸಮಸ್ಯೆಗಳಿಂದ ಮುಕ್ತಿ ಹೊಂದಲು ದಾರಿದೀವಿಗೆಯಾಗುತ್ತದೆ. ವಿವೇಕಾನಂದರ ತತ್ವಾದರ್ಶಗಳೇ ಹಾಗೆ, ಮಾನವ ಕೋಟಿಯನ್ನು ಉದ್ಧರಿಸಲೆಂದೇ ಹುಟ್ಟಿದವು. ದರಿದ್ರ ದೇವೋಭವ ಎಂದು ದರಿದ್ರರಲ್ಲೂ ದೈವತ್ವ ಕಂಡ ವಿವೇಕಾನಂದರೂ ಸಹ ಮನುಷ್ಯರನ್ನು ಉದ್ಧಾರ ಮಾಡಲೆಂದೇ ಅವತರಿಸಿದ ಮಹಾಪುರುಷರು.


ಮಕ್ಕಳ ಚಿತ್ರಕಥೆ

'ಒಂಟೆ ಮತ್ತು ನರಿ' (ಕಳೆದ ಸಂಚಿಕೆಯಿಂದ)

■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




ಅದೇ ರಾತ್ರಿ, ನರಿಯನ್ನು ಬೆನ್ನ ಮೇಲೆ ಹೊತ್ತುಕೊಂಡು ಒಂಟೆ ನದಿ ದಾಟಿತು. ಇಬ್ಬರೂ ಕಬ್ಬಿನಗದ್ದೆಗೆ ಬಂದು ಚೆನ್ನಾಗಿ ಕಬ್ಬನ್ನು ತಿಂದವು. ಬೇಗ ಅವುಗಳ ಹೊಟ್ಟೆ ತುಂಬಿತು.




ಆಗ ನರಿಯು, 'ನನಗೆ ಈಗ ತುಂಬ ಖುಷಿಯಾಗುತ್ತಿದೆ....ನನಗೆ ಖುಷಿಯಾದಾಗ ಹಾಡಬೇಕು ಎನ್ನಿಸುತ್ತೆ..!' ಎಂದು ಹೇಳಿ ಒಂಟೆಯ ಪ್ರತಿಕ್ರಿಯೆಗೂ ಕಾಯದೆ ಜೋರಾಗಿ ಊಳಿಡಲು ಪ್ರಾರಂಭಿಸಿಯೇಬಿಟ್ಟಿತು. ಒಂಟೆ ಎಷ್ಟು ಕೇಳಿಕೊಂಡರೂ ನರಿ ಊಳಿಡುವುದನ್ನು ನಿಲ್ಲಿಸಲೇ ಇಲ್ಲ.




ಸ್ವಲ್ಪಹೊತ್ತಿಗೆ ಹಳ್ಳಿ ಜನರು ಓಡೋಡಿ ಬಂದರು. ಒಂಟೆಗೆ ತುಂಬ ಭಯವಾಯಿತು. ಸುತ್ತ ಎಲ್ಲಿ ನೋಡಿದರೂ ನರಿ ಕಾಣಿಸಲೇ ಇಲ್ಲ. ಆಗಲೇ ನರಿಯು ಒಂದು ಪೊದೆಯಲ್ಲಿ ಅವಿತುಕೊಂಡಿತ್ತು. ಜನರಿಗೆ, ಒಂಟೆ ಮಾತ್ರ ಕಾಣಿಸಿಕೊಂಡಿದ್ದರಿಂದ ಹಿಡಿದು ಕೋಲಿನಿಂದ ಚೆನ್ನಾಗಿ ಬಡಿದರು.



ಜನರೆಲ್ಲಾ ಹಿಂದಿರುಗಿದ ನಂತರ ನರಿಯು, 'ನಿನಗೆ ಎಲ್ಲಿಯೂ ಅವಿತು ಕೂರಲಿಕ್ಕೇ ಆಗುವುದಿಲ್ಲ... ಅಲ್ಲವೇ..!' ಎಂದು ಹಾಸ್ಯಮಾಡಿ ನಗಲಾರಂಭಿಸಿತು. ಒಂಟೆಯು 'ಸ್ವಾರ್ಥಿ ನರಿ, ನಿನಗೆ ತಕ್ಕ ಪಾಠ ಕಲಿಸುತ್ತೇನೆ..!' ಎಂದು ಮನದಲ್ಲೇ ನಿಶ್ಚಯಿಸಿತು. ಅವರಿಬ್ಬರೂ ಹಿಂದಿರುಗಲಿಕ್ಕಾಗಿ ನದಿ ದಾಟಲು ಪ್ರಾರಂಭಿಸಿದರು. ಆಗ ಮತ್ತೆ ನರಿಯು ಒಂಟೆಯ ಬೆನ್ನಿನ ಮೇಲೆ ಕುಳಿತುಕೊಂಡಿತ್ತು.



'ನಿನಗೆ ಹಾಡಬೇಕು ಎನ್ನಿಸಿತಲ್ಲಾ... ಹಾಗೆಯೇ ನನಗೆ ಈಗ ಮೈ ಮುಮುರಿಯಬೇಕು ಎನ್ನಿಸುತ್ತಿದೆ..!' ಎಂದು ಒಂಟೆಯು ಹೇಳಿತು. ಇದರಿಂದ ಹೆದರಿದ ನರಿಯು 'ನಾನು ನೀರಲ್ಲಿ ಬಿದ್ದುಹೋಗುತ್ತೇನೆ ಬೇಡ..ಬೇಡ..!' ಎಂದು ಗೋಗರೆಯುತ್ತಾ ಬೇಡಿಕೊಂಡಿತು.



'ನಿನ್ನಂತಹ ಸ್ವಾರ್ಥಿ ಸ್ನೇಹಿತನಿಗೆ ಏಕೆ ಕರುಣೆ ತೋರಿಸಲಿ...?' ಎಂದು ಹೇಳುತ್ತಾ ಒಂಟೆಯು, ಜೋರಾಗಿ ಮೈಮುರಿದೇ ಬಿಟ್ಟಿತು. ಆಗ ನರಿಯು ಜಾರಿ ನೀರಿಗೆ ಬಿದ್ದುಬಿಟ್ಟಿತು. (ಮುಗಿಯಿತು)

ನೀತಿ:- ಮಾಡಿದುಣ್ಣೋ ಮಾರಾಯಾ

ವಾರಭವಿಷ್ಯ

11.01.2026 ರಿಂದ 17.01.2026

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಧನುಸ್ಸು, ಮಕರ, ಚಂದ್ರ-ತುಲಾ, ವೃಶ್ಚಿಕ, ಧನುಸ್ಸು, ಮಕರ, ಕುಜ-ಧನುಸ್ಸು, ಮಕರ, ಬುಧ-ಧನುಸ್ಸು, ಗುರು-ಮಿಥುನ, ಶುಕ್ರ-ಧನುಸ್ಸು, ಮಕರ, ಶನಿ-ಮೀನ, ರಾಹು-ಕುಂಭ ಮತ್ತು ಕೇತು-ಸಿಂಹ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720






ಮೇಷ (ಚು,ಚೆ,ಲ,ಲಿ,ಲು,ಲೆ,ಲೊ,ಅ)

ವಾರದ ಆದಿಗೆ ಸೌಭಾಗ್ಯ ಪ್ರಾಪ್ತಿ. ಎದುರಾಗುವ ಸಮಸ್ಯೆಗಳನ್ನು ಯಶಸ್ವಿಯಾಗಿ ನಿಭಾಯಿಸುವಿರಿ. ಸತಿ-ಸುತರ ಜೊತೆ ಸಂಯಮದಿಂದ ವರ್ತಿಸಿ. ಅನ್ಯತಾ ಮನಃಶಾಂತಿಗೆ ಪರದಾಡಬೇಕಾಯಿತು. ಸಣ್ಣ ಪುಟ್ಟ ಕಾಯಿಲೆಗಳು ಕಾಡಿಸುತ್ತವೆ. ಸೂಕ್ತ ಉಪಚಾರ ಮಾಡಿಕೊಳ್ಳಿ. ವಿದ್ಯುತ್ ವಸ್ತುಗಳಿಂದ ಎಚ್ಚರವಾಗಿರಿ. ವಾರಾಂತ್ಯಕ್ಕೆ ಗೃಹೋಪಯೋಗಿ ವಸ್ತುಗಳ ಖರೀದಿಯಿಂದ ಶ್ರೀಮತಿಗೆ ಸಂತೋಷ.


ಶ್ರೀ ಲೋಕಮಾತೆ ಚಾಮುಂಡೇಶ್ವರಿ ದರ್ಶನ. ಶುಭ ಸಂಖ್ಯೆ-8



ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)

ಸುದೀರ್ಘವಾದ ಸಮಸ್ಯೆಗಳು ಬಗೆಹರಿಯುವ ಲಕ್ಷಣವಿದೆ. ಮನೋಭೀಷ್ಟಗಳ ಪೂರೈಕೆಗೆ ಗುರು ಸಹಕಾರ. ಕೃಷಿಕರಿಗೆ ಉತ್ತಮ ಲಾಭ ಮತ್ತು ಅಭಿವೃದ್ಧಿ, ಹಳೆಯ ಕಾಯಿಲೆಗಳಿಂದ ಮುಕ್ತಿ. ಮಾತೃಶ್ರೀಯವರ ಆರೋಗ್ಯದಲ್ಲಿ ವ್ಯತ್ಯಯವಾಗಬಹುದು. ವಾರದ ಕಡೆಗೆ ಸಾಮಾಜಿಕವಾಗಿ ಗೌರವ, ಪ್ರತಿಷ್ಠೆಗಳು ವೃದ್ಧಿಸುವುದು. ವಿದ್ಯಾರ್ಥಿಗಳು ಸಾಧನಾ ಮಾರ್ಗದಲ್ಲಿ ಮುನ್ನಡೆದು ಪ್ರಶಸ್ತಿಗೆ ಭಾಜನರಾಗುವರು.

ಶ್ರೀ ದೇವೀ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-1



ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)

ವಾರದ ಆದಿಭಾಗಕ್ಕೆ ಹೆಚ್ಚಿನ ಹಣ ಕೈ ಸೇರಿದರೂ ಕೈ ಬರಿದಾಗಲು ಕ್ಷಣ ಮಾತ್ರ. ಫಲಪ್ರಾಪ್ತಿ ಸಮಯದಲ್ಲಿ ನಿರಾಶೆ ಎದುರಾಗುವುದು. ಗೃಹ ಕಲಹಗಳು ನಿಮ್ಮನ್ನು ಕ್ಷೋಭೆಗೊಳಿಸುತ್ತವೆ. ಅನ್ಯ ಸ್ತ್ರೀಯರೊಂದಿಗೆ ದುಡುಕಿನ ವರ್ತನೆಯಿಂದ ತೊಂದರೆಗಳನ್ನು ಅನುಭವಿಸುವಿರಿ. ವಾರದ ಕಡೆಗೆ ನಿಮ್ಮ ರಾಶ್ಯಾಧಿಪತಿ ಬುಧನ ಕೃಪೆಯಿಂದ ಯತ್ನ ಕಾರ್ಯ ಜಯ, ದಿನಸಿ ವ್ಯಾಪಾರಿಗಳಿಗೆ ಉತ್ತಮ ಲಾಭ.


ಓಂ ನಮೋ ನಾರಾಯಣಾಯ ಮಂತ್ರ ಜಪಿಸಿ. ಶುಭ ಸಂಖ್ಯೆ-4



ಕಟಕ (ಹೊ,ಹು,ಹೆ,ಡ,ಡಿ,ಡು)

ಧನಾದಾಯವಾದರೂ ವ್ಯಯಸ್ಥಾನ ಸ್ಥಿತಗುರು ಮಿತಿಮೀರಿದ ಖರ್ಚು-ವೆಚ್ಚಗಳಿಗೆ ಕಾರಣನಾಗುತ್ತಾನೆ. ಕಾರಣಾಂತರಗಳಿಂದ ಪರಸ್ಥಳ ವಾಸ, ಅಕಾಲ ಭೋಜನ. ಸಾಲಗಾರರ ಒತ್ತಡ. ವಾರ ಮಧ್ಯೆ ಮಿತ್ರ ಜನರ ಸಂಪರ್ಕದಿಂದ ಸಮಸ್ಯೆಗಳ ನಿವಾರಣೆಯಿಂದ ಮನಸ್ಸಿಗೆ ನಿರಾಳ. ಅಶುಭ ಶನಿಯಿಂದ ದುಡುಕಿನ ವರ್ತನೆ, ನಿಮ್ಮ ದೇಹಾರೋಗ್ಯದ ಬಗ್ಗೆ ಕಾಳಜಿ ಇರಲಿ, ಜಂಕ್ ಫುಡ್ ಒಳ್ಳೆಯದಲ್ಲ.

ಶ್ರೀ ದುರ್ಗಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-4



ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)

ನಿಮ್ಮ ಯೋಜನೆಗಳು ಪ್ರಗತಿಯತ್ತ ಸಾಗುತ್ತಲಿದೆ. ಗೃಹದಲ್ಲಿ ಹರುಷದ ವಾತಾವರಣ, ಸುವಸ್ತ್ರ, ಸುಭೋಜನ ಶಯನಾದಿ ಸುಖ. ನೂತನ ಹೂಡುವಿಕೆಗಳನ್ನು ಧೈರ್ಯವಾಗಿ ಮಾಡಬಹುದು. ಶತ್ರುಗಳ ಹಿಂದೆ ಸರಿಯುವರು. ವ್ಯಯಾಧಿಕ್ಯವಿದ್ದಾಗ್ಯೂ ಸಮಯಕ್ಕೆ ಸರಿಯಾಗಿ ಹಣ ಒದಗುವುದು. ಧೃತಿಗೆಡುವ ಅಗತ್ಯವಿಲ್ಲ. ನಿಮ್ಮ ಸಂತಾನ ಶುಭ ವಾರ್ತೆ ತರುವರು. ಉಷ್ಣ ಜನಿತ ಕಾಯಿಲೆಗೆ ಗುರಿಯಾಗುವ ಸಂಭವ.


ಶ್ರೀ ಆದಿತ್ಯ ಹೃದಯ ಪಠಿಸಿ. ಶುಭ ಸಂಖ್ಯೆ-3



ಕನ್ಯಾ (ಟೊ,ಪ,ಪಿ,ಪು,ಷ,ಣ,ಠ,ಪೆ,ಪೊ)

ಪ್ರಭಾವಿ ವ್ಯಕ್ತಿಗಳ ಸಂಪರ್ಕದಿಂದ ನಿಂತು ಹೋಗಿದ್ದ ಕೆಲಸ ಕಾರ್ಯಗಳು ಸುಗಮವಾಗಿ ಮುನ್ನಡೆಯುವುದು. ನೂತನ ಮಿತ್ರರ ಪರಿಚಯದಿಂದ ವ್ಯಾಪಾರ, ವ್ಯವಹಾರಗಳಲ್ಲಿ ಲಾಭವನ್ನು ಗಳಿಸುವಿರಿ. ವಾರ ಮಧ್ಯೆ ಐಷಾರಾಮಿ ವಸ್ತುಗಳ ಖರೀದಿ ಹಾಗೂ ಶುಭ ವಾರ್ತೆಯೊಂದು ಬರಲಿದೆ. ವ್ಯಾಪಾರ ಸಂಬಂಧಿ ತಿರುಗಾಟಗಳಿಂದ ದೇಹಕ್ಕೆ ಬಳಲಿಕೆ. ಶ್ರೀಮತಿಯ ಮನಸ್ಸಿಗೆ ಬೇಸರವಾಗದಂತೆ ನಡೆದುಕೊಳ್ಳಿ.

ಶ್ರೀ ವಿಷ್ಣುನಾಮ ಸ್ಮರಣೆ. ಶುಭ ಸಂಖ್ಯೆ-2



ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)

ವಾರಾದಾರಂಭಕ್ಕೆ ವ್ಯಾಪಾರ, ವ್ಯವಹಾರಗಳು ಚೆನ್ನಾಗಿ ನಡೆದು ಅಧಿಕ ಲಾಭಾಂಶ ದೊರಕುವುದು. ಸತ್ಕರ್ಮಾಚರಣೆಯಿಂದ ಧನ್ಯತಾ ಭಾವ, ಧನುರ್ಮಾಸ ಸ್ನಾನ. ಅಡಚಣೆಗಳು ಇದ್ದಾಗ್ಯೂ ಕಾರ್ಯ ಕಲಾಪಗಳು ಯಶಸ್ವಿಯಾಗುವುವು. ಪುತ್ರರ ವಿಚಾರದಲ್ಲಿ ಬೇಸರದ ಮಾತು. ಅನಾವಶ್ಯಕ ಸಂಚಾರಗಳಿಂದ ದೇಹಾಯಾಸ. ಮನೆ ಕೆಲಸದವರಿಂದ ಮೋಸ ಸಂಭವ. ಪಿತ್ತ ಸಂಬಂಧಿ ಕಾಯಿಲೆ, ವೈದ್ಯರ ಭೇಟಿ.


ಶ್ರೀ ನವಗ್ರಹ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-6



ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯು,ಯಿ,ಯ)

ಕನಸುಗಳು ನನಸಾಗಲು ಹೆಚ್ಚಿನ ತಯಾರಿ ಹಾಗೂ ಪರಿಶ್ರಮಬೇಕಾಗುತ್ತದೆ. ಹೆಚ್ಚಿನ ಗ್ರಹಗಳು ನಿಮಗೆ ಪೂರಕವಾಗಿಲ್ಲ. ದುರ್ಮಾರ್ಗದಲ್ಲಿ ನಡೆದರೆ ಖಂಡಿತ ಸಂಕಟಕ್ಕೆ ಗುರಿಯಾಗುವಿರಿ. ಮಕ್ಕಳೇ ಎದುರಾಡುವರು. ನೀವು ಮಿತ ಭಾಷಿಗಳಾದರೆ ಒಳಿತು. ನಿಯೋಜಿತ ಕೆಲಸಗಳು ನಿಧಾನಗತಿಯಲ್ಲಿ ಸಾಗುವುದು. ವ್ಯಾಪಾರದಲ್ಲಿ ಅಲ್ಪ ಗಳಿಕೆಗೆ ತೃಪ್ತಿ ಪಟ್ಟುಕೊಳ್ಳಿ. ಆರೋಗ್ಯದ ಕಡೆಯೂ ಗಮನವಿರಲಿ.

ಶ್ರೀ ಸಂಕಷ್ಟಹರ ಗಣಪತಿ ವಂದನೆ. ಶುಭ ಸಂಖ್ಯೆ-1



ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)

ನಿಮ್ಮ ಕಾರ್ಯಕ್ಷೇತ್ರದಲ್ಲಿ ಗಣನೀಯ ಅಭಿವೃದ್ಧಿಯನ್ನು ಕಾಣುವಿರಿ. ಸುವಾರ್ತೆ ಬಂದು ಮನಸ್ಸಿಗೆ ಹರ್ಷ, ಸುಖ, ಸಂತೋಷಗಳು ಕೂಡಿ ಬರಲಿದೆ. ಸಾಮಾಜಿಕ ಸೇವೆಗಳಿಂದ ಪ್ರಸಿದ್ಧಿಗೆ ಬರುವಿರಿ. ಸರ್ಕಾರಿ ನೌಕರರಿಗೆ ಪದೋನ್ನತಿಯ ಸಂಭವವಿದೆ. ರಾಹು ಕಾರಣ ಮುಂಗೋಪದಿಂದ ಅನರ್ಥಗಳು ನಡೆದು ಹೋಗುವುದು, ಯಾರಲ್ಲೂ ದ್ವೇಷ ಸಾಧನೆ ಮಾಡದಿರಿ.

ಶ್ರೀ ಶನೇಶ್ಚರಾಯ ನಮಃ ಎಂಬ ಮಂತ್ರ ಜಪಿಸಿ. ಶುಭ ಸಂಖ್ಯೆ-3



ಮಕರ (ಬೊ,ಜ,ಜಿ,ಶಿ,ಶು,ಶೆ,ಶೊ,ಗ,ಗಿ)

ವಿವಿಧ ಮೂಲಗಳಿಂದ ಹಣ ಕೈ ಸೇರಿದರೂ ಜೇಬು ಖಾಲಿ. ಕೆಲವೊಮ್ಮೆ ಸಾಲ ಮಾಡಬೇಕಾದ ಪರಿಸ್ಥಿತಿ. ಮಿತ್ರ ಸಹಾಯಹಸ್ತ ದೊರೆಯುವುದು. ವಾರ ಮಧ್ಯೆ ಇಷ್ಟಾರ್ಥಗಳ ಪೂರೈಕೆಯಾದರೂ ಮನಸ್ಸಿಗೆ ದುಗುಡತೆ ಆವರಿಸಿರುತ್ತೆ. ನೌಕರಿ ಸ್ಥಳದಲ್ಲಿ ಕಿರಿಕಿರಿಗಳು ಉಂಟಾಗುವುದು, ಯಾರನ್ನೂ ಎದುರು ಹಾಕಿಕೊಳ್ಳಬೇಡಿ. ವಿಷಯ ವಿಕೋಪಕ್ಕೆ ಹೋದೀತು. ತಾಳ್ಮೆಯಿಂದ ಗಾಡಿ ಓಡಿಸಿ.

ಶ್ರೀ ಆಂಜನೇಯ ಆರಾಧನೆ, ಶುಭ ಸಂಖ್ಯೆ-8



ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)

ವಾರದ ಆರಂಭಕ್ಕೆ ಧನ ಸಂಚಯ ಹಾಗೂ ಉತ್ತಮರ ಸಹವಾಸ. ಮನೆ ಮಂದಿಯ ಆದರಾಭಿಮಾನಗಳಿಗೆ ಭಾಜನರಾಗುವಿರಿ. ಸಾಡೇಸಾತಿಯ ಪ್ರಭಾವವಿದ್ದಾಗ್ಯೂ ಸಣ್ಣ ಪುಟ್ಟ ಚುನಾವಣೆಗಳಲ್ಲಿ ಗೆಲುವನ್ನು ಸಾಧಿಸುವಿರಿ. ಪ್ರೀತಿ-ಪ್ರಣಯ ವಿಷಯಗಳು ಮಧುರ ಅನುಭವವನ್ನು ನೀಡುವುದು. ವಾರದ ಕಡೆಗೆ ಮಾನಸಿಕ ಅಸ್ಥಿರತೆ ಕಾಡುವುದು. ದಿನಚರ್ಯೆಯಲ್ಲಿ ಮೆಡಿಟೇಶನ್ ಅಳವಡಿಸಿಕೊಳ್ಳಿ.

ಶ್ರೀ ಶ್ರೀಕಂಠೇಶ್ವರ ದರ್ಶನ. ಶುಭ ಸಂಖ್ಯೆ-6



ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)

'ಕರ್ಮಕ್ಕೆ ತಕ್ಕಂತೆ ಕರ್ಮ ಫಲ'. ಯಾವುದೇ ಮುಖ್ಯ ನಿರ್ಧಾರಕ್ಕೆ ಮುನ್ನ ನಿಧಾನಿಸಿ. ನಿಮ್ಮ ಸುತ್ತಲೂ ಅಸೂಯಾಪರರು ಇದ್ದಾರೆ. ಸರ್ಕಾರಿ ಕಚೇರಿ, ಕೆಲಸಗಳು ನಿಮ್ಮ ನಿರೀಕ್ಷೆಯಂತೆ ಸಾಗುವುದು. ಮನೆ ಮಂದಿಯ ಅಸಹಕಾರದಿಂದ ಮನಸ್ಸಿಗೆ ಬೇಸರ. ವಾರದ ಕಡೆಗೆ ದೇವತಾ ಕಾರ್ಯಗಳಲ್ಲಿ ಒಲವು, ಸತ್ಕರ್ಮಾಚರಣೆಯಿಂದ ಧನ್ಯತಾಭಾವ ಹಾಗೂ ಟೂರ್ ಪ್ರೋಗ್ರಾಂ.

ಶ್ರೀ ಪಂಚಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ-2

ತಿ.ನರಸೀಪುರದ ಅಲೆಮಾರಿ, ಕೊರಚ ಸಮಾಜದವರಿಗೆ ನಿವೇಶನದ ಹಕ್ಕು ಪತ್ರ ನೀಡಿ

ಪರಿಶಿಷ್ಟ ಜಾತಿ, ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಶ್ರೀಮತಿ ಪಲ್ಲವಿ ಸೂಚನೆ



ರಾಜ್ಯ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಪಲ್ಲವಿ, ಟಾರ್ಪಲ್ ವಿತರಣೆ ಮಾಡಿದರು

ತಿ.ನರಸೀಪುರ, ಜ.10(ಎಸ್‌ಕೆ)– ಪಟ್ಟಣದ ಹೇಳವರಹುಂಡಿಯ ಶಿವಪಾರ್ವತಿ ನಗರದಲ್ಲಿ ತಾತ್ಕಾಲಿಕ ಗುಡಿಸಲುಗಳಲ್ಲಿ ನೆಲೆಸಿರುವ 40ಕ್ಕೂ ಹೆಚ್ಚು ಪರಿಶಿಷ್ಟ ಜಾತಿ ಅಲೆಮಾರಿ, ಕೊರಚ ಸಮುದಾಯದ ಕುಟುಂಬಗಳಿಗೆ ತ್ವರಿತವಾಗಿ ನಿವೇಶನದ ಹಕ್ಕು ಪತ್ರ ವಿತರಣೆಗೆ ಕ್ರಮವಹಿಸಿ ಎಂದು ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಶ್ರೀಮತಿ ಪಲ್ಲವಿ ಜಿ ಸಮಾಜ ಕಲ್ಯಾಣ ಇಲಾಖೆ ಹಾಗೂ ಪುರಸಭೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಜ.26ರೊಳಗೆ ಹಕ್ಕು ಪತ್ರ ವಿತರಣೆಯಾಗಬೇಕು. ಈ ಕುರಿತು ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೂ ತರಲಾಗುವುದು. ಮುಂದಿನ ಬಾರಿ ಶಿವಪಾರ್ವತಿ ನಗರಕ್ಕೆ ಬರುವಾಗ ಹಕ್ಕು ಪತ್ರ ವಿತರಣೆಯಾಗಿ, ದೊಡ್ಡ ಕಾರ್ಯಕ್ರಮವೇ ಆಯೋಜನೆಯಾಗಬೇಕು. ರಾಜ್ಯ ಸರ್ಕಾರ ಬಡವರ ಪರವಾಗಿ ಕೆಲಸ ಮಾಡುತ್ತಿದೆ. ಧ್ವನಿ ಇಲ್ಲದ, ಅವಕಾಶ ವಂಚಿತ ಕೊರಮ–ಕೊರಚ ಸಮುದಾಯಗಳಿಗೆ ನ್ಯಾಯ ದೊರಕಿಸಿ ಕೊಡುವ ಕೆಲಸ ಮಾಡಬೇಕು. – ಪಲ್ಲವಿ.ಜಿ.

ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದವತಿಯಿಂದಆಯೋಜಿಸಲಾಗಿದ್ದಟಾರ್ಪಲ್ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಶಿವಪಾರ್ವತಿನಗರದ ನಿವಾಸಿಗಳಿಗೆ ಶಾಶ್ವತ ನೆಲೆ ದೊರಕಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು. ಜಿಲ್ಲಾ ಉಸ್ತುವಾರಿ ಸಚಿವರು ಕೂಡ ವಿಶೇಷ ಕಾಳಜಿಯನ್ನು ತೋರಿದ್ದು, ಸಮಾಜ ಕಲ್ಯಾಣ ಇಲಾಖೆಯಿಂದ ಅನುದಾನ ನೀಡುವ ಭರವಸೆ ನೀಡಿದ್ದಾರೆ ಎಂದರು.

ಟಾರ್ಪಲ್ ಹಂಚಿಕೆ ಮುಖ್ಯವಲ್ಲ. ಶಾಶ್ವತ ನೆಲೆ ಸಿಕ್ಕಿ, ಹಕ್ಕು ಪತ್ರಗಳನ್ನು ನಿಡುವಂತಾಗಬೇಕು. ಗುಡಿಸಲು ಮುಕ್ತವಾಗಿ ಬದುಕು ನಡೆಸುವಂತಾಗಬೇಕು. ಈ ನಿಟ್ಟಿನಲ್ಲಿ ತಿ.ನರಸೀಪುರ ಪುರಸಭೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಇಚ್ಛಾಶಕ್ತಿಯಿಂದ ಕಾರ್ಯ ನಿರ್ವಹಿಸಬೇಕು. ಆದಷ್ಟು ಬೇಗ ಯಾವುದೇ ವಿಳಂಬವನ್ನು ಮಾಡದೆ ಹಕ್ಕು ಪತ್ರವನ್ನು ನಿಡುವ ಕೆಲಸ ಮಾಡಬೇಕೆಂದು ಸೂಚಿಸಿದರು. ಅಖಿಲ ಕರ್ನಾಟಕ ಕುಳುವ ಮಹಾ ಸಂಘದ ಪ್ರಧಾನ ಕಾರ್ಯದರ್ಶಿ ಆನಂದ್ ಕುಮಾರ್ ಏಕಲವ್ಯ, ರಾಜ್ಯ ಸಂಘಟನಾ ಕಾರ್ಯದರ್ಶಿ ರಂಗಸ್ವಾಮಿ, ಮೈಸೂರು ಜಿಲ್ಲಾ ಕೊರಮ–ಕೊರಚ ಮಹಾ ಸಂಘದ ಪ್ರಧಾನ ಕಾರ್ಯದರ್ಶಿ ಮೋಹನ್ ಕಾಯಕ, ಜಂಟಿ ಕಾರ್ಯದರ್ಶಿ ರವಿ ಕುಮಾರ್, ಉಪಾಧ್ಯಕ್ಷ ಸಿ.ರಾಜು, ದಲಿತ ಸಂಘರ್ಷ ಸಮಿತಿ ತಾಲೂಕು ಸಂಚಾಲಕ ಯಾಚೇನಹಳ್ಳಿ ಸೋಮಶೇಖರ್, ಬನ್ನಳ್ಳಿ ಸೋಮಣ್ಣ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ವಿನೂ ತನ್ ಮತ್ತಿತರರಿದ್ದರು.

ಪ.ಜಾತಿಯ ಅಲೆಮಾರಿ, ಕೊರಚ ಸಮುದಾಯದ ಜನರಿಗೆ ಸ್ವಂತ ಸೂರನ್ನು ಕಲ್ಪಿಸಲು ದಶಕಗಳಿಂದ ದಸಂಸ ಅವಿರತವಾಗಿ ಪ್ರಯತ್ನಿಸಿ, ಹೋರಾಟ ಮಾಡುವ ಸಂದರ್ಭದಲ್ಲಿ ನಿಗಮದ ಅಧ್ಯಕ್ಷರ ಸಕಾಲಿಕ ಪ್ರವೇಶದಿಂದ ಕೊನೆಗೂ ನಿವೇಶನ ಸಿಕ್ಕಿದೆ. ಜಿಲ್ಲಾ ಉಸ್ತುವಾರಿ ಸಚಿವರ ಕ್ಷೇತ್ರದ ಮತದಾರರಾಗಿ ಸಿಎಂ ಕ್ಷೇತ್ರದ ವ್ಯಾಪ್ತಿಯಲ್ಲಿ ನೆಲೆ ಪಡೆದುಕೊಂಡಿರುವ ಈ ಜನರ ಹೆಸರಿಗೆ ನಿವೇಶನ ಖಾತೆ ಮಾಡಿಕೊಡಲು ಆಡಳಿತಾತ್ಮಕ ಕ್ರಮಗಳನ್ನು ನಿಗಮದ ಅಧ್ಯಕ್ಷರು ಸರಾಗಗೊಳಿಸಬೇಕು. –ಆಲಗೂಡು ಶಿವಕುಮಾರ್, ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕ

ಇಂದು ಕೆ.ಆರ್.ನಗರಕ್ಕೆ ಕೇಂದ್ರ ಸಚಿವ ಕುಮಾರಸ್ವಾಮಿ ಭೇಟಿ



ಕೆ.ಆರ್.ನಗರ: ಬೃಹತ್ ಉಕ್ಕು ಮತ್ತು ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ನಾಳೆ (ಜ.11) ಬೆಳಗ್ಗೆ 10.30 ಗಂಟೆಗೆ ಕೆ.ಆರ್.ನಗರ ಪಟ್ಟಣಕ್ಕೆ ಆಗಮಿಸಲಿದ್ದಾರೆ.

ಪಟ್ಟಣದ ನಾಮಧಾರಿ ಸಮುದಾಯ ಭವನದಲ್ಲಿ ಅಖಿಲಭಾರತ ನಾಮಧಾರಿಗೌಡ ಸಮುದಾಯದಿಂದ ಹಮ್ಮಿಕೊಂಡಿರುವ 25 ನೇ ವರ್ಷದ ಬೆಳ್ಳಿ ಹಬ್ಬದ ವಾರ್ಷಿಕ ಸಮಾರಂಭದಲ್ಲಿ ಅವರು ಭಾಗವಹಿಸಲಿದ್ದಾರೆ.

ಇದಕ್ಕೂ ಮೊದಲು ಪಟ್ಟಣದ ತೋಪಮ್ಮ ದೇವಸ್ಥಾನದ ಬಳಿ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಮಾಜಿ ಸಚಿವ ಸಾ.ರಾ.ಮಹೇಶ್ ಅವರನ್ನು ಜೆಡಿಎಸ್ ಮತ್ತು ಬಿಜೆಪಿ ಪಕ್ಷದ ಕಾರ್ಯಕರ್ತರು, ಅಭಿಮಾನಿಗಳು ಅಭೂತ ಪೂರ್ವ ಸ್ವಾಗತ ಕೋರುವರು.

ಪಕ್ಷದ ಕಾರ್ಯಕರ್ತರು, ಮುಖಂಡರು, ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಕೋರಿದ್ದಾರೆ.

ಸರ್ಕಾರಿ ನೌಕರರಿಗೆ ಉಚಿತ ಆರೋಗ್ಯ ಶಿಬಿರ



ಸರ್ಕಾರಿ ನೌಕರರ ಆರೋಗ್ಯ ಶಿಬಿರವನ್ನು ಶಾಸಕ ದರ್ಶನ್ ಉದ್ಘಾಟಿಸಿದರು.

ನಂಜನಗೂಡು: ಯಾವುದೇ ವ್ಯಕ್ತಿಗೆ, ಆರೋಗ್ಯವು ಅತ್ಯಮೂಲ್ಯವಾದ ಸಂಪತ್ತು, ಆದ್ದರಿಂದ ಎಲ್ಲರೂ ಉತ್ತಮ ಜೀವನಶೈಲಿಯನ್ನು ಬದಲಿಸಿಕೊಳ್ಳುವ ಮೂಲಕ ಆರೋಗ್ಯಕರ ಸಮಾಜ ನಿರ್ಮಾಣ ಮಾಡಬಹುದಾಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ ಹೇಳಿದರು.

ನಗರದ ಆರ್.ಪಿ.ರಸ್ತೆಯಲ್ಲಿರುವ ಗುರು ಭವನದಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘ ಮತ್ತು ಅಪೋಲೋ ಆಸ್ಪತ್ರೆಯ ಸಹಯೋಗದಲ್ಲಿ ಏರ್ಪಡಿಸಲಾಗಿದ್ದ ಉಚಿತ ಆರೋಗ್ಯ ಶಿಬಿರ ಮತ್ತು ರಕ್ತದಾನ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ಇದೇ ಸಂದರ್ಭದಲ್ಲಿ ಮಾಜಿ ಶಾಸಕ ಕಳಲೆಕೇಶವಮೂರ್ತಿ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಡಾ.ದೀಪು, ಕಾರ್ಯದರ್ಶಿ ಮಹೇಶ್, ಖಜಾಂಚಿ ಅಂಕ ನಾಯಕ, ಸಹ ಕಾರ್ಯದರ್ಶಿ ರಂಗನಾಥ್, ಹನುಮಂತರಾಜು, ಗೌರವಾಧ್ಯಕ್ಷ ಧರ್ಮ ರತ್ನಾಕರ, ಉಪಾಧ್ಯಕ್ಷ ಹರೀಶ್, ನಾಗೇಶ್, ನಿರ್ದೇಶಕರಾದ ಕಲ್ಪನಾ, ಮಹಾಲಕ್ಷ್ಮಿ, ಗಿರೀಶ್, ಮುಖಂಡರಾದ ಸತೀಶ್ ದಳವಾಯಿ, ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ್ ಸೇರಿದಂತೆ ಹಲವಾರು ಪ್ರಮುಖರು ಉಪಸ್ಥಿತರಿದ್ದರು.

ಇಂದು ಎಂಸಿಡಿಸಿಸಿ ಅಧ್ಯಕ್ಷರಿಗೆ ಸನ್ಮಾನ



ಹುಣಸೂರು, ಜ.10– ಮೈಸೂರು–ಚಾ.ನಗರ ಜಿಲ್ಲಾ ಸಹಕಾರ (ಎಂಸಿಡಿಸಿಸಿ) ಬ್ಯಾಂಕ್‌ಗೆ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ದೊಡ್ಡಸ್ವಾಮಿಗೌಡರನ್ನು ಮಾಜಿ ಶಾಸಕ ಎಚ್.ಪಿ.ಮಂಜುನಾಥ್ ಅವರ ನೇತೃತ್ವದಲ್ಲಿ ಭಾನುವಾರ ಬೆಳಿಗ್ಗೆ 11 ಗಂಟೆಗೆ ತಾಲೂಕು ಕಾಂಗ್ರೆಸ್ ಕಚೇರಿ ಆವರಣದಲ್ಲಿ ಸನ್ಮಾನಿಸಲಾಗುವುದು.

ಕಾರ್ಯಕ್ರಮಕ್ಕೆ ಹುಣಸೂರು ತಾಲೂಕಿನ ಸಮಾಜದ ಸಮಸ್ತ ಬಂಧುಗಳು ಹಾಗೂ ಅಭಿಮಾನಿಗಳು ಮತ್ತು ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ತಾಲೂಕು ಕುರುಬರ ಅಭಿವೃದ್ಧಿ ಸಮಿತಿ, ಅಧ್ಯಕ್ಷ ಹಾಗೂ ಜಿ.ಪಂ.ಮಾಜಿ ಸದಸ್ಯರು ಹಾಗೂ ಕಾಂಗ್ರೆಸ್ ಮುಖಂಡರಾದ ಡಿ.ಕೆ.ಕುನ್ನೇಗೌಡ. ತಿಳಿಸಿದ್ದಾರೆ.

ಅಂಬೇಡ್ಕರ್ ಭವನದ ಜಾಗ ಅತಿಕ್ರಮಣ ತೆರವು



ಕೆ.ಆರ್.ನಗರ: ಪಟ್ಟಣದಲ್ಲಿ ನಿರ್ಮಾಣ ಮಾಡಲಾಗುತ್ತಿರುವ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಭವನಕ್ಕೆ ಸೇರಿದ ಖಾಲಿ ಜಾಗಕ್ಕೆ ವ್ಯಕ್ತಿಯೊಬ್ಬರು ಅತಿಕ್ರಮ ಪ್ರವೇಶ ಮಾಡಿ ತಂತಿ ಬೇಲಿ ಹಾಕಿದ್ದನ್ನು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ತೆರವುಗೊಳಿಸಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ.

ಪಟ್ಟಣದ ಮೈಸೂರು–ಹಾಸನ ಹೆದ್ದಾರಿ ಪಕ್ಕದಲ್ಲಿ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಭವನಕ್ಕೆ ಕಂಠೇನಹಳ್ಳಿ ಎಲ್ಲೆಯ ಸರ್ವೆ ನಂಬರ್ 50ರಲ್ಲಿ ಒಂದು ಎಕರೆ ನಿವೇಶನವನ್ನು ಸರ್ಕಾರ ಮಂಜೂರು ಮಾಡಿ ತಾಲೂಕು ಸಮಾಜ ಕಲ್ಯಾಣ ಇಲಾಖೆಯ ಹೆಸರಿಗೆ ಖಾತೆ ಬದಲಾವಣೆ ಕೂಡ ಮಾಡಲಾಗಿತ್ತು.

ಬಹು ಕೋಟಿ ವೆಚ್ಚದ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಭವನ ನಿರ್ಮಾಣ ಕಾಮಗಾರಿಗಾಗಿ ಪ್ರಾರಂಭವಾಗಿತ್ತು ಇತ್ತೀಚೆಗೆ ವ್ಯಕ್ತಿಯೊಬ್ಬರು ಅತಿಕ್ರಮ ಪ್ರವೇಶ ಮಾಡಿ ಅಂಬೇಡ್ಕರ್ ಭವನಕ್ಕೆ ಮಂಜೂರಾಗಿದ್ದ ನಿವೇಶನ ಹೊಂದಿಕೊಂಡಂತೆ 38X50 ಅಳತೆಯ ಜಾಗಕ್ಕೆ ತಂತಿ ಬೇಲಿ ಹಾಕಿಕೊಂಡಿದ್ದರು. ಇದನ್ನು ದಲಿತ ಸಮುದಾಯದ ಕೆಲ ಮುಖಂಡರು ಗಮನಿಸಿ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳಿಗೆ ದೂರವಾಣಿ ಮೂಲಕ ತಿಳಿಸಿ ತರಾಟೆ ತೆಗೆದುಕೊಂಡರು.

ದಿಡೀರ್ ಸ್ಥಳಕ್ಕೆ ಬಂದ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಪರಿಶೀಲಿಸಿ ತಂತಿ ಬೇಲಿಯನ್ನು ತೆರವುಗೊಳಿಸಿದರು. ಈ ಹಿನ್ನೆಲೆಯಲ್ಲಿ ಜಿ.ಪಂ.ಮಾಜಿ ಅಧ್ಯಕ್ಷ ಅಚ್ಯುತಾನಂದ ಅವರು ಅತಿಕ್ರಮಣ ಪ್ರವೇಶ ಮಾಡಿ ತಂತಿ ಬೇಲಿ ಹಾಕಿರುವ ಸುದ್ದಿ ತಿಳಿದು ಮುಂದೆ ಈ ರೀತಿ ಯಾರು ಅತಿಕ್ರಮಣ ಪ್ರವೇಶ ಮಾಡದಂತೆ ಮಂಜೂರಾತಿ ಆಗಿದ್ದ ಒಂದು ಎಕರೆ ಜಾಗಕ್ಕೆ ಕೂಡಲೇ ದಲಿತ ಸಮಾಜದ ಮುಖಂಡರ ಸಹಕಾರದೊಂದಿಗೆ ಕಾಂಪೌಂಡ್ ನಿರ್ಮಾಣ ಮಾಡಿಸಿದ್ದಾರೆ.

ಈ ಸಂಬಂಧಿಸಿದಂತೆ ಡಾ.ಬಿ.ಆರ್.ಅಂಬೇಡ್ಕರ್ ಭವನದ ಜಾಗಕ್ಕೆ ಅತಿಕ್ರಮಣ ಪ್ರವೇಶ ಮಾಡಿ ತಂತಿ ಬೇಲಿ ನಿರ್ಮಾಣ ಮಾಡಿದ್ದ ವ್ಯಕ್ತಿಯ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ದಲಿತ ಮುಖಂಡರು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳಿಗೆ ಮನವಿ ಮಾಡಿದ್ದಾರೆ.

ತಂದೆಯಂತೆ ಕ್ಷೇತ್ರವನ್ನು ಅಭಿವೃದ್ಧಿಪಡಿಸುವೆ



ಚಿಕ್ಕಮಾದು ಅಭಿಮಾನಿ ಬಳಗದ ನೂತನ ವರ್ಷದ ಕ್ಯಾಲೆಂಡರ್ ಅನ್ನು ಶಾಸಕ ಅನಿಲ್ ಚಿಕ್ಕಮಾದು ಬಿಡುಗಡೆ ಮಾಡಿದರು.

ಹೆಚ್.ಡಿ.ಕೋಟೆ: ತಮ್ಮ ತಂದೆ ಅವರಂತೆ ಕ್ಷೇತ್ರವನ್ನು ಅಭಿವೃದ್ಧಿಪಡಿಸಿ ಮಾದರಿ ಕ್ಷೇತ್ರವನ್ನಾಗಿ ಮಾಡುವೆ ಎಂದು ಶಾಸಕ ಅನಿಲ್ ಚಿಕ್ಕಮಾದು ಇಂದಿಲ್ಲಿ ಭರವಸೆ ನೀಡಿದ್ದಾರೆ.

ಪಟ್ಟಣದ ತಮ್ಮ ಗೃಹ ಕಚೇರಿಯಲ್ಲಿ ಚಿಕ್ಕಮಾದು ಅಭಿಮಾನಿ ಬಳಗದ ವತಿಯಿಂದ ಹೊರತಂದಿರುವ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಿ ಮಾತನಾಡಿದ ಅವರು. ನಮ್ಮ ತಂದೆ ಚಿಕ್ಕಮಾದು ಅವರು ಶ್ರಮಿಸುತ್ತಿದ್ದ ಹಾದಿಯಲ್ಲೇ ನಾನು ಕೂಡ ಸಕ್ರಿಯವಾಗಿ ಕೆಲಸ ನಿರ್ವಹಿಸಿ ಅವರ ಅನೇಕ ಯೋಜನೆಗಳನ್ನು ಜಾರಿಗೊಳಿಸಿ, ಸಾಕಷ್ಟು ಅನುದಾನಗಳನ್ನು ತಂದು ಕ್ಷೇತ್ರವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಕೆಲಸ ಮಾಡಿದರು. ಅವರು ಮಾಡಿದ ಕೆಲಸಗಳು ಇಂದಿಗೂ ಜನಸಾಮಾನ್ಯರ ಮನಸ್ಸಿನಲ್ಲಿ ಉಳಿದುಕೊಂಡಿವೆ. ಅವರ ಮಗನಾಗಿರುವ ನನಗೆ ಹೆಚ್.ಡಿ.ಕೋಟೆ ಕ್ಷೇತ್ರದ ಜನತೆ ಎರಡು ಬಾರಿ ಆಶೀರ್ವಾದ ಮಾಡಿ ಶಾಸಕನನ್ನಾಗಿ ಮಾಡಿದ್ದಾರೆ. ಜಿಲ್ಲೆಯವರೇ ಮುಖ್ಯಮಂತ್ರಿಗಳಾಗಿರುವುದರಿಂದ ಅನೇಕ ಯೋಜನೆಗಳನ್ನು ತಂದು ಕ್ಷೇತ್ರವನ್ನು ಮಾದರಿ ಕ್ಷೇತ್ರವಾಗಿಸುವ ನಿಟ್ಟಿನಲ್ಲಿ ಹಗಲಿರುಳು ಕೆಲಸ ನಿರ್ವಹಿಸುತ್ತಿದ್ದೇನೆ ಎಂದರು.

ಇದೇ ಸಂದರ್ಭದಲ್ಲಿ ಎಸ್.ಚಿಕ್ಕಮಾದು ಅಭಿಮಾನಿ ಬಳಗದ ತಾಲೂಕು ಅಧ್ಯಕ್ಷ ಜಿನ್ನಹಳ್ಳಿ ರಾಜನಾಯಕ, ಗೌರವಾಧ್ಯಕ್ಷ ಪುಟ್ಟಬಸವನಾಯಕ, ಪ್ರಧಾನ ಕಾರ್ಯದರ್ಶಿ ಸಿದ್ದನಾಯ್ಕ, ಉಪಾಧ್ಯಕ್ಷ ಸಿದ್ದನಾಯಕ, ರಾಜು ಕೋಟೆ, ದಾಸ ನಾಯಕ, ನಾಗರಾಜು, ಗೋವಿಂದ, ಸೋಮಣ್ಣ, ಕೃಷ್ಣ, ನಿಂಗನಾಯಕ, ಜವರನಾಯಕ, ರಾಜೇಂದ್ರ, ಬೆಟ್ಟನಾಯ್ಕ, ಮಹೇಶ ನಾಯ್ಕ, ಸಣ್ಣ ಮರಿ, ರವಿ, ಸುನಿಲ್, ಟಿ.ಎಲ್.ಸ್ವಾಮಿ, ವೀರನಾಯಕ, ಚಿಕ್ಕನಾಯಕ, ನಾಗರಾಜು, ಹರೀಶ, ಸ್ವಾಮಿ ಹಾಜರಿದ್ದರು.

ಮುತ್ತತ್ತಿಯಲ್ಲಿ ಅಂಬೇಡ್ಕರ್ ಭವನ ಉದ್ಘಾಟನೆ



ಅಂಬೇಡ್ಕರ್ ಭವನವನ್ನು ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಉದ್ಘಾಟಿಸಿದರು.

ತಿ.ನರಸೀಪುರ, ಜ.10– ಗ್ರಾಮ ಮಟ್ಟದಲ್ಲಿ ನಿರ್ಮಾಣಗೊಂಡಿರುವ ಡಾ.ಅಂಬೇಡ್ಕರ್ ಭವನವನ್ನು ಶಿಥಿಲಗೊಳ್ಳಲು ಬಿಡದೇ ಸುಸ್ಥಿತಿಯಲ್ಲಿಟ್ಟುಕೊಂಡು ಉಪಯುಕ್ತ ಕಾರ್ಯಕ್ರಮಗಳಿಗೆ ಬಳಸಿಕೊಳ್ಳುವಂತೆ ವಿಧಾನಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಸಲಹೆ ನೀಡಿದರು.

ತಾಲೂಕಿನ ಮುತ್ತತ್ತಿ ಗ್ರಾಮದಲ್ಲಿ ಶಾಸಕರ ಅನುದಾನದಲ್ಲಿ 20 ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಿಸಲಾಗಿರುವ ಡಾ.ಬಿ.ಆರ್. ಅಂಬೇಡ್ಕರ್ ಭವನ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಕ್ಷೇತ್ರದ ಶಾಸಕರೂ ಕೂಡ ಆಗಿದ್ದು ಅವರ ಅನುದಾನದಲ್ಲಿ ನಿರ್ಮಿಸಲಾಗಿರುವ ಭವನವನ್ನು ನನ್ನಿಂದ ಉದ್ಘಾಟನೆ ಮಾಡಿಸಿದ್ದೀರಾ, ಇದು ನನಗೆ ಸಂತಸ ತಂದಿದೆ. ಕ್ಷೇತ್ರದಲ್ಲಿ ನಮಗೆ ಯಾವಾಗಲೂ ಪ್ರೀತಿಯ ಸ್ವಾಗತ ದೊರಕುತ್ತದೆ. ನಿಮ್ಮೆಲ್ಲರ ಪ್ರೀತಿಗೆ ನಾನು ಋಣಿಯಾಗಿರುತ್ತೇನೆ. ಮುಂದೆಯೂ ಇದೆ ರೀತಿ ನಮ್ಮ ತಂದೆ ಹಾಗು ನನ್ನ ಮೇಲೆ ನಿಮ್ಮ ಆಶೀರ್ವಾದ ಇರಲಿ ಎಂದು ಕೋರಿದರು.

ಡಾ.ಅಂಬೇಡ್ಕರ್ ಭವನ ತುಂಬಾ ಅಚ್ಚುಕಟ್ಟಾಗಿ ನಿರ್ಮಾಣಗೊಂಡಿದೆ ಇಲ್ಲಿ ಯಾವಾಗಲೂ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಮೂಲಕ ಭವನವನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳುವುದು ಮುಖ್ಯ, ಭವನಕ್ಕೆ ಬೀಗ ಹಾಕಿ ಶಿಥಿಲಾವಸ್ಥೆಗೆ ತರಬೇಡಿ ಎಂದರು.

ಭವನವನ್ನು ಸಮಾಜಮುಖಿ ಚಟುವಟಿಕೆಗಳಿಗಷ್ಟೇ ಸೀಮಿತಗೊಳಿಸದೆ ಮದುವೆ, ನಿಶ್ಚಿತಾರ್ಥ, ನಾಮಕರಣ, ಸಭೆ–ಸಮಾರಂಭ, ಸಮಾವೇಶ, ಸಾಂಸ್ಕೃತಿಕ ಚಟುವಟಿಕೆಗಳೂ ಸೇರಿದಂತೆ ನಾನಾ ಕಾರ್ಯಕ್ರಮಗಳಿಗೆ ಭವನ ಸದ್ಬಳಕೆಯಾಗಲಿ. ಹಾಗೆಯೇ ಕೇವಲ ಒಂದು ಸಮುದಾಯಕ್ಕೆ ಮಾತ್ರವೇ ಭವನ ಮೀಸಲಾಗದಿರಲಿ ಎಂದರು.

ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಕೆಂಪಯ್ಯನಹುಂಡಿ ಮಹಾದೇವಣ್ಣ, ಎಪಿಎಂಸಿ ಮಾಜಿ ಅಧ್ಯಕ್ಷ ಎನ್.ಅನಿಲ್ ಕುಮಾರ್, ಜಿ.ಪಂ ಮಾಜಿ ಸದಸ್ಯ ಕೆ.ಮಹದೇವ್, ತಾಲೂಕು ಕುರುಬರ ಸಂಘದ ಅಧ್ಯಕ್ಷ ಮನ್ನೆ ಹುಂಡಿ ಮಹೇಶ್, ಮಾಜಿ ಅಧ್ಯಕ್ಷ ತುಂಬಲ ಪ್ರಶಾಂತ ಬಾಬು,ಪುರಸಭಾ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಪ್ರಕಾಶ್, ಕುಪ್ಯಾ ಗ್ರಾ.ಪಂ.ಮಾಜಿ ಅಧ್ಯಕ್ಷ ರಘು.ಎನ್. ಸೋಮು, ತಾ.ಪಂ. ಮಾಜಿ ಸದಸ್ಯ ಎಂ.ರಮೇಶ್, ದೊಡ್ಡೇಬಾಗಿಲು ಮಲ್ಲಿಕಾರ್ಜುನ, ತುಂಬಲ ಅಂದಾನಿ ಸ್ವಾಮಿ, ಕಿರಗಸೂರು ಗ್ರಾ.ಪಂ. ಮಾಜಿ ಉಪಾಧ್ಯಕ್ಷ ಆರ್.ಮಹದೇವ್, ಮಸ್ಗೂರು, ಗ್ರಾ.ಪಂ ಅಧ್ಯಕ್ಷ ರಾಮು ನಂಜಯ್ಯ, ಮಾಜಿ ಉಪಾಧ್ಯಕ್ಷ ಗುಂಡಾ, ಚಂದ್ರಶೇಖರ್, ಪದ್ಮ ನಿಂಗಪ್ಪ, ಶೇಖರ್, ಕಂಬಯ್ಯ ಆರ್.ಪಿ.ಹುಂಡಿ ನಾಗರಾಜು, ಗರ್ಗೇಶ್ವರಿ ಗೋಪಾಲ್ ರಾಜು, ಚಿಳ್ಳು ಮಹಾದೇವ್ ಕಾರ್ಮಿಕ ವಿಭಾಗದ ಅಧ್ಯಕ್ಷ ಬಣ್ಣ ಬಸವರಾಜು, ಸೇರಿದಂತೆ ಕಾರ್ಯಕರ್ತರು ಗ್ರಾಮಸ್ಥರು ಹಾಜರಿದ್ದರು.

ಬುಡಕಟ್ಟು ರೈತರಿಗೆ ತರಬೇತಿ: ಕೃಷಿ ಸಾಮಾಗ್ರಿಗಳ ವಿತರಣೆ



ಸರಗೂರು: ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ವಿವೇಕ ಗ್ರಾಮೀಣ ಜೀವನಾಧಾರ ಕೇಂದ್ರ, ಕೆಂಚನಹಳ್ಳಿಯಲ್ಲಿ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಬೀಜ ವಿಭಾಗದ ವತಿಯಿಂದ ಬುಡಕಟ್ಟು ಉಪ ಯೋಜನೆ ಅಡಿಯಲ್ಲಿ ಬುಡಕಟ್ಟು ರೈತರಿಗೆ ಕೃಷಿ ತರಬೇತಿ ನೀಡಲಾಯಿತು,

ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಾಮಾಜಿಕ ಆರ್ಥಿಕ ಸಬಲೀಕರಣ ಕಾರ್ಯಕ್ರಮಗಳ ನಿರ್ದೇಶಕ ಡಾ. ಡೆನ್ನಿಸ್ ಡಿ ಚೌಹಾನ್ ಮಾತನಾಡಿ ಸಂಸ್ಥೆ ವತಿಯಿಂದ ಪ್ರತೀ ವರ್ಷ ಬುಟಕಟ್ಟು ರೈತರಿಗೆ ಬಿತ್ತನೆ ಬೀಜಗಳನ್ನು ನೀಡಲಾಗುತ್ತಿದ್ದು 2025ನೇ ಸಾಲಿನಲ್ಲಿ ಒಟ್ಟು 817 ರೈತರಿಗೆ ಬಿತ್ತನೆ ಬೀಜಗಳನ್ನು ನೀಡಲಾಗಿದೆ. ಇಂದು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಮೂಲಕ ಬುಡಕಟ್ಟು ಉಪ ಯೋಜನೆಗಳ ಅಡಿಯಲ್ಲಿ ಬುಡಕಟ್ಟು ರೈತರಿಗೆ ಸಹಕಾರ ನೀಡಲಾಗುತ್ತಿದ್ದು 200 ಬುಡಕಟ್ಟು ರೈತರಿಗೆ ಕೃಷಿ ಉಪಕರಣಗಳನ್ನು ನೀಡುತ್ತಿರುವುದರಿಂದ ರೈತರು ಉತ್ತಮ ಇಳುವರಿ ಬರುವಂತಹ ಬೆಳೆಗಳನ್ನು ಬೆಳೆದು ಹೆಚ್ಚು ಗಳಿಕೆ ಮಾಡಲು ತುಂಬಾ ಅನುಕೂಲವಾದಂತಾಗಿದೆ ಎಂದರು.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಸಂಶೋಧನಾ ನಿರ್ದೇಶಕ ಡಾ. ಚಿಕ್ಕಲಿಂಗಯ್ಯ, ಹೆಚ್.ಡಿ.ಕೋಟೆ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಜಿ.ಆರ್.ಮಹೇಶ ಮಾತನಾಡಿದರು.

ತರಬೇತಿ ಪಡೆದ ರೈತರಿಗೆ ಕೃಷಿ ಸಾಮಗ್ರಿಗಳಾದ 25 ಕೆಜಿ ಕಡಲೆಕಾಳು, 10 ಕೆಜಿ ರಾಗಿ, 5 ಕೆಜಿ ಜೋಳ, ತರಕಾರಿ ಬೀಜಗಳ ಕಿಟ್, 1 ಟಾರ್ಪಾಲ್, 1 ಬಾಣಲಿ, 1 ಕುಡುಗೋಲು, 1 ಮಾಮಟಿ ವಿತರಿಸಲಾಯಿತು.

ಬೆಂಗಳೂರು ಕೃಷಿ ವಿವಿ ವಿಶೇಷ ಅಧಿಕಾರಿ ಡಾ.ವಿಶ್ವನಾಥ್ ಕೆ, ಡಾ.ಬಿ. ಬಸವರಾಜ್, ಡಾ. ನಾರಾಯಣ ರೆಡ್ಡಿ, ಪುಟ್ಟಮ್ಮ ಪಿ.ಡಿ.ನಾಯಕ್, ವ್ಯವಸ್ಥಾಪಕ ಚಿನ್ನಮಹದೇವ, ಶಂಕರ್ ಇದ್ದರು.

ಕೈವಲ್ಯ ದೇವಿ ದೇವಸ್ಥಾನದ ಪೂಜೆಗೆ ಅಡ್ಡಿ, ಜೀವ ಬೆದರಿಕೆ

ಲಕ್ಷ್ಮಿಕಾಂತಸ್ವಾಮಿ ದೇವಾಲಯದ ಪಾರುಪತ್ತೆದಾರ ಜಯರಾಮ್ ಆರೋಪ

ನಂಜನಗೂಡು: ತಾಲೂಕಿನ ಕಳಲೆ ಗ್ರಾಮದ ಕೈವಲ್ಯದೇವಿ ದೇವಸ್ಥಾನ ಮುಜರಾಯಿ ಇಲಾಖೆ ವ್ಯಾಪ್ತಿಗೆ ಸೇರಿದ್ದು, ಕೆಲವು ಖಾಸಗಿ ವ್ಯಕ್ತಿಗಳು ಟ್ರಸ್ಟ್ ರಚಿಸಿಕೊಂಡು ಕೈವಲ್ಯ ದೇವಿ ದೇವಸ್ಥಾನದಲ್ಲಿ ಪೂಜೆ ನಡೆಸಲು ಅಡ್ಡಿಪಡಿಸಿ, ಪ್ರಾಣ ಬೆದರಿಕೆ ಒಡ್ಡುತ್ತಿದ್ದಾರೆ ಎಂದು ಕಳಲೆ ಲಕ್ಷ್ಮಿಕಾಂತ ಸ್ವಾಮಿ ದೇವಾಲಯದ ಪಾರುಪತ್ತೆದಾರ ಜಯರಾಮ್ ಆರೋಪಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ನಡೆಸಿ ಮಾತನಾಡಿದ ಅವರು ಕಳೆದ 20 ವರ್ಷಗಳಿಂದ ಕಳಲೆ ಲಕ್ಷ್ಮಿಕಾಂತಸ್ವಾಮಿ, ಕೈವಲ್ಯ ದೇವಿ ದೇವಾಲಯ ಸೇರಿದಂತೆ 7 ದೇವಾಲಯಗಳಲ್ಲಿ ಮುಜರಾಯಿ ಇಲಾಖೆಯ ಆದೇಶದಂತೆ ಪಾರುಪತ್ತೆದಾರನಾಗಿ ಸೇವೆ ಸಲ್ಲಿಸುತ್ತಿದ್ದೇನೆ. ಕೆಲವು ಪಟ್ಟಭದ್ರರು ಪಾರುಪತ್ತೆದಾರರನ್ನು ಕಡೆಗಣಿಸಿ ಮುಜರಾಯಿ ಇಲಾಖೆಗೆ ಸೇರಿದ ಕೈವಲ್ಯ ದೇವಿ ದೇವಸ್ಥಾನದ ಹೆಸರಿನಲ್ಲಿ ಟ್ರಸ್ಟ್ ರಚಿಸಿಕೊಂಡು ದೇವಾಲಯದ ಹುಂಡಿ ಹಾಗೂ ಭಕ್ತರಿಂದ ಹಣ ವಸೂಲಿ ಮಾಡಿಕೊಂಡು ದುರ್ಬಳಕೆ ಮಾಡಿಕೊಂಡಿದ್ದಾರೆ, ನನಗೆ ಕೈವಲ್ಯ ದೇವಿ ದೇವಸ್ಥಾನದಲ್ಲಿ ಪೂಜೆ, ಸೇವೆ ನಡೆಸಲು ಅಡ್ಡಿಪಡಿಸುತ್ತಿದ್ದಾರೆ, ದೂರವಾಣಿ ಕರೆ ಮಾಡಿ ಪ್ರಾಣ ಬೆದರಿಕೆ ಒಡ್ಡುತ್ತಿದ್ದಾರೆ ಎಂದರು

ಈ ಬಗ್ಗೆ ಖಾಸಗಿ ವ್ಯಕ್ತಿಗಳ ವಿರುದ್ಧ ಜಿಲ್ಲಾಧಿಕಾರಿಗಳಿಗೆ ಹಲವು ಬಾರಿ ದೂರು ನೀಡಿದ್ದರೂ ಪ್ರಯೋಜನವಾಗಿಲ್ಲ. ಜೊತೆಗೆ ನನ್ನ ಬಗ್ಗೆ ಗ್ರಾಮದಲ್ಲಿ ಅಪಪ್ರಚಾರವನ್ನು ಮಾಡಿ ನನ್ನ ಬಗ್ಗೆ ಗ್ರಾಮಸ್ಥರಲ್ಲಿ ಕೆಟ್ಟ ಅಭಿಪ್ರಾಯ ಮೂಡಿಸುತ್ತಾ ಗ್ರಾಮಸ್ಥರನ್ನು ಎತ್ತಿ ಕಟ್ಟುತ್ತಿದ್ದಾರೆ ಎಂದು ದೂರಿದರು.

ಶೈಕ್ಷಣಿಕ ಚಟುವಟಿಕೆ ಶಿಕ್ಷಕರ ಕೌಶಲ್ಯತೆಯನ್ನು ಆಧರಿಸಿರುತ್ತದೆ



ಸಿಆರ್‌ಪಿ ಸುದರ್ಶನ್ ಅವರನ್ನು ಬಿಇಓ ರವಿಪ್ರಸನ್ನ ಅವರು ಸನ್ಮಾನಿಸಿದರು.

ಕಂಪಲಾಪುರ: ಯಾವುದೇ ಶಾಲೆಗಳಲ್ಲಿ ಅಲ್ಲಿನ ಶೈಕ್ಷಣಿಕ ಚಟುವಟಿಕೆಗಳು ಆಯಾ ಶಿಕ್ಷಕರ ಕೌಶಲ್ಯತೆ ಆಧಾರದ ಮೇಲೆ ನಿರೂಪಗೊಳ್ಳುತ್ತದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ರವಿಪ್ರಸನ್ನ ಕಿವಿಮಾತು ಹೇಳಿದರು.


ಇಲ್ಲಿನ ಶ್ರೀನಾಗ ಅನುದಾನಿತ ಪ್ರಾಥಮಿಕ ಶಾಲೆಯಲ್ಲಿ ಎಫ್‌ಎಲ್‌ಎನ್ ಕಲಿಕಾ ಹಬ್ಬ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ಈಗಿನ ಕಾಲಮಾನಕ್ಕೆ ತಕ್ಕಂತೆ ಶಿಕ್ಷಕರು ತಮ್ಮ ಬೋಧನಾಶೈಲಿಯನ್ನು ಬದಲಾವಣೆ ಮಾಡಿಕೊಳ್ಳಬೇಕು, ಶಾಲೆಗಳಲ್ಲಿ ಯಾವುದೇ ಕಾರ್ಯಕ್ರಮ ಮಾಡಬೇಕಾದರೂ ಶಿಕ್ಷಕರಿಗೆ ತಮ್ಮದೇ ಆದ ಜವಾಬ್ದಾರಿ ಇರುತ್ತೆ ಆ ಮೂಲಕ ಮಕ್ಕಳ ಶೈಕ್ಷಣಿಕ ಪ್ರಗತಿ ಜೊತೆಗೆ ಶಾಲೆಯು ಉತ್ತಮವಾಗಿರುತ್ತದೆ ಎಂದರು.

ಮೈಸೂರು ಡಯೆಟ್‌ನ ಉಪನ್ಯಾಸಕಿ ನಳಿನಾಕ್ಷಿ ಮಾತನಾಡಿ, ಕಲಿಕಾ ಹಬ್ಬದ ಮುಖ್ಯ ಉದ್ದೇಶ ಅಕ್ಷರ ಜ್ಞಾನ, ಸ್ಪಷ್ಟವಾಗಿ ಓದುವುದು ಶುದ್ಧವಾಗಿ ಬರೆಯುವುದು ಆಗಿದೆ. ಗುಣಮಟ್ಟದ ಶಿಕ್ಷಣವನ್ನು ನೀಡುವಲ್ಲಿ ಶಿಕ್ಷಕರ ಪಾತ್ರ ಮಹತ್ತರವಾಗಿದ್ದರು ಅದಕ್ಕೆ ಪೋಷಕರ ಸಹಕಾರ ಬಹಳ ಮುಖ್ಯ ಎಂದರು. ಕೊನೆಯಲ್ಲಿ ಲಾವಣಿ ಪದ ಹಾಡುವ ಮೂಲಕ ಎಲ್ಲರನ್ನೂ ರಂಜಿಸಿದರು. ಕಾರ್ಯಕ್ರಮದಲ್ಲಿ ವರ್ಗಾವಣೆಗೊಂಡ ಶಿಕ್ಷಕರನ್ನು ಸನ್ಮಾನಿಸಲಾಯಿತು.

ಕ್ಲಸ್ಟರ್‌ನ ಸಿಆರ್‌ಪಿ ಸುದರ್ಶನ್, ಮುಖ್ಯ ಶಿಕ್ಷಕರಾದ ಚಂದ್ರಶೇಖರ್, ಕೃಷ್ಣಕುಮಾರ್, ರವಿ, ಸುರೇಂದ್ರ, ನಾಗೇಂದ್ರ, ದಯಾನಂದ, ಮಹದೇವ್, ರಿಯಾಜ್, ಶಿಕ್ಷಕರ ಸಂಘದ ಸದಸ್ಯರಾದ ಪ್ರಸನ್ನ, ಖಜಾಂಚಿ ನಿಲುಫರ್, ಶಿವಕುಮಾರ್ ಸೇರಿದಂತೆ ಎಲ್ಲಾ ಶಾಲೆಗಳ ಶಿಕ್ಷಕರು, ಮಕ್ಕಳು, ಪೋಷಕರು ಹಾಜರಿದ್ದರು.

ಬೋವಿ ಸಮುದಾಯದ ಯುವ ಜನರಿಗೆ ಕೌಶಲ್ಯ ತರಬೇತಿ

ಈ ಉದ್ದೇಶಕ್ಕೆ ಪ್ರತಿ ಜಿಲ್ಲೆಯಲ್ಲಿ ಬೋವಿ ನಿಗಮದ ಕಚೇರಿ ಸ್ಥಾಪನೆ: ನಿಗಮದ ಅಧ್ಯಕ್ಷ ರಾಮಪ್ಪ ಘೋಷಣೆ



ಹುಣಸೂರು ತಾಲೂಕು ವಿನೋಬಾ ಕಾಲೋನಿಯಲ್ಲಿ ನಡೆದ ಸಮಾರಂಭದಲ್ಲಿ ರಾಜ್ಯ ಬೋವಿ ನಿಗಮದ ಅಧ್ಯಕ್ಷ ಎಂ.ರಾಮಪ್ಪರನ್ನು ಗ್ರಾಮಸ್ಥರು ಅಭಿನಂದಿಸಿದರು. ಈ ವೇಳೆ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

ಹುಣಸೂರು ಜ.10(ಕೆಕೆ)– ಪ್ರತಿ ಜಿಲ್ಲೆಯಲ್ಲೂ ಬೋವಿ ಅಭಿವೃದ್ಧಿ ನಿಗಮದ ಶಾಶ್ವತ ಕಚೇರಿಗಳನ್ನು ಸ್ಥಾಪಿಸಿ, ಸಮುದಾಯದ ಯುವಜನರಿಗೆ ಅಗತ್ಯ ಕೌಶಲ್ಯ ತರಬೇತಿ ನೀಡಲಾಗುವುದು ಎಂದು ರಾಜ್ಯ ಬೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ರಾಮಪ್ಪ ತಿಳಿಸಿದರು.

ತಾಲೂಕಿನ ವಿನೋಬಾ ಕಾಲೋನಿಯಲ್ಲಿ ತಾಲೂಕು ಬೋವಿ ಸಮಾಜದ ವತಿಯಿಂದ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಈಗಾಗಲೇ ಏಳು ಜಿಲ್ಲೆಗಳಲ್ಲಿ ಪ್ರವಾಸ ಮಾಡಿದ್ದು, ಮುಂದೆ ಎಲ್ಲಾ ಜಿಲ್ಲೆಗಳಿಗೂ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದ ನಂತರ ಸೂಕ್ತ ಕಾರ್ಯಕ್ರಮ ರೂಪಿಸುವುದಾಗಿ ಹೇಳಿದರು.

ಬೆಂಗಳೂರಿನ ಜ್ಞಾನಭಾರತಿಯಲ್ಲಿ ಜ.17 ಮತ್ತು 18ರಂದು 300ಕ್ಕೂ ಹೆಚ್ಚು ಯುವಜನರಿಗೆ ವಿವಿಧ ಕೌಶಲ್ಯ ತರಬೇತಿ ನೀಡಲಾಗುತ್ತಿದ್ದು, ಆಸಕ್ತರು ಹೆಸರು ನೊಂದಾಯಿಸಿಕೊಳ್ಳಬಹುದು. ಇದೇ ಮಾದರಿ ತರಬೇತಿ ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ವಿಸ್ತರಿಸುವ ಚಿಂತನೆ ಇದೆ ಎಂದು ತಿಳಿಸಿದರು.

ನಿಗಮದ ವತಿಯಿಂದ ಭೂರಹಿತ ಮಹಿಳೆಯರಿಗೆ ಭೂ ಒಡೆತನ ಕಲ್ಪಿಸುವುದು, ಗಂಗಾ ಕಲ್ಯಾಣ ಯೋಜನೆಗೆ ಆದ್ಯತೆ, ಕುಲಕಸುಬು ಉತ್ತೇಜನಕ್ಕೆ ಅಗತ್ಯವಾದ ಯಂತ್ರೋಪಕರಣಗಳು, ಟ್ರ್ಯಾಕ್ಟರ್, ಗೂಡ್ಸ್ ವ್ಯಾನ್ ಖರೀದಿಗೆ ನೆರವು, ಹೈನುಗಾರಿಕೆಗೆ ಪ್ರೋತ್ಸಾಹ, ಮಹಿಳಾ ಸ್ವಸಹಾಯ ಸಂಘಕ್ಕೆ ಐದು ಲಕ್ಷ ರೂ. ಸಾಲಸೌಲಭ್ಯ, ಶಿಕ್ಷಣಕ್ಕೆ ಪ್ರೋತ್ಸಾಹ, ಇಂತಹ ಹಲವು ಯೋಜನೆಗಳಿವೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಭೋವಿ ಅಭಿವೃದ್ಧಿ ನಿಗಮ ಸ್ಥಾಪಿಸುವ ಮೂಲಕ ಸಮುದಾಯಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ. ಸಮಾಜಕ್ಕೆ ನೆರವಾದವರ ಬೆಂಬಲಕ್ಕೆ ನಿಲ್ಲುವುದು ನಮ್ಮ ಧರ್ಮ. ಅಂಬೇಡ್ಕರ್ ಅವರ ಆಶಯದಂತೆ ಶಿಕ್ಷಣ, ಸಂಘಟನೆ, ಹೋರಾಟಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಸಮುದಾಯ ಜಾಗೃತವಾಗಬೇಕು. ಸಮುದಾಯದ ಪರವಾಗಿರುವ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅವರನ್ನು ಸದಾ ಬೆಂಬಲಿಸಬೇಕು. ಮೈಸೂರಿನ ಕಲಾಮಂದಿರದಲ್ಲಿ ಜ.28ಕ್ಕೆ ಆಯೋಜಿಸಿರುವ ಸಿದ್ದರಾಮೋತ್ಸವ ಸಮಾವೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದರು.

ಸಮುದಾಯ ಭವನಗಳಿಗೆ 35 ಲಕ್ಷ: ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿ, ದೇವರಾಜ ಅರಸರ ಕನಸಿನ ವಿನೋಬಾ ಕಾಲೋನಿಯನ್ನು ನನ್ನೂರು ಎಂದು ಭಾವಿಸಿ ಗ್ರಾಮಸ್ಥರ ಬೇಡಿಕೆಯಂತೆ ಎಲ್ಲ ಸೌಲಭ್ಯಗಳನ್ನು ಕಲ್ಪಿಸಿ ಕೊಟ್ಟಿದ್ದೇನೆ. ಸರ್ಕಾರದಿಂದ ಇಲ್ಲಿನ ಸಮುದಾಯ ಭವನಕ್ಕೆ 15 ಲಕ್ಷ, ಹೊನ್ನಿಕುಪ್ಪೆ, ಮೂಕನಹಳ್ಳಿ ಸಮುದಾಯ ಭವನಕ್ಕೆ ತಲಾ 10 ಲಕ್ಷ ಸೇರಿದಂತೆ ಒಟ್ಟು 35 ಲಕ್ಷ ರೂ. ಅನುದಾನವನ್ನು ಮುಖ್ಯ ಮಂತ್ರಿ, ಜಿಲ್ಲಾ ಮಂತ್ರಿಗಳು ಬಿಡುಗಡೆ ಮಾಡಿದ್ದಾರೆ ಎಂದು ತಿಳಿಸಿದರು.

ಕಳೆದ ಅವಧಿಯಲ್ಲಿ ಸಣ್ಣ ನೀರಾವರಿ ಸಚಿವರಾಗಿದ್ದ ಶಿವರಾಜ್ ತಂಗಡಗಿಯವರ ಸಹಕಾರದಿಂದ ತಾಲೂಕಿಗೆ ಏಳು ಏತ ನೀರಾವರಿ ಯೋಜನೆ ತಂದು, ಆ ಮೂಲಕ ಕೆರೆಗಳಿಗೆ ನೀರು ತುಂಬಿಸಲಾಗುತ್ತಿದೆ. ಇದನ್ನು ನಾನು ಸದಾ ಸ್ಮರಿಸುತ್ತೇನೆ ಎಂದರು.

ಬೋವಿ ನಿಗಮದ ಮಾಜಿ ಅಧ್ಯಕ್ಷ ಸೀತಾರಾಮು, ಗ್ರಾಪಂ ಮಾಜಿ ಅಧ್ಯಕ್ಷ ರಾಮಯ್ಯ, ತಾಪಂ ಮಾಜಿ ಸದಸ್ಯ ಚಿನ್ನವೀರಯ್ಯ, ಮುಖಂಡರಾದ ಕುನ್ನೇಗೌಡ, ಕುಪ್ಪುಸ್ವಾಮಿ, ಗಣೇಶ್, ಸುಧಾಕರ್ ಮಾತನಾಡಿದರು. ತಾಲೂಕು ಅಧ್ಯಕ್ಷ ರವಿ ಪ್ರಸನ್ನ, ಪ್ರೇಮಕುಮಾರ್, ಬಾಲಸುಂದರ್, ವಿಜಯ್‌ಕುಮಾರ್, ಪಿ.ಈರಯ್ಯ, ಉಮಾಶಂಕರ್, ಅಜ್ಗರ್ ಪಾಷಾ, ಟಿ.ಕೃಷ್ಣ, ಶಿವಲಿಂಗಪ್ಪ, ನಾಗರಾಜ್, ಮಹದೇವ, ತಿಮ್ಮರಸ, ದೇವರಾಜ್, ತಿಮ್ಮರಾಜು, ರಾಮಣ್ಣ, ವೆಂಕಟೇಶ್, ಶೇಖರ್ ಮತ್ತಿತರರು ಉಪಸ್ಥಿತರಿದ್ದರು.

ದಲಿತರಿಗೆ ಮುಖ್ಯಮಂತ್ರಿ ಸ್ಥಾನ ಹಸ್ತಾಂತರಿಸದಿದ್ದರೆ ಭಾರೀ ಹೋರಾಟ

ಸಿಎಂ ಸಿದ್ದರಾಮಯ್ಯಗೆ ಉರಿಲಿಂಗಿಪೆದ್ದಿ ಮಠದ ಶ್ರೀ ಜ್ಞಾನ ಪ್ರಕಾಶ ಸ್ವಾಮೀಜಿ ಎಚ್ಚರಿಕೆ

- ಬೇಡಿಕೆ ಈಡೇರದಿದ್ದರೆ 'ದಲಿತರ ನಡೆ, ಸಿಎಂ ಕುರ್ಚಿ ಕಡೆ' ಹೋರಾಟ
- ಫೆಬ್ರವರಿಯಲ್ಲಿ ಬೆಂಗಳೂರಿನಲ್ಲಿ ದಸಂಸ ಸಮಾವೇಶ
- ಸಿಎಂ ಸ್ಥಾನ ಮಾತ್ರ ನಿಮಗೆ ಬೇಕು, ವೋಟ್ ಹಾಕಲು ನಾವು ಬೇಕೇ
- ದಲಿತರಿಂದಾಗಿಯೇ ಸಿದ್ದರಾಮಯ್ಯ ಎರಡೂ ಬಾರಿ ಸಿಎಂ ಆದ್ರು!



ಮೈಸೂರಿನ ಜೆಎಲ್ ಬಿ ರಸ್ತೆಯ ರೋಟರಿ ಸಭಾಂಗಣದಲ್ಲಿ ಶನಿವಾರ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಸಂಸ್ಥಾಪಕ ರಾಜ್ಯ ಸಂಚಾಲಕ ದಿವಂಗತ ಲಕ್ಷ್ಮಿ ನಾರಾಯಣ ನಾಗವಾರ ಅವರ ಪ್ರಥಮ ವರ್ಷದ ಸ್ಮರಣೆ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಗುರಿ ಮುಟ್ಟದ ದಲಿತ ರಾಜಕಾರಣ ಮತ್ತು ಮುಂದಿನ ನಡೆ' ಕುರಿತ ವಿಚಾರ ಸಂಕಿರಣದಲ್ಲಿ ಮೈಸೂರಿನ ಗಾಂಧಿನಗರದ ಉರಿಲಿಂಗಿಪೆದ್ದಿ ಮಠದ ಶ್ರೀ ಜ್ಞಾನ ಪ್ರಕಾಶ ಸ್ವಾಮೀಜಿ ಮಾತನಾಡಿದರು.

ಮೈಸೂರು, ಜ.10(ಬಿಎಲ್‌ಯು)– ಅಧಿಕಾರ ಹಸ್ತಾಂತರದ ಸಮಯದಲ್ಲಿ ಸ್ವತಃ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ ಸ್ಥಾನವನ್ನ ದಲಿತ ನಾಯಕರಿಗೆ ಬಿಟ್ಟುಕೊಡಬೇಕು. ಇಲ್ಲದಿದ್ದರೆ ಬೃಹತ್ ಹೋರಾಟ ರೂಪಿಸುತ್ತೇವೆ ಎಂದು ಮೈಸೂರಿನ ಗಾಂಧಿನಗರದ ಉರಿಲಿಂಗಿಪೆದ್ದಿ ಮಠದ ಶ್ರೀ ಜ್ಞಾನ ಪ್ರಕಾಶ ಸ್ವಾಮೀಜಿ ಎಚ್ಚರಿಸಿದ್ದಾರೆ.

ಮೈಸೂರಿನ ಜೆಎಲ್ ಬಿ ರಸ್ತೆಯ ರೋಟರಿ ಸಭಾಂಗಣದಲ್ಲಿ ಇಂದು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಸಂಸ್ಥಾಪಕ ರಾಜ್ಯ ಸಂಚಾಲಕ ದಿವಂಗತ ಲಕ್ಷ್ಮಿ ನಾರಾಯಣ ನಾಗವಾರ ಅವರ ಪ್ರಥಮ ವರ್ಷದ ಸ್ಮರಣೆ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಗುರಿ ಮುಟ್ಟದ ದಲಿತ ರಾಜಕಾರಣ ಮತ್ತು ಮುಂದಿನ ನಡೆ' ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಈಗಾಗಲೇ ದೇವರಾಜ ಅರಸ್ ಅವರ ದಾಖಲೆ ಸರಿಗಟ್ಟಿ ಸುದೀರ್ಘ ಮುಖ್ಯಮಂತ್ರಿ ಎನಿಸಿಕೊಂಡಿರುವ ಸಿದ್ದರಾಮಯ್ಯ ಅವರಿಂದ ಈ ತೀರ್ಮಾನವನ್ನು ನಾವು ನಿರೀಕ್ಷಿಸಿದ್ದೇವೆ ಹೇಳಿದರು.

ಇಲ್ಲಿವರೆಗೂ ಸಿದ್ದರಾಮಯ್ಯ ಅವರ ಬೆನ್ನಿಗೆ ದಲಿತರು ನಿಂತಿದ್ದಾರೆ. ಈ ಕಾರಣದಿಂದಲೇ ಅವರು ಎರಡು ಬಾರಿ ಮುಖ್ಯಮಂತ್ರಿ ಆಗಲು ಸಾಧ್ಯವಾಯಿತು. ಈ ಮೂಲಕ ಕರ್ನಾಟಕದ ಮುಖ್ಯಮಂತ್ರಿಗಳಲ್ಲಿ ದಾಖಲೆಯನ್ನು ಕೂಡ ನಿರ್ಮಾಣ ಮಾಡಿದ್ದಾಯಿತು. ಈಗಲಾದರೂ ಸ್ವತಃ ಸಿದ್ದರಾಮಯ್ಯ ಅವರೇ ಸಿಎಂ ಸ್ಥಾನವನ್ನು ದಲಿತರಿಗೆ ಬಿಟ್ಟುಕೊಡಬೇಕು ಎಂದು ಸ್ವಾಮೀಜಿ ಒತ್ತಾಯಿಸಿದರು.

ಸಿದ್ದರಾಮಯ್ಯ ಅವರು ದಲಿತರಿಗೆ ಸಿಎಂ ಸ್ಥಾನ ಬಿಟ್ಟುಕೊಟ್ಟರೆ ದೇವರಾಜ ಅರಸ್ ಅವರಿಗಿಂತಲೂ ಎತ್ತರ ಸ್ಥಾನದಲ್ಲಿ ನಾವು ಅವರನ್ನು ಕಾಣುತ್ತೇವೆ. ಒಂದು ವೇಳೆ ಬಿಟ್ಟು ಕೊಡದಿದ್ದರೆ 'ದಲಿತರ ಮುಂದಿನ ನಡೆ, ಸಿಎಂ ಕುರ್ಚಿ ಕಡೆಗೆ" ಬೃಹತ್ ಹೋರಾಟ ರೂಪಿಸುತ್ತೇವೆ ಎಂದು ಎಚ್ಚರಿಸಿದರು.

ಈ ಸಂಬಂಧ ರಾಜಧಾನಿ ಬೆಂಗಳೂರಿನಲ್ಲಿ ಫೆಬ್ರವರಿ ವೇಳೆ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಮಾವೇಶ ನಡೆಯಲಿದ್ದು, ಅಲ್ಲಿ ಹೋರಾಟದ ರೂಪು ರೇಷೆ ಸಿದ್ದಪಡಿಸುತ್ತೇವೆ ಎಂದು ತಿಳಿಸಿದರು.

ಅಹಿಂದ ಹೆಸರಿನಲ್ಲಿ ಸಿದ್ದರಾಮಯ್ಯ ರಾಜಕಾರಣ ಮಾಡಿದ್ದಾರೆ. ಆದರೆ ಈ ತನಕ ದಲಿತರಿಗೆ ಮುಖ್ಯಮಂತ್ರಿ ಸ್ಥಾನ ನೀಡಿಲ್ಲ, ಮತ ಹಾಕಲು ನಾವು ಬೇಕು, ಮುಖ್ಯ ಮಂತ್ರಿ ಸ್ಥಾನ ಮಾತ್ರ ಇವರಿಗೆ ಬೇಕೇ ಎಂದು ಸ್ವಾಮೀಜಿ ಆಕ್ರೋಶ ಭರಿತರಾಗಿ ಪ್ರಶ್ನಿಸಿದರು.

ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಘಟನಾ ಸಂಚಾಲಕ ದೇವಗಳ್ಳಿ ಸೋಮಶೇಖರ್, ಕರ್ನಾಟಕ ರಾಜ್ಯ ದಲಿತ ಮಹಿಳಾ ಒಕ್ಕೂಟದ ಸಂಚಾಲಕಿ ಜಾನಕಮ್ಮ ಲಕ್ಷ್ಮಿ ನಾರಾಯಣ ನಾಗವಾರ, ರಾಜ್ಯ ಕಾರ್ಯಕಾರಿ ಸಮಿತಿ ಸಂಚಾಲಕ ಜೀವನಹಳ್ಳಿ ವೆಂಕಟೇಶ್, ಜಿಲ್ಲಾ ಸಂಚಾಲಕ ಭುಗತಗಳ್ಳಿ ಕೆ.ಮಣಿಯಯ್ಯ, ವಿಭಾಗೀಯ ಸಂಚಾಲಕ ರಾಜಶೇಖರ ಕೋಟೆ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಿಎಂ ಸ್ಥಾನ ಬೇಡಬೇಡಿ, ಹಕ್ಕು ಮಂಡಿಸಿ

ಮುಖ್ಯಮಂತ್ರಿ ಸ್ಥಾನ ನೀಡುವಂತೆ ದಲಿತರು ಬೇಡಿಕೊಳ್ಳುವುದನ್ನು ಇನ್ನು ಮುಂದಾದರೂ ಬಿಡಬೇಕು. ಸಿಎಂ ಸ್ಥಾನ ನಮ್ಮ ಹಕ್ಕು ಎಂದು ಸಿದ್ದರಾಮಯ್ಯ ಅವರಂತೆ ಮಂಡಿಸಬೇಕು ಎಂದು ಸಿ.ಹರಕುಮಾರ್ ಸಲಹೆ ನೀಡಿದರು.

'ಅಹಿಂದ ರಾಜಕಾರಣದಲ್ಲಿ ದಲಿತ ರಾಜಕೀಯದ ಅಸ್ತಿತ್ವ ಮತ್ತು ಪರಿಣಾಮಗಳು' ಕುರಿತ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ನನಗೆ ಮುಖ್ಯಮಂತ್ರಿ ಸ್ಥಾನ ಬೇಕು ಎಂದು ಸಿದ್ದರಾಮಯ್ಯ ಹಕ್ಕು ಪ್ರತಿಪಾದಿಸುತ್ತಾರೆ. ಅವಕಾಶ ನೀಡದಿದ್ದರೆ ಪಕ್ಷ ತ್ಯಜಿಸುವ ಬೆದರಿಕೆ ಹಾಕುತ್ತಾರೆ. ಇಂತಹ ಚಾಣಾಕ್ಷ ನಡೆಯಿಂದ ಅವರಿಗೆ ಎರಡು ಬಾರಿ ಸಿಎಂ ಆಗಲು ಸಾಧ್ಯವಾಯಿತು.

ಸತೀಶ್ ಜಾರಕಿಹೊಳಿ ಅವರು 2028ರ ವಿಧಾನಸಭಾ ಚುನಾವಣೆ ವೇಳೆ ಮುಖ್ಯಮಂತ್ರಿ ಸ್ಥಾನದ ಹಕ್ಕು ಮಂಡಿಸುತ್ತೇನೆ ಎಂದು ಈಗಾಗಲೇ ಘೋಷಣೆ ಮಾಡಿದ್ದಾರೆ. ಆದರೆ ನಮ್ಮ ಪರಿಶಿಷ್ಟ ಜಾತಿಯವರು ಹಾಗೆ ಹಕ್ಕು ಮಂಡಿಸುತ್ತಿಲ್ಲ. ಹೀಗಾದರೆ ಸಿಎಂ ಸ್ಥಾನ ದೊರೆಯಲ್ಲ, ಹಿನ್ನಡೆ ಅನುಭವಿಸಬೇಕಾಗುತ್ತದೆ ಎಂದು ಹರಕುಮಾರ್ ಎಚ್ಚರಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	**(ದೂ: 2521923)**
ಪರಾಶಕ್ತಿ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	**(ದೂ: 2422871)**
45 ಫೇಸ್ ದಿ ಇಯರ್ (ಕ)	3 ಪ್ರದರ್ಶನಗಳು
ಬಾಲಾಜಿ	**(ದೂ: 2497199)**
ತೇರಾ ಇಸ್ಕ್ ಮೈನ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	**(ಮೊ:9900820093)**
45 ಫೇಸ್ ದಿ ಇಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಾಜಾ ಸಾಬ್ (ಕ)	2 ಪ್ರದರ್ಶನಗಳು
ರಾಜಕಮಲ್	
ಧುರಂದರ್ (ಹಿ)	4 ಪ್ರದರ್ಶನಗಳು
ಸಂಗಂ	
ಮಾರ್ಕ್ (ಕ)	4 ಪ್ರದರ್ಶನಗಳು
ಲಿಡೋ	
ಡೆವಿಲ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ರಾಜಾ ಸಾಬ್ (ಹಿಂ)	4 ಪ್ರದರ್ಶನಗಳು

ಗರುಡ ಉತ್ಸವಕ್ಕೆ ಆಹ್ವಾನ



ಮೈಸೂರಿನ ಪಂಚ ಗರುಡ ಉತ್ಸವ ಸೇವಾ ಸಮಿತಿ ವತಿಯಿಂದ ನಗರದ ಜಯಲಕ್ಷ್ಮಿಪುರಂನ ಮಹಾಜನ ವಿದ್ಯಾಸಂಸ್ಥೆ ಕ್ರೀಡಾಂಗಣದಲ್ಲಿ ಜ.18ರಂದು ಹಮ್ಮಿಕೊಂಡಿರುವ ಪಂಚ ಗರುಡ ಉತ್ಸವಕ್ಕೆ ಖ್ಯಾತ ಸಂಗೀತ ನಿರ್ದೇಶಕರಾದ ಇಳಯರಾಜ ಅವರನ್ನು ಬೆಂಗಳೂರಿನಲ್ಲಿ ಸಮಿತಿಯ ಗೌರವಾಧ್ಯಕ್ಷರು ಹಾಗೂ ಶಾಸಕ ಟಿ.ಎಸ್.ಶ್ರೀವತ್ಸ ಆಹ್ವಾನಿಸಿದರು. ಈ ವೇಳೆ ಸಮಿತಿಯ ಕೆ.ಆರ್.ಯೋಗ ನರಸಿಂಹ, ಶಾಂತಾರಾಮ್, ಕಶ್ಯಪ್, ಶ್ರೀರಾಮ್, ಶ್ರೀಮುರುಳಿ ಮತ್ತಿತರರಿದ್ದರು.

ಸಾತಗಳ್ಳಿಯ ವ್ಯಸನ ಮುಕ್ತ ಕೇಂದ್ರದಲ್ಲಿ ಅಗ್ನಿ ಅವಘಡ

- ಬೆಂಕಿ ನಂದಿಸಿದ ಅಗ್ನಿಶಾಮಕ ಸಿಬ್ಬಂದಿ
- ಅದೃಷ್ಟವಶಾತ್ ತಪ್ಪಿದ ಸಾವು–ನೋವು



ಮೈಸೂರಿನ ಸಾತಗಳ್ಳಿ ಮೊದಲನೇ ಹಂತದಲ್ಲಿ ಅಗ್ನಿ ಸಂಭವಿಸಿದ್ದ ಕಟ್ಟಡದಲ್ಲಿ ಬೆಂಕಿ ನಂದಿಸುವ ಕಾರ್ಯಾಚರಣೆ ನಡೆಸುತ್ತಿರುವ ಅಗ್ನಿಶಾಮಕ ಸಿಬ್ಬಂದಿ.

ಮೈಸೂರು,ಜ.10(ಪಿಎಂ)– ಮದ್ಯ ಹಾಗೂ ವ್ಯಸನ ಮುಕ್ತ ಕೇಂದ್ರವೊಂದರಲ್ಲಿ ಅಗ್ನಿ ಅವಘಡ ಸಂಭವಿಸಿ, ಕೇಂದ್ರದಲ್ಲಿನ ಕೆಲ ಸಾಮಾಗ್ರಿಗಳು ಬೆಂಕಿಗಾಹುತಿಯಾಗಿರುವ ಘಟನೆ ಶನಿವಾರ ಸಂಜೆ ಸಾತಗಳ್ಳಿಯಲ್ಲಿ ನಡೆದಿದೆ.

ಸಾತಗಳ್ಳಿ ಮೊದಲನೇ ಹಂತದ ರಾಜಕುಮಾರ್ ರಸ್ತೆಯಲ್ಲಿರುವ ಬೆಸ್ಟ್ ಲೈಫ್ ಫೌಂಡೇಷನ್ ಕೇಂದ್ರದಲ್ಲಿ ಈ ಬೆಂಕಿ ಅನಾಹುತ ನಡೆದಿದ್ದು, ಅದೃಷ್ಟವಶಾತ್ ಯಾವುದೇ ಸಾವು–ನೋವು ಸಂಭವಿಸಿಲ್ಲ. ಅಗ್ನಿಶಾಮಕ ಸಿಬ್ಬಂದಿ ಗಂಟೆಗೂ ಹೆಚ್ಚು ಕಾಲ ಕಾರ್ಯಾಚರಣೆ ನಡೆಸಿ, ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು.

ಯಾವ ಕಾರಣಕ್ಕೆ ಅಗ್ನಿ ಸಂಭವಿಸಿದೆ ಎಂಬುದು ತಿಳಿದುಬಂದಿಲ್ಲ. ಆದರೆ ಕೇಂದ್ರದಲ್ಲಿದ್ದ ಶಿಬಿರಾರ್ಥಿಗಳು ಬೆಂಕಿ ಹಚ್ಚಿ ಪರಾರಿಯಾಗಿರುವ ಅನುಮಾನವನ್ನು ಕೆಲವು ಸ್ಥಳೀಯರು ವ್ಯಕ್ತಪಡಿಸಿದ್ದಾರೆ. ನೆಲ ಮಹಡಿಯಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆ ಇದ್ದು, ಇದರ ಮೇಲೆ ಇರುವ ಕೇಂದ್ರದಲ್ಲಿ ಈ ಬೆಂಕಿ ಅನಾಹುತ ಸಂಭವಿಸಿದೆ.

ಶಾರ್ಟ್ ಸರ್ಕ್ಯೂಟ್ ಸಂಬಂಧ ಯಾವುದೇ ಕುರುಹು ಕಂಡು ಬಂದಿಲ್ಲ. ಆ ರೀತಿಯಾಗಿದ್ದಲ್ಲಿ ಇಡೀ ಬಿಲ್ಡಿಂಗ್ ವಿದ್ಯುತ್ ಕಡಿತವಾಗಬೇಕಿತ್ತು. ಆದರೆ ಅಗ್ನಿ ಅವಘಡ ಉಂಟಾಗಿದ್ದ ಕೇಂದ್ರದಲ್ಲಿ ಮಾತ್ರವೇ ವಿದ್ಯುತ್ ಕಡಿತವಾಗಿತ್ತು. ಸೆಸ್ಕ್‌ನವರು ಬಂದು ಮುನ್ನಚ್ಚರಿಕಾ ಕ್ರಮವಾಗಿ ಇಡೀ ಬಿಲ್ಡಿಂಗ್ ವಿದ್ಯುತ್ ಕಡಿತ ಮಾಡಿದರು. ಬೆಂಕಿ ನಂದಿಸುವ ವೇಳೆ ಕೇಂದ್ರದಲ್ಲಿ ಯಾರು ಇರಲಿಲ್ಲ. ಬೆಂಕಿಯಿಂದ ಫ್ಯಾನ್, ವಿದ್ಯುತ್ ಕೇಬಲ್, ಅಲ್ಮೇರಾ, ಕಡತಗಳು, ಬಟ್ಟೆ, ಟೇಬಲ್ ಹಾಗೂ ಕೆಲ ಹಾಸಿಗೆಗಳಿಗೆ ಹಾನಿಯಾಗಿದೆ ಎಂದು ಅಗ್ನಿಶಾಮಕ ಮೂಲಗಳು ತಿಳಿಸಿವೆ.

ಅಗ್ನಿ ಅವಘಡ ಯಾವ ರೀತಿ ಯಾಗಿದೆ ಎಂಬ ಬಗ್ಗೆ ಗೊತ್ತಾಗಿಲ್ಲ. ವಿಚಾರಣೆ ಮಾಡುತ್ತಿದ್ದೇವೆ. ಸಣ್ಣ ಪ್ರಮಾಣದ ಬೆಂಕಿ ಅನಾಹುತವಾಗಿದೆ. ಯಾರಿಗೂ ಅಪಾಯವಾಗಿಲ್ಲ. ಶಿಬಿರಾರ್ಥಿಗಳೇ ಬೆಂಕಿ ಹಚ್ಚಿದ್ದಾರೆ ಎಂಬುದು ಖಚಿತವಾಗಿಲ್ಲ. ಹಾಗಾಗಿ ಆ ರೀತಿ ಹೇಳಲು ಬರುವುದಿಲ್ಲ ಎಂದು ಉದಯಗಿರಿ ಪೊಲೀಸರು ತಿಳಿಸಿದರು.

ಅಗ್ನಿಶಾಮಕದ ಡಿಎಫ್‌ಓ ರಮೇಶ್, ಎಎಸ್‌ಎಸ್‌ಓ ನಿಂಗರಾಜು, ಪ್ರಮುಖ ಅಗ್ನಿಶಾಮಕ ರಾಜೇಶ್, ಚಾಲಕ ರಾಮಚಂದ್ರಬಸಪ್ಪ ಗುಡುಮಿ, ಸಿಬ್ಬಂದಿಯಾದ ನಂದನ್‌ಕುಮಾರ್, ಸುರೇಶ್, ಮೋಹನ್‌ಕುಮಾರ್ ಬೆಂಕಿ ನಂದಿಸುವ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಮತ್ಸ್ಯ ಸಂಜೀವಿನಿ ಕಾರ್ಯಕ್ರಮಕ್ಕೆ ಚಾಲನೆ



12 ಸಾವಿರ ಮೀನು ಮರಿಗಳನ್ನು ಕೆರೆಗೆ ಬಿಡುವ ಮೂಲಕ 'ಮತ್ಸ್ಯ ಸಂಜೀವಿನಿ' ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು

ಮೈಸೂರು, ಜ.10– ಮೈಸೂರು ತಾಲೂಕು ನಾಗವಾಲ ಗ್ರಾಮದ ಕೆರೆ ಬಳಿ ಶುಕ್ರವಾರ 'ಮತ್ಸ್ಯ ಸಂಜೀವಿನಿ' ಕಾರ್ಯಕ್ರಮ ನಡೆಯಿತು.

ಮೈಸೂರು ತಾಲೂಕು ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸಿ.ಕೃಷ್ಣ, 12 ಸಾವಿರ ಮೀನು ಮರಿಗಳನ್ನು ಕೆರೆಗೆ ಬಿಡುವ ಮೂಲಕ 'ಮತ್ಸ್ಯ ಸಂಜೀವಿನಿ' ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಗ್ರಾಪಂ ವ್ಯಾಪ್ತಿಯ ಕೆರೆಗಳನ್ನು ಸಂಜೀವಿನಿ ಒಕ್ಕೂಟದಲ್ಲಿನ ಸ್ವ ಸಹಾಯ ಸಂಘಗಳ ಮಹಿಳೆಯರಿಗೆ ಹಸ್ತಾಂತರಿಸಿದರು. ಇದೇ ವೇಳೆ ಅವರು, ಎನ್‌ಆರ್‌ಎಲ್‌ಎಂ ಒಕ್ಕೂಟ, ಚೈತನ್ಯ ಸ್ತ್ರೀ ಶಕ್ತಿ, ಎಸ್‌ಹೆಚ್‌ಜಿ ಮಹಿಳೆಯರಿಗೆ ಮೀನುಗಾರಿಕೆಯಿಂದ ಆಗುವ ಲಾಭ ಹಾಗೂ ಇದಕ್ಕಾಗಿ ಸರ್ಕಾರದಿಂದ ಲಭ್ಯವಿರುವ ಸೌಲಭ್ಯಗಳ ಬಗ್ಗೆ ತಿಳಿಸಿದರು.

ಈ ವೇಳೆ ನಾಗವಾಲ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಕಾಮಾಕ್ಷಮ್ಮ, ಎನ್‌ಆರ್‌ಎಲ್‌ಎಂ ಒಕ್ಕೂಟದ ಅಧ್ಯಕ್ಷೆ ಜಯಮ್ಮ, ಜಿಲ್ಲಾ ಮೀನುಗಾರಿಕೆ ಇಲಾಖೆ ಉಪ ನಿರ್ದೇಶಕ ಬಸವರಾಜು, ಜಿಲ್ಲಾ ಪಂಚಾಯ್ತಿ ಎನ್‌ಆರ್‌ಎಲ್‌ಎಂ ವಿಭಾಗದ ಜಿಲ್ಲಾ ವ್ಯವಸ್ಥಾಪಕ ಖಾದರ್, ತಾಲೂಕು ಮೀನುಗಾರಿಕಾ ಇಲಾಖೆ ಸಹಾಯಕ ನಿರ್ದೇಶಕರಾದ ಭವಾನಿ, ತಾಲೂಕು ಕಾರ್ಯಕ್ರಮ ವ್ಯವಸ್ಥಾಪಕ ಬಿ.ಆರ್.ನಾಗರಾಜು, ಯುವ ವೃತ್ತಿಪರರಾದ ಸಂಜಯ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮಾಯಪ್ಪ ಕಾರ್ಯದರ್ಶಿ ಯಶವಂತ್, ಗ್ರಾಮ ಪಂಚಾಯಿತಿ ಸದಸ್ಯರಾದ ಯಶೋದಮ್ಮ, ನಂದಿನಿ, ಸ್ವಸಹಾಯ ಗುಂಪಿನ ಸದಸ್ಯರಾದ ನಾಗಮಣಿ, ಪುಷ್ಪಲತಾ, ಮಹದೇವಮ್ಮ, ಮಂಜುಳಾ, ಶಿವಮ್ಮ, ಪುಷ್ಪ, ಸ್ಪಂದನ, ಕೃಷಿ ಸಖಿ ಜ್ಯೋತಿ, ಪಶು ಸಖಿ ಶೋಭಾ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಸಿಂಗರಮಾರನಹಳ್ಳಿಗೆ ಅಮೆರಿಕಾ ವಿದ್ಯಾರ್ಥಿ ತಂಡ ಭೇಟಿ; ಹಳ್ಳಿ ಜೀವನ, ಸಾಮಾಜಿಕ ವ್ಯವಸ್ಥೆ ಅಧ್ಯಯನ



ಸಾಮಾಜಿಕ ನ್ಯಾಯ ವೇದಿಕೆಯ ದಲಿತ ಸಮುದಾಯ ಸಂಬಂಧಿತ ಕಾರ್ಯ ಚಟುವಟಿಕೆಗಳ ಬಗ್ಗೆ ವಿದೇಶಿ ವಿದ್ಯಾರ್ಥಿಗಳು ಅಧ್ಯಯನಕ್ಕೆ ಆಗಮಿಸಿದ್ದರು.

ಮೈಸೂರು, ಜ.10– ಸಾಮಾಜಿಕ ನ್ಯಾಯ ವೇದಿಕೆಯು ದಲಿತ ಸಮುದಾಯಗಳ ನಡುವೆ ಮಾಡುವ ಕಾರ್ಯ ಚಟುವಟಿಕೆಗಳನ್ನು ಅಧ್ಯಯನ ಮಾಡಲು ಅಮೆರಿಕದಿಂದ ನಾರ್ತ್ ಕೆರೊಲಿನ ವೆಲ್ಲಿಂಗ್ಟನ್ ಯುನಿವರ್ಸಿಟಿಯ ಸಮಾಜ ಕಾರ್ಯ ಅಧ್ಯಯನ ವಿದ್ಯಾರ್ಥಿಗಳು ಮೈಸೂರಿನ ಸಿಂಗರಮಾರನಹಳ್ಳಿಗೆ ಭೇಟಿ ನೀಡಿದ್ದರು.

ಈ ವೇಳೆ ಸಾಮಾಜಿಕ ನ್ಯಾಯ ವೇದಿಕೆಯ ವತಿಯಿಂದ ಜೀವನೋಪಾಯಕ್ಕಾಗಿ ವಿವಿಧ ಕೌಶಲ್ಯ ತರಬೇತಿಗಳನ್ನು ಪಡೆದ ಮಹಿಳೆಯರೊಂದಿಗೆ ಸಂವಾದ ನಡೆಸಿದರು. ಹಳ್ಳಿಯ ಜೀವನ, ಇಲ್ಲಿನ ಸಾಮಾಜಿಕ ವ್ಯವಸ್ಥೆ, ಕುಟುಂಬ ನಿರ್ವಹಣೆಯಲ್ಲಿ ಮಹಿಳೆಯರ ಕೊಡುಗೆ ಸೇರಿದಂತೆ ಹಲವು ಮಹತ್ವದ ವಿಚಾರಗಳನ್ನು ತಿಳಿದುಕೊಂಡರು.

ಈ ಸಂದರ್ಭದಲ್ಲಿ ಸಾಮಾಜಿಕ ನ್ಯಾಯ ವೇದಿಕೆಯ ಕಾರ್ಯದರ್ಶಿಗಳಾದ ಎಂ.ಎಸ್.ಪರಮಾನಂದ, ಬೆಂಗಳೂರಿನ ಸೇಂಟ್ ಜೋಸೆಫ್ ವಿಶ್ವವಿದ್ಯಾಲಯ ಸಮಾಜ ಕಾರ್ಯ ವಿಭಾಗದ ಡಾ.ಡಿ.ಪ್ರೇಮ ಜ್ಯೋತಿ, ಡಾ.ರೂನಕ್ ಫಾದರ್ ಸೈಮನ್, ಅಮೆರಿಕದ ಉತ್ತರ ಕೆರೊಲಿನಾ ವೆಲ್ಲಿಂಗ್ಟನ್ ವಿಶ್ವವಿದ್ಯಾಲಯದ ಪ್ರೊ.ಆರ್ಥರ್ ಫ್ರಾಂಕೆಲ್ ಹಾಗೂ ವಿದ್ಯಾರ್ಥಿಗಳು, ಮುಖಂಡರಾದ ಗಿರೀಶ್, ಸುನೀಲ್, ಗ್ರಾಮ ಪಂಚಾಯ್ತಿ ಅಧ್ಯಕ್ಷ ದೇವರಾಜು, ಕಾರ್ಯದರ್ಶಿ ಶ್ರೀಮತಿ ತಾರ, ನೌಕರರಾದ ಮನು, ವಸಂತ, ರಾಣಿ, ಶಿಲಮ್ಮ, ಜಯಮ್ಮ ಮತ್ತಿತರರು ಉಪಸ್ಥಿತರಿದ್ದರು.

ಕನ್ನಡ ಸಾಹಿತಿ, ಪ್ರಕಾಶಕಿ ಆಶಾ ರಘು ನಿಧನ



ಬೆಂಗಳೂರು, ಜ.10– ಕನ್ನಡ ಪ್ರಸಿದ್ಧ ಲೇಖಕಿ, ಕಾದಂಬರಿಕಾರ್ತಿ, ಪ್ರಕಾಶಕಿ ಹಾಗೂ ಕಲಾವಿದೆ ಆಶಾ ರಘು ನಿಧನರಾಗಿದ್ದಾರೆ. ಅವರಿಗೆ 47 ವರ್ಷ ವಯಸ್ಸಾಗಿತ್ತು, ಅವರು ಬೆಂಗಳೂರಿನ ಮಲ್ಲೇಶ್ವರದಲ್ಲಿರುವ ತಮ್ಮ ನಿವಾಸದಲ್ಲಿ ನೇಣುಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಇವರ ಪತಿ, ಖ್ಯಾತ ಆಹಾರ ತಜ್ಞ ಹಾಗೂ ಲೇಖಕ ಕೆಸಿ ರಘು ಎರಡು ವರ್ಷಗಳ ಹಿಂದೆ ನಿಧನರಾಗಿದ್ದರು. ಆಶಾ ಅವರಿಗೆ ಪುತ್ರಿ ಇದ್ದಾರೆ. ಪತಿ ನಿಧನದ ನಂತರ ಮಾನಸಿಕವಾಗಿ ಬಹಳ ನೊಂದಿದ್ದರು. ನಿನ್ನೆ ರಾತ್ರಿ ಅವರು ಮನೆಯ ಕೊಠಡಿಯಲ್ಲಿ ಆತ್ಮಹತ್ಯೆಗೆ ಯತ್ನಿಸಿದ್ದರು. ಮನೆಯವರಿಗೆ ಗೊತ್ತಾಗಿ ಬಾಗಿಲು ಒಡೆದು ರಕ್ಷಿಸುವಷ್ಟರಲ್ಲಿ ಅವರ ಪ್ರಾಣಪಕ್ಷಿ ಹಾರಿ ಹೋಗಿತ್ತು ಎಂದು ತಿಳಿದುಬಂದಿದೆ. ಮರಣೋತ್ತರ ಪರೀಕ್ಷೆ ಬಳಿಕ ಇಂದು ಸಂಜೆ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬ ಮೂಲಗಳು ತಿಳಿಸಿವೆ.

10 ದಿನಗಳ ಹಿಂದೆ ಅಗಲಿದ ಪತಿಯ ಬಗ್ಗೆ ಪೋಸ್ಟ್: ಆಶಾ ಅವರ ಪತಿ ರಘು ಅವರು ಎರಡು ವರ್ಷಗಳ ಹಿಂದೆ ನಿಧನರಾಗಿದ್ದರು. ರಘು ಅವರು ಕರ್ನಾಟಕದ ಖ್ಯಾತ ಆಹಾರ ತಜ್ಞರಾಗಿದ್ದರು. ಅವರಿಗೆ ಶ್ವಾಸಕೋಶದ ಕ್ಯಾನ್ಸರ್ ಉಂಟಾಗಿತ್ತು. ರಘು ಕನಸಿನಲ್ಲಿ ಬಂದರು ಎಂದು ಅವರು ಪೋಸ್ಟ್ ಹಾಕಿದ್ದರು.

ಆಶಾ ರಘು ಅವರು ಕನ್ನಡದ ಪ್ರಮುಖ ಕಾದಂಬರಿಗಾರ್ತಿಯರಲ್ಲಿ ಒಬ್ಬರು. ಕೇಶವ ಅಯ್ಯಂಗಾರ್ ಹಾಗೂ ಸುಲೋಚನ ದಂಪತಿಯ ಹಿರಿಯ ಮಗಳಾಗಿ 1979ರ ಜೂನ್ 18ರಂದು ಬೆಂಗಳೂರಿನಲ್ಲಿ ಹುಟ್ಟಿದರು. ಬೆಂಗಳೂರು ವಿಶ್ವವಿದ್ಯಾಲಯದಿಂದ ಕನ್ನಡ ಸ್ನಾತಕೋತ್ತರ ಪದವಿ ಪಡೆದು, ಉಪನ್ಯಾಸಕರಾಗಿ ಕೆಲಕಾಲ ಕಾರ್ಯ ನಿರ್ವಹಿಸಿದರು. ರಂಗಭೂಮಿ, ಕಿರುತೆರೆ, ಬೆಳ್ಳಿತೆರೆಗಳಲ್ಲಿಯೂ ಕಲಾವಿದೆಯಾಗಿ, ಸಂಭಾಷಣೆಕಾರರಾಗಿ, ಸಹಾಯಕ ನಿರ್ದೇಶಕರಾಗಿ ಕೂಡ ಕಾರ್ಯ ನಿರ್ವಹಿಸಿದ್ದಾರೆ. ಇತ್ತೀಚೆಗೆ ಉಪಾಸನಾ ಎಂಬ ಪ್ರಕಾಶನವನ್ನೂ ಆರಂಭಿಸಿ ಯುವ ಲೇಖಕ/ಲೇಖಕಿಯರ ಪುಸ್ತಕಗಳನ್ನು ಪ್ರಕಟಿಸಿದ್ದರು.

ಕೃತಿಗಳು: ಆವರ್ತ, ಗತ, 'ಮಾಯೆ', 'ಚಿತ್ತರಂಗ', ಕೆಂಪು ದಾಸವಾಳ, ವಕ್ಷಸ್ಥಲ ಕಾದಂಬರಿಗಳನ್ನು, 'ಆರನೇ ಬೆರಳು', 'ಬೊಗಸೆಯಲ್ಲಿ ಕಥೆಗಳು', 'ಅಪರೂಪದ ಪುರಾಣ ಕಥೆಗಳು' ಮೊದಲಾದ ಕಥಾಸಂಕಲನಗಳನ್ನೂ, 'ಚೂಡಾಮಣಿ', 'ಕ್ಷಮಾದಾನ', 'ಬಂಗಾರದ ಪಂಜರ ಮತ್ತು ಇತರ ಮಕ್ಕಳ ನಾಟಕಗಳು' 'ಪೂತನಿ ಮತ್ತಿತರ ನಾಟಕಗಳು', ಮೊದಲಾದ ನಾಟಕ ಕೃತಿಗಳನ್ನು ರಚಿಸಿದ್ದಾರೆ. ಇವರ 'ಆವರ್ತ' ಕಾದಂಬರಿಯ ಕುರಿತ ಕೃತಿ 'ಆವರ್ತ–ಮಂಥನ' ಕೂಡಾ ಪ್ರಕಟಗೊಂಡಿದೆ.

ಕೃಷಿ ಜೊತೆಗೆ ಉದ್ದಿಮೆ ಸ್ಥಾಪಿಸಿ ಉದ್ಯೋಗ ಸೃಷ್ಟಿಸಿ: ಜಿಟಿಡಿ



ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ಹಾಗೂ ಪ್ರಗತಿ ಬಂಧು ಸ್ವಸಹಾಯ ಸಂಘಗಳ ಒಕ್ಕೂಟದ ಸಹಯೋಗದಲ್ಲಿ ಆಯೋಜಿಸಿದ್ದ ಸಾಮೂಹಿಕ ಸತ್ಯನಾರಾಯಣ ಪೂಜೆಗೂ ಮುನ್ನ ಗಣ್ಯರು ಜ್ಯೋತಿ ಬೆಳಗಿಸಿದರು.

ಮೈಸೂರು, ಜ.10– ಕೃಷಿಗೆ ಉತ್ತೇಜನ ನೀಡುವುದರೊಂದಿಗೆ ಗುಡಿ ಕೈಗಾರಿಕೆ ಇನ್ನಿತರ ಉದ್ದಿಮೆ ಸ್ಥಾಪನೆ ಮೂಲಕ ಉದ್ಯೋಗ ಸೃಷ್ಟಿಸಬೇಕಿದೆ ಎಂದು ಚಾಮುಂಡೇಶ್ವರಿ ಶಾಸಕ ಜಿ.ಟಿ.ದೇವೇಗೌಡರು ಆಶಿಸಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್, ಸರಸ್ವತಿಪುರಂ ವಲಯದ ಪ್ರಗತಿ ಬಂಧು ಸ್ವಸಹಾಯ ಸಂಘಗಳ ಒಕ್ಕೂಟದ ಸಹಯೋಗದಲ್ಲಿ ಆಯೋಜಿಸಿದ್ದ ಸಾಮೂಹಿಕ ಸತ್ಯನಾರಾಯಣ ಪೂಜೆ ಹಾಗೂ ಸಭಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಾಲ್ಕೈದು ದಶಕಗಳ ಹಿಂದೆ ಪಡುವಾರಹಳ್ಳಿ, ಒಂಟಿಕೊಪ್ಪಲು, ಕುಂಬಾರಕೊಪ್ಪಲು, ಮಂಚೇಗೌಡನಕೊಪ್ಪಲಿನವರು ಸಾಕಷ್ಟು ಜಮೀನು ಹೊಂದಿದ್ದರು. ಆದರೆ ಕಾಲಕ್ರಮೇಣ ಅವರ ಮಕ್ಕಳು, ಮೊಮ್ಮಕ್ಕಳಿಗೆ ಒಂದು ನಿವೇಶನವೂ ಇಲ್ಲದಂತೆ ಜಮೀನು ಮಾರಾಟ ಮಾಡಿಕೊಂಡಿದ್ದಾರೆ. ಪ್ರಸ್ತುತ ಕೃಷಿ ಭೂಮಿ ಕಡಿಮೆಯಾಗಿದೆ. ಹಾಗಾಗಿ ಗುಡಿಕೈಗಾರಿಕೆಗಳು, ಸಣ್ಣ ಉದ್ದಿಮೆಗಳನ್ನು ಸ್ಥಾಪಿಸಿ ಉದ್ಯೋಗ ಕಲ್ಪಿಸುವ ಅಗತ್ಯವಿದೆ. ಮಹಿಳೆಯರು ತಯಾರಿಸಿದ ಅನೇಕ ವಸ್ತುಗಳಿಗೆ ಮಾರುಕಟ್ಟೆಯಲ್ಲಿ ಬೇಡಿಕೆ ಇದ್ದು, ಈ ನಿಟ್ಟಿನಲ್ಲಿ ಹೆಚ್ಚು ಗಮನಹರಿಸಬೇಕಿದೆ ಎಂದರು.

ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ ಅವರು ಮಹಿಳೆಯರನ್ನು ಸಂಘಟಿಸುವ ಮೂಲಕ ಅವರನ್ನು ಆರ್ಥಿಕವಾಗಿ ಶಕ್ತಿಯುತರನ್ನಾಗಿಸುವಲ್ಲಿ ನೆರವಾಗಿದ್ದಾರೆ. ಈ ನಿಟ್ಟಿನಲ್ಲಿ ಸ್ವಯಂಸೇವೆಗಳ ಮೂಲಕ ಸಾಲಸೌಲಭ್ಯ ಕಲ್ಪಿಸಿಕೊಟ್ಟಿದ್ದಾರೆ. ಧಾರ್ಮಿಕ ಸೇವೆ, ಆರ್ಥಿಕ ಪ್ರೋತ್ಸಾಹ ಕಾರ್ಯಕ್ರಮಗಳ ಜೊತೆಗೆ ಕೆರೆಕಟ್ಟೆ ಅಭಿವೃದ್ಧಿ, ಶಾಲೆಗಳಿಗೆ ಪೀಠೋಪಕರಣ, ಮಕ್ಕಳಿಗೆ ವಿದ್ಯಾನಿಧಿ ಸೇರಿದಂತೆ ಹಲವು ಮಹತ್ವದ ಯೋಜನೆಗಳನ್ನು ನಡೆಸಿಕೊಂಡು ಬಂದಿದ್ದಾರೆ ಎಂದು ಬಣ್ಣಿಸಿದರು.

ಬಿಇ, ಎಂಕಾಂ, ಎಂಬಿಎ, ಇಂಜಿನಿಯರಿಂಗ್, ಎಂಬಿಬಿಎಸ್ ಮಾಡಿದರೂ ಸರಿಯಾದ ಉದ್ಯೋಗ ಸಿಗುತ್ತಿಲ್ಲ. ಈ ಪರಿಸ್ಥಿತಿಯಲ್ಲಿ ಸ್ವಂತ ಉದ್ಯೋಗ ಆರಂಭಿಸಲು ಯುವಜನತೆಗೆ ಪ್ರೋತ್ಸಾಹಿಸಬೇಕು. ಉದ್ಯೋಗ, ಆದಾಯ ಇಲ್ಲವಾದರೆ ವಿದ್ಯಾವಂತರು ದಾರಿತಪ್ಪುವ ಸಾಧ್ಯತೆ ಇರುತ್ತದೆ. ಈ ನಿಟ್ಟಿನಲ್ಲೂ ಧರ್ಮಸ್ಥಳ ಸಂಸ್ಥೆ ಜಾಗೃತಿ ಮೂಡಿಸಿದರೆ ಅನುಕೂಲವಾಗುತ್ತದೆ ಎಂದರು.

ಉಳಿತಾಯದ ಮಹತ್ವ ಅರಿಯದೆ ದುಂದುವೆಚ್ಚ ಮಾಡುವವರು ಹೆಚ್ಚಾಗುತ್ತಿದ್ದಾರೆ. ಆದರೆ ಮಹಿಳೆಯರು ಸ್ವಯಂಸಂಘಗಳ ಮೂಲಕ ಸಂಘಟನಾತ್ಮಕ ಆರ್ಥಿಕ ಸುಧಾರಣೆಗೆ ಮಹತ್ವದ ಕೊಡುಗೆ ನೀಡುತ್ತಿದ್ದಾರೆ. ಇಂದು ಸತ್ಯನಾರಾಯಣಸ್ವಾಮಿ ಪೂಜೆಯನ್ನು ಅತ್ಯಂತ ಶ್ರದ್ಧಾಭಕ್ತಿಯಿಂದ ನೆರವೇರಿಸಿ, ದೇವರ ಕೃಪೆಗೆ ಪಾತ್ರರಾಗಿದ್ದಾರೆ. ಇಂತಹ ಧಾರ್ಮಿಕ ಕಾರ್ಯಕ್ರಮಗಳು ಒಳ್ಳೆಯ ಕೆಲಸಕ್ಕೆ ಪ್ರೇರಣೆ ನೀಡುತ್ತವೆ ಎಂದು ಅಭಿಪ್ರಾಯಿಸಿದರು.

ಶ್ರೀ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು. ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ ಗೌಡ ಅವರ ಪತ್ನಿ ಶ್ರೀಮತಿ ಗೌರಿ, ನಗರಪಾಲಿಕೆ ಮಾಜಿ ಸದಸ್ಯೆ ಶ್ರೀಮತಿ ಭಾಗ್ಯ ಮಹದೇಶ್, ವಿಜಯಕುಮಾರ್ ನಾಗನಾಳ, ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಮರಿಸ್ವಾಮಿ, ಪ್ರಗತಿಬಂಧು ಸ್ವಸಹಾಯ ಸಂಘದ ಪದಾಧಿಕಾರಿಗಳಾದ ಶೀಲಾ ಸತ್ಯನಾರಾಯಣ್, ಶಶಿರೇಖಾ, ಯಶೋಧಾ, ಲೀಲಾವತಿ, ಶೋಭಾ, ಶೀಲಾ, ಲತಾದೇವಿ, ಗೌರಿ, ಧನಲಕ್ಷ್ಮೀ, ಸುನಂದ, ಸುಶೀಲಾ, ಕಮಲಶ್ರೀ, ಟ್ರಸ್ಟ್ ಮೇಲ್ವಿಚಾರಕ ಕೆ.ವಿಜಯಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಗ್ರೇಟರ್ ಬೆಂಗಳೂರು ವ್ಯಾಪ್ತಿಯ 5 ಪಾಲಿಕೆಯ 369 ವಾರ್ಡ್‌ಗಳಿಗೆ ಕರಡು ಮೀಸಲಾತಿ ಪ್ರಕಟ

174 ಸೀಟು ಮಹಿಳೆಯರಿಗೆ ಮೀಸಲು!

ಬೆಂಗಳೂರು, ಜ.10– ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿರುವ ಐದು ಮಹಾನಗರ ಪಾಲಿಕೆಗಳ ಚುನಾವಣೆಗೆ ಪರಿಶಿಷ್ಟ ಜಾತಿ (ಎಸ್‌ಸಿ), ಪರಿಶಿಷ್ಟ ಪಂಗಡ (ಎಸ್‌ಟಿ), ಇತರೆ ಹಿಂದುಳಿದ ವರ್ಗ (ಒಬಿಸಿ) ಎ, ಬಿ, ಮಹಿಳೆ ಮತ್ತು ಸಾಮಾನ್ಯ ವರ್ಗದ ವಾರ್ಡ್‌ಗಳಿಗೆ ಮೀಸಲಾತಿಯ ಕರಡು ಅಧಿಸೂಚನೆಯನ್ನು ರಾಜ್ಯ ಸರ್ಕಾರ ಪ್ರಕಟಿಸಿದೆ.

ಕುತೂಹಲಕಾರಿ ವಿಚಾರವೆಂದರೆ 369 ವಾರ್ಡ್ ಗಳ ಪೈಕಿ 174 ಸೀಟುಗಳನ್ನು ವಿವಿಧ ವರ್ಗಗಳ ಅಡಿಯಲ್ಲಿ ಮಹಿಳೆಯರಿಗೆ ಮೀಸಲಿಡಲಾಗಿದೆ. ನಗರಾಭಿವೃದ್ಧಿ ಇಲಾಖೆ (UDD)ಮೀಸಲಾತಿ ಘೋಷಿಸಲು 2011 ರ ಜನಗಣತಿಯನ್ನು ಪರಿಗಣಿಸಿದೆ.

ಸಾರ್ವಜನಿಕರು 15 ದಿನಗಳೊಳಗೆ ಅಧಿಸೂಚನೆಗೆ ಸಲಹೆ, ಆಕ್ಷೇಪಣೆ ಸಲ್ಲಿಸಬಹುದು. ಜನವರಿ 23 ರೊಳಗೆ ವಿಕಾಸ ಸೌಧದ 4 ನೇ ಮಹಡಿಯಲ್ಲಿರುವ ನಗರಾಭಿವೃದ್ಧಿ ಇಲಾಖೆ ಕೊಠಡಿ ಸಂಖ್ಯೆ 436ರಲ್ಲಿ ಸಂಜೆ 5–30ರೊಳಗೆ ಆಕ್ಷೇಪಣೆ ಸಲ್ಲಿಸಬಹುದು. ಕರಡು ಅಧಿಸೂಚನೆಯೊಂದಿಗೆ ಬೆಂಗಳೂರು ಚುನಾವಣೆ ವದಂತಿ ಮತ್ತಷ್ಟು ಹೆಚ್ಚಾಗಿದೆ. ಮೇ ತಿಂಗಳಲ್ಲಿ ಚುನಾವಣೆ ನಡೆಯುವ ಸಾಧ್ಯತೆ ಇದೆ ಎಂದು ಇಲಾಖೆ ಮೂಲಗಳು ತಿಳಿಸಿವೆ

ಬೆಂಗಳೂರು ಸೆಂಟ್ರಲ್ ಸಿಟಿ ಕಾರ್ಪೊರೇಷನ್ (BCCC) ಆರು ವಿಧಾನಸಭಾ ಕ್ಷೇತ್ರಗಳಾದ ಶಿವಾಜಿನಗರ (8 ವಾರ್ಡ್), ಸಿವಿ ರಾಮನ್ ನಗರ (13), ಶಾಂತಿನಗರ (10), ಚಿಕ್ಕಪೇಟೆ (12), ಚಾಮರಾಜಪೇಟೆ (10) ಮತ್ತು ಗಾಂಧಿನಗರ (10) ಗಳಲ್ಲಿ 63 ವಾರ್ಡ್‌ಗಳನ್ನು ಹೊಂದಿದೆ. ಇಲ್ಲಿ ಸರ್ಕಾರವು 11 ಸ್ಥಾನಗಳನ್ನು ಪರಿಶಿಷ್ಟ ಜಾತಿಗೆ, ಒಂದು ಸ್ಥಾನವನ್ನು ಪರಿಶಿಷ್ಟ ಪಂಗಡಕ್ಕೆ 15 ಸೀಟುಗಳನ್ನು ಒಬಿಸಿ (A) ನಾಲ್ಕು (OBC) (B) ಮತ್ತು 32 ಸ್ಥಾನಗಳನ್ನು ಸಾಮಾನ್ಯ ವರ್ಗ ಮತ್ತು 29 ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಲಾಗಿದೆ.

ಬೆಂಗಳೂರು ಉತ್ತರ ನಗರ ಪಾಲಿಕೆಯ (BNCC) 72 ವಾರ್ಡ್‌ಗಳಲ್ಲಿ 33 ಮಹಿಳೆಯರಿಗೆ ಮೀಸಲಾಗಿದೆ. ಇದರಲ್ಲಿ ಏಳು ವಿಧಾನಸಭಾ ಕ್ಷೇತ್ರಗಳು ಬರುತ್ತವೆ. ಯಲಹಂಕ 7, ಬ್ಯಾಟರಾಯನಪುರ 14, ಸರ್ವಜ್ಞನಗರ 16, ಪುಲಕೇಶಿನಗರ 11 ಹೆಬ್ಬಾಳ 11, ಆರ್‌ಆರ್ ನಗರ 5 ಮತ್ತು ದಾಸರಹಳ್ಳಿ 8 ವಾರ್ಡ್‌ಗಳಿಗೆ. ಇಲ್ಲಿ ಒಂಬತ್ತು ಸೀಟುಗಳನ್ನು ಪರಿಶಿಷ್ಟ ಜಾತಿಗೆ, ಎರಡು ಖಖಿ, 19 ಒಬಿಸಿ ಎಗೆ 19, ಒಬಿಸಿ ಬಿಗೆ ಮೂರು ಮತ್ತು 32 ಸಾಮಾನ್ಯ ವರ್ಗಕ್ಕೆ ಮತ್ತು 25 ಸ್ಥಾನಗಳು ಮಹಿಳೆಯರಿಗೆ ಮೀಸಲಾಗಿದೆ.

ಕೆಆರ್ ಪುರಂ ಮತ್ತು ಮಹದೇವಪುರ ವಿಧಾನಸಭಾ ಕ್ಷೇತ್ರಗಳನ್ನು ಹೊಂದಿರುವ ಬೆಂಗಳೂರು ಪೂರ್ವ ಮಹಾನಗರ ಪಾಲಿಕೆ (BWCC) 50 ವಾರ್ಡ್‌ಗಳನ್ನು ಹೊಂದಿದ್ದು, ಇದರಲ್ಲಿ 23 ಮಹಿಳೆಯರಿಗೆ, ಏಳು ಎಸ್‌ಸಿ, 1 ಎಸ್‌ಟಿ, 14 ಒಬಿಸಿ ಎ, 3 ಒಬಿಸಿ ಬಿ ಮತ್ತು 25 ಸಾಮಾನ್ಯ ವರ್ಗಕ್ಕೆ ಮೀಸಲಾಗಿದೆ.

ಬೆಂಗಳೂರು ಪಶ್ಚಿಮ ಮಹಾನಗರ ಪಾಲಿಕೆಯಲ್ಲಿ (BWCC)ಒಟ್ಟು 112 ಸ್ಥಾನಗಳಲ್ಲಿ 55 ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಲಾಗಿದೆ. ಇದರಲ್ಲಿ SC – 9, ST– 2, BC (A) – 30, OBC (B) – 7, ಸಾಮಾನ್ಯ ವರ್ಗ 64 ಸ್ಥಾನಗಳನ್ನು ಮೀಸಲಿಡಲಾಗಿದೆ. 10 ವಿಧಾನಸಭಾ ಕ್ಷೇತ್ರಗಳ ಪೈಕಿ ದಾಸರಹಳ್ಳಿ–10, ಯಶವಂತಪುರ–14, ಮಲ್ಲೇಶ್ವರಂ–10 ಖಖಲಕ್ಷ್ಮೀ–14 ಮಲ್ಲೇಶ್ವರಂ–10, ರಾಜಾಜಿನಗರ–11, ಗೋವಿಂದರಾಜನಗರ–13, ವಿಜಯನಗರ –13, ಬಸವನಗುಡಿ–10 ಮತ್ತು ಪದ್ಮನಾಭ ನಗರ–7 ವಾರ್ಡ್ ಗಳನ್ನು ಹೊಂದಿವೆ.

ಬೆಂಗಳೂರು ದಕ್ಷಿಣ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ (BSCC) ಮಹಿಳೆಯರಿಗೆ 34, ಎಸ್‌ಸಿಗೆ ಏಳು, ಎಸ್‌ಟಿಗೆ ಒಂದು, ಒಬಿಸಿ ಎಗೆ 14, ಒಬಿಸಿ ಬಿಗೆ ಮೂರು ಮತ್ತು ಸಾಮಾನ್ಯ ವರ್ಗಕ್ಕೆ 13 ಸ್ಥಾನಗಳನ್ನು ಮೀಸಲಿಡಲಾಗಿದೆ ಈ ಪಾಲಿಕೆ ವ್ಯಾಪ್ತಿಯಲ್ಲಿ ಪದ್ಮನಾಭ ನಗರ–6, ಜಯನಗರ–10, ಬಿಟಿಎಂ–ಲೇಔಟ್–14, ಮಹದೇವಪುರ–1, ಆನೇಕಲ್–1, ಯಶವಂತಪುರ–1, ಬೆಂಗಳೂರು ದಕ್ಷಿಣ–19 ಮತ್ತು ಬೊಮ್ಮನಹಳ್ಳಿ–20 ವಾರ್ಡ್ ಗಳಿವೆ. ಬೃಹತ್ ಬೆಂಗಳೂರು ಆಡಳಿತ ಕಾಯಿದೆ 2024 ರ ಸೆಕ್ಷನ್ 29ರ ಅಡಿಯಲ್ಲಿ ಕರಡು ಅಧಿಸೂಚನೆಯನ್ನು ಪ್ರಕಟಿಸಲಾಗಿದೆ.

ಅಮೆರಿಕಾಗೆ ಮರ್ಮಾಘಾತ

4 ವರ್ಷದಲ್ಲಿ ಮೊದಲ ಬಾರಿಗೆ ಟ್ರೆಶರಿ ಎಕ್ಸ್ಪೋಷರ್ ಕಡಿತಗೊಳಿಸಿದ ಆರ್‌ಬಿಐ

ನವದೆಹಲಿ, ಜ.10–ಹೆಚ್ಚುತ್ತಿರುವ ಜಾಗತಿಕ ಆರ್ಥಿಕ ಮತ್ತು ಭೌಗೋಳಿಕ ರಾಜಕೀಯ ಅಪಾಯಗಳ ಮಧ್ಯೆ ವಿದೇಶಿ ವಿನಿಮಯ ಮೀಸಲು ವೈವಿಧ್ಯೀಕರಣ ಮತ್ತು ಡಾಲರ್ ಅಲ್ಲದ ಸ್ವತ್ತುಗಳ ಕಡೆಗೆ ಕಾರ್ಯತಂತ್ರದ ಬದಲಾವಣೆಯಾಗಿ, ಭಾರತೀಯ ರಿಸರ್ವ್ ಬ್ಯಾಂಕ್ ಯುಎಸ್ ಖಜಾನೆ ಸೆಕ್ಯುರಿಟಿಗಳ ಹಿಡುವಳಿಯಲ್ಲಿ 21% ಕಡಿತಗೊಳಿಸಿದೆ.

ಯುಎಸ್ ಖಜಾನೆ ಇಲಾಖೆಯ ಪ್ರಕಾರ, ಆರ್‌ಬಿಐ ಯುಎಸ್ ಬಾಂಡ್‌ಗಳ ಹಿಡುವಳಿ ಅಕ್ಟೋಬರ್ 31, 2024 ರಂದು $241.4 ಬಿಲಿಯನ್‌ನಿಂದ ಅಕ್ಟೋಬರ್ 31, 2025 ರಂದು $190.7 ಬಿಲಿಯನ್‌ಗೆ ಇಳಿದಿದೆ, ಇದು ಉತ್ತಮ ಆಸ್ತಿ ವೈವಿಧ್ಯೀಕರಣದ ಕಡೆಗೆ ಫಾರೆಕ್ಸ್ ತಂತ್ರದಲ್ಲಿ ಬದಲಾವಣೆಯನ್ನು ಸೂಚಿಸುತ್ತದೆ. ಯುಎಸ್ ಅಕ್ಟೋಬರ್–ಸೆಪ್ಟೆಂಬರ್ ಅನ್ನು ತನ್ನ ಹಣಕಾಸು ವರ್ಷವಾಗಿ ಅನುಸರಿಸುತ್ತದೆ.

ಬ್ಲೂಮ್‌ಬರ್ಗ್ ವಿಶ್ಲೇಷಣೆಯ ಪ್ರಕಾರ, ಕಳೆದ ನಾಲ್ಕು ವರ್ಷಗಳಲ್ಲಿ ಆರ್‌ಬಿಐನಿಂದ ಯುಎಸ್ ಖಜಾನೆ ಹೂಡಿಕೆಗಳಲ್ಲಿ ಇದು ಮೊದಲ ವಾರ್ಷಿಕ ಕುಸಿತವಾಗಿದೆ. ಯುಎಸ್ ಬಾಂಡ್‌ಗಳಲ್ಲಿ ತುಲನಾತ್ಮಕವಾಗಿ ಆಕರ್ಷಕ ಇಳುವರಿಯ ಹೊರತಾಗಿಯೂ ಡ್ರಾಡೌನ್ ದಾಖಲಾಗಿದೆ. ಈ ಅವಧಿಯಲ್ಲಿ, ಮಾನದಂಡದ 10–ವರ್ಷದ ಯುಎಸ್ ಬಾಂಡ್‌ಗಳ ಮೇಲಿನ ಆದಾಯ 4–4.8% ವ್ಯಾಪ್ತಿಯಲ್ಲಿ ವಹಿವಾಟು ನಡೆಸಿತು. ಈ ಕಡಿದಾದ ಕಡಿತ ಆದಾಯ ಪರಿಗಣನೆಗಳಿಂದಲ್ಲ. ಆದರೆ ಅಕ್ಟೋಬರ್‌ನಲ್ಲಿ ಸುಮಾರು $700 ಬಿಲಿಯನ್‌ನಷ್ಟಿದ್ದ ಮೀಸಲು ಹಂಚಿಕೆಯ ಮರುಮೌಲ್ಯಮಾಪನದಿಂದ ನಡೆಸಲ್ಪಟ್ಟಿದೆ ಎಂದು ತಜ್ಞರು ಹೇಳುತ್ತಾರೆ.

ವೈವಿಧ್ಯೀಕರಣದ ಭಾಗವಾಗಿ, ಆರ್‌ಬಿಐ ತನ್ನ ಚಿನ್ನದ ನಿಕ್ಷೇಪಗಳನ್ನು ನಿರ್ಮಿಸುತ್ತಿದೆ. 2024ರಲ್ಲಿ ದಾಖಲೆಯ 64 ಟನ್ ಚಿನ್ನ ಖರೀದಿಯ ನಂತರ, ಕೇಂದ್ರ ಬ್ಯಾಂಕ್ 2025ರಲ್ಲಿ ಹಳದಿ ಲೋಹವನ್ನು ಸೇರಿಸುವಲ್ಲಿ ನಿಧಾನವಾಗಿ ಸಾಗುತ್ತಿದೆ. ಇದು ಸೆಪ್ಟೆಂಬರ್ ಅಂತ್ಯದ ವೇಳೆಗೆ 880.8 ಟನ್‌ಗಳಷ್ಟಿತ್ತು. ಒಟ್ಟು ವಿದೇಶಿ ವಿನಿಮಯ ನಿಕ್ಷೇಪಗಳಲ್ಲಿ ಚಿನ್ನದ ಪಾಲು ಸೆಪ್ಟೆಂಬರ್ ವೇಳೆಗೆ 13.9%ಕ್ಕೆ ಏರಿತು, ಇದು ಹಿಂದಿನ ವರ್ಷದ ಅವಧಿಯಲ್ಲಿ 9%ರಷ್ಟಿತ್ತು.











ಸ್ಥಾಪನೆ : 1916 RBI License No. UBD KA 844P, Dt.28.01.1987

ದಿ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ನಿ.,

ಶಾಖೆಗಳು: 1) ಉದಯಗಿರಿ 2) ರಾಜೀವ್‌ನಗರ 3) ಹುಣಸೂರು

ಮುಖ್ಯ ಶಾಖೆ: ನ್ಯೂ ಸಯ್ಯಾಜಿ ರಾವ್ ರಸ್ತೆ, ಮೈಸೂರು–570001.

ನಿಯಮ 13(4) ಪರಿಶಿಷ್ಟ IV
ಕಬ್ಜೆ (ಸ್ವಾಧೀನ) ವಹಿಸುವ ಬಗೆಗಿನ ತಿಳುವಳಿಕೆ ನೋಟೀಸ್

ಕೆಳಸಹಿದಾರರು ದಿ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ನಿ., ಮೈಸೂರು ಇದರ ಅಧಿಕಾರ ಹೊಂದಿದ ಅಧಿಕಾರಿಯಾಗಿದ್ದು ಹಣಕಾಸು ಸ್ವತ್ತುಗಳ ಪ್ರತಿಭೂತಿ ಹಿತಾಸಕ್ತಿ ಮತ್ತು ಪುನರ್ ನಿರ್ಮಾಣ ಭದ್ರತೆ ಮತ್ತು ಭದ್ರತಾ ಹಿತಾಸಕ್ತಿ [ನಿಯಮ, 2002 (2002ರ 54)] ರ ಅನ್ವಯ ಸೆಕ್ಷನ್ 13(12)ರ [ನಿಯಮ 3] ಅನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಅನುಷ್ಠಾನ) ನಿಯಮ 2002ರ ಅನ್ವಯ ಈ ಕೆಳಗಿನ ಸಾಲಗಾರರಿಗೆ ಸೆಕ್ಷನ್ 13(2) ರ ಅಡಿ ತಗಾದೆ ಸೂಚನೆಯನ್ನು ನೀಡಿದ್ದು, ನೋಟೀಸ್‌ನಲ್ಲಿ ತಿಳಿಸಿರುವ ಮೊತ್ತವನ್ನು ಈ ನೋಟೀಸ್ ನೀಡಿದ 60 ದಿನಗಳ ಒಳಗೆ ಸೂಚಿಸಿರುವ ಮೊಬಲಗನ್ನು ಬಡ್ಡಿಯೊಂದಿಗೆ ಮರು ಪಾವತಿಸುವಂತೆ ಸೂಚಿಸಲಾಗಿತ್ತು.

ಸಾಲಗಾರರುಗಳು ಸಾಲದ ಹಣವನ್ನು ಮರು ಪಾವತಿ ಮಾಡಲು ವಿಫಲರಾಗಿದ್ದು ಸಾಲಗಾರರುಗಳಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಕೆಳ ಸಹಿದಾರರು ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು ಸೆಕ್ಷನ್ 13(4) ಕಾಯಿದೆ ನಿಯಮ 8 ಮತ್ತು 9 ಅನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡ ದಿನಾಂಕದಂದು ವಿವರಿಸಲಾಗಿರುವ ಸ್ವತ್ತುಗಳನ್ನು ವಶಪಡಿಸಿಕೊಂಡಿರುತ್ತಾರೆ.

ನಿರ್ದಿಷ್ಟವಾಗಿ ಸಾಲಗಾರರುಗಳಿಗೆ, ಕಾನೂನುಬದ್ಧ ಉತ್ತರಾಧಿಕಾರಿಗಳಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ ಯಾರೊಬ್ಬರೂ ಸಹ ಸದರಿ ಸ್ವತ್ತುಗಳ ಬಗ್ಗೆ ವ್ಯವಹರಿಸಬಾರದು ಮತ್ತು ಸದರಿ ಸ್ವತ್ತಿನ ಬಗ್ಗೆ ಯಾವುದೇ ವ್ಯವಹಾರ ನಡೆಸಿದ್ದೆ ಆದರೆ ದಿ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ನಿ., ಮೈಸೂರು. ಬಾಕಿ ಇರುವ ಮೊತ್ತ ಮತ್ತು ಇದರ ಮೇಲಿನ ಬಡ್ಡಿ ಬಾಕಿ ಚುಕ್ತ ಮಾಡುವುದಕ್ಕೆ ಅದು ಒಳಪಟ್ಟಿರುತ್ತದೆ.

ಕಾಯಿದೆ ಸೆಕ್ಷನ್ 13(8) ರ ನಿಬಂಧನೆಗಳಿಗೆ ಸಂಬಂಧಿಸಿದಂತೆ ಲಭ್ಯವಿರುವ ಸಮಯಕ್ಕೆ ತಮ್ಮ ಸ್ವತ್ತುಗಳನ್ನು ಪಡೆದುಕೊಳ್ಳಲು ಸಾಲಗಾರರ ಗಮನಕ್ಕೂ ತರಲಾಗಿದೆ.

ಕ್ರಮ ಸಂಖ್ಯೆ	ಸಾಲಗಾರರ ಮತ್ತು ಜಾಮೀನುದಾರರ ಹೆಸರು	ಸ್ಥಿರಾಸ್ತಿ ವಿವರ	ಡಿಮ್ಯಾಂಡ್ ನೋಟೀಸ್ ದಿನಾಂಕ	ಸ್ವಾಧೀನಪಡಿಸಿ ಕೊಂಡಿರುವ ದಿನಾಂಕ	ಬಾಕಿ ಇರುವ ಮೊತ್ತ (ರೂ.ಗಳಲ್ಲಿ)
1.	1) ಶ್ರೀ ಮಿರ್ ಅಫ್ತಾಬ್ ಹುಸೇನ್ ಬಿನ್ ಮಿರ್ ಅಸಿಫ್ ಹುಸೇನ್ 2) ಶ್ರೀಮತಿ ಫೌಸಿಯ ಕೋಂ ಮಿರ್ ಅಫ್ತಾಬ್ ಹುಸೇನ್ ನಂ.3325, ಆನೆಗುಂಡಿ ರಸ್ತೆ, 2ನೇ ಕ್ರಾಸ್, 2ನೇ ಈದ್ಗಾ, ಮಂಡಿ ಮೊಹಲ್ಲಾ, ಮೈಸೂರು.	ಮೈಸೂರು ಸಿಟಿ, ಮಂಡಿ ಮೊಹಲ್ಲಾ, 2ನೇ ಈದ್ಗಾ, ಆನೆಗುಂಡಿ ರಸ್ತೆ, 2ನೇ ಕ್ರಾಸ್, ಕಾರ್ಪೊರೇಶನ್ ಮನೆ ನಂ.3325:72ಎ1, ಹೊಸ ಎಂ–31/ಎ1, **ವಿಸ್ತೀರ್ಣ:** ಪೂರ್ವ–ಪಶ್ಚಿಮ: 12.00 ಅಡಿಗಳು ಮತ್ತು ಉತ್ತರ–ದಕ್ಷಿಣ: 22½ ಅಡಿಗಳು. **ಚಕ್ಕುಬಂಧಿ:– ಪೂರ್ವಕ್ಕೆ:** ತಾಜುನ್ನಿಸಾ ರವರ ಸ್ವತ್ತು, **ಪಶ್ಚಿಮಕ್ಕೆ:** ಮಿರ್ ಹೈದರ್ ಹುಸೇನ್ ರವರ ಸ್ವತ್ತು, **ಉತ್ತರಕ್ಕೆ:** ಸಾಯಿರಾ ಬಾನು ರವರ ಸ್ವತ್ತು, **ದಕ್ಷಿಣಕ್ಕೆ:** ಗಲ್ಲಿ.	24.10.2025 ಎನ್‌ಪಿಎ ದಿನಾಂಕ 06.04.2024	05.01.2026	ಖಾತೆ ಸಂಖ್ಯೆ ಹೆಚ್‌ಪಿ–8909 ರೂ.2,29,767/– + ದಿನಾಂಕ 16.10.2025 ರಿಂದ ಬಡ್ಡಿ ಇದರೊಂದಿಗೆ ಪ್ರಾಸಂಗಿಕ ಖರ್ಚು, ವೆಚ್ಚಗಳು, ಪ್ರಭಾರಗಳು ಇತ್ಯಾದಿ
2.	1) ಶ್ರೀಮತಿ ಲತಾ ಬಾಯಿ ಕೋಂ ಬಿ. ದಿನೇಶ್ ಸಿಂಗ್ 2) ಶ್ರೀ ಬಿ. ದಿನೇಶ್ ಸಿಂಗ್ ಬಿನ್ ಬಾಲಾಜಿ ಸಿಂಗ್ ಮನೆ ನಂ.444/ಬಿ, ಮುನೇಶ್ವರನಗರ, ಉದಯಗಿರಿ, ಮೈಸೂರು.	ಮೈಸೂರು ಸಿಟಿ, ನಜರ್‌ಬಾದ್ ಮೊಹಲ್ಲಾ, ಸಾತಗಳ್ಳಿ ಬಡಾವಣೆ, ನಿವೇಶನ ನಂ.1530. **ವಿಸ್ತೀರ್ಣ:** ಪೂರ್ವ–ಪಶ್ಚಿಮ: 6.00 ಮೀಟರ್‌ಗಳು ಮತ್ತು ಉತ್ತರ–ದಕ್ಷಿಣ: 9.00 ಮೀಟರ್‌ಗಳು. **ಚಕ್ಕುಬಂಧಿ:– ಪೂರ್ವಕ್ಕೆ:** 1529ನೇ ನಂಬರಿನ ಸ್ವತ್ತು, **ಪಶ್ಚಿಮಕ್ಕೆ:** 1531ನೇ ನಂಬರಿನ ಸ್ವತ್ತು, **ಉತ್ತರಕ್ಕೆ:** 9 ಮೀಟರ್‌ಗಳ ರಸ್ತೆ, **ದಕ್ಷಿಣಕ್ಕೆ:** 1548ನೇ ನಂಬರಿನ ಸ್ವತ್ತು.	14.10.2025 ಎನ್‌ಪಿಎ ದಿನಾಂಕ 28.08.2025	05.01.2026	ಖಾತೆ ಸಂಖ್ಯೆ ಹೆಚ್‌ಪಿ–251 ರೂ.31,76,237/– + ದಿನಾಂಕ 13.10.2025 ರಿಂದ ಬಡ್ಡಿ ಇದರೊಂದಿಗೆ ಪ್ರಾಸಂಗಿಕ ಖರ್ಚು, ವೆಚ್ಚಗಳು, ಪ್ರಭಾರಗಳು ಇತ್ಯಾದಿ
3.	1) ಶ್ರೀಮತಿ ಶಬಾನಾ ತರಾನ ಸುಲ್ತಾನ C/o ಜಹೀರುದ್ದೀನ್ 2) ಶ್ರೀಮತಿ ಫಾತಿಮ ಸುಲ್ತಾನ ಬಿನ್ ಅಬ್ದುಲ್ ಕರೀಮ್ ಮನೆ ನಂ.799, LIG–2, 2ನೇ ಸ್ಟೇಜ್, ರಾಜೀವನಗರ, ಮೈಸೂರು.	ಮೈಸೂರು ಸಿಟಿ, ಎನ್.ಆರ್. ಮೊಹಲ್ಲಾ, ರಾಜೀವ್‌ನಗರ, 3ನೇ ಸ್ಟೇಜ್, ದೇವನೂರು HUDCO, ಮನೆ ನಂ. LIG–799, **ವಿಸ್ತೀರ್ಣ:** ಪೂರ್ವ–ಪಶ್ಚಿಮ: 6.00 ಮೀಟರ್‌ಗಳು ಮತ್ತು ಉತ್ತರ–ದಕ್ಷಿಣ: 14.00 ಮೀಟರ್‌ಗಳು. **ಚಕ್ಕುಬಂಧಿ:– ಪೂರ್ವಕ್ಕೆ:** 800ನೇ ನಂಬರಿನ ಸ್ವತ್ತು, **ಪಶ್ಚಿಮಕ್ಕೆ:** 798ನೇ ನಂಬರಿನ ಸ್ವತ್ತು, **ಉತ್ತರಕ್ಕೆ:** ರಸ್ತೆ, **ದಕ್ಷಿಣಕ್ಕೆ:** 850ನೇ ನಂಬರಿನ ಸ್ವತ್ತು.	27.10.2025 ಎನ್‌ಪಿಎ ದಿನಾಂಕ 28.04.2025	05.01.2026	ಖಾತೆ ಸಂಖ್ಯೆ ಹೆಚ್‌ಪಿ–9364 ರೂ.26,68,171/– + ದಿನಾಂಕ 27.10.2025 ರಿಂದ ಬಡ್ಡಿ ಇದರೊಂದಿಗೆ ಪ್ರಾಸಂಗಿಕ ಖರ್ಚು, ವೆಚ್ಚಗಳು, ಪ್ರಭಾರಗಳು ಇತ್ಯಾದಿ
4.	1) ಶ್ರೀ ಮೊಹಮ್ಮದ್ ಶಮ್ಮು ಸತ್ತಾರ್ ಬಿನ್ ಮೊಹಮ್ಮದ್ ಸುಲೇಮಾನ್ ನಿಸಾರ್ 2) ಶ್ರೀಮತಿ ಸೀಮಾ ಬಾನು ಕೋಂ ಮೊಹಮ್ಮದ್ ಶಮ್ಮು ಸತ್ತಾರ್ ಮನೆ ನಂ.2698, M.K.D.K. ರಸ್ತೆ, ಮಂಡಿ ಮೊಹಲ್ಲಾ, ಮೈಸೂರು.	ಮೈಸೂರು ಸಿಟಿ, ಮಂಡಿ ಮೊಹಲ್ಲಾ, M.K.D.K. ರಸ್ತೆ, ಮನೆ ನಂ.2698, ಹೊಸ ಎಂ–23. **ವಿಸ್ತೀರ್ಣ:** ಪೂರ್ವ–ಪಶ್ಚಿಮ: 25.00 ಅಡಿಗಳು ಮತ್ತು ಉತ್ತರ–ದಕ್ಷಿಣ: 28+30/2 ಅಡಿಗಳು. ಮತ್ತು ದಕ್ಷಿಣ ಭಾಗದ ಕಡೆಗೆ ಪೂರ್ವ–ಪಶ್ಚಿಮ: 5.00 ಅಡಿಗಳು ಮತ್ತು ಉತ್ತರ–ದಕ್ಷಿಣ: 30.00 ಅಡಿಗಳು. **ಚಕ್ಕುಬಂಧಿ:– ಪೂರ್ವಕ್ಕೆ:** ಬಸುನ್ನ ರವರಿಗೆ ಸೇರಿದ ಸ್ವತ್ತು, **ಪಶ್ಚಿಮಕ್ಕೆ:** ರಶೀದ್ ಖಾನ್ ರವರಿಗೆ ಸೇರಿದ ಸ್ವತ್ತು, **ಉತ್ತರಕ್ಕೆ:** 9.00 ಮೀಟರ್ ಎಂ.ಕೆ.ಡಿ.ಕೆ. ರಸ್ತೆ, **ದಕ್ಷಿಣಕ್ಕೆ:** ಅಮೀರ್ ಸಾಬ್ ರವರಿಗೆ ಸೇರಿದ ಸ್ವತ್ತು	24.10.2025 ಎನ್‌ಪಿಎ ದಿನಾಂಕ 29.07.2025	05.01.2026	ಖಾತೆ ಸಂಖ್ಯೆ ಹೆಚ್‌ಪಿ–9458 ರೂ.9,32,264/– + ದಿನಾಂಕ 16.10.2025 ರಿಂದ ಬಡ್ಡಿ ಇದರೊಂದಿಗೆ ಪ್ರಾಸಂಗಿಕ ಖರ್ಚು, ವೆಚ್ಚಗಳು, ಪ್ರಭಾರಗಳು ಇತ್ಯಾದಿ
5.	1) ಶ್ರೀ ಫೈರೋಜ್ ಪಾಷ ಬಿನ್ ಲೇಟ್ ಅಬ್ದುಲ್ ಸತ್ತಾರ್ 2) ಶ್ರೀಮತಿ ಗುಲ್ನಾಜ್ ಖಾನುಮ್ ಕೋಂ ಫೈರೋಜ್ ಪಾಷ ಮನೆ ನಂ.3183, ಎಂ–2/ಸಿ, ಪುಲಿಕೇಶಿ ರಸ್ತೆ, ಮಂಡಿ ಮೊಹಲ್ಲಾ, ಮೈಸೂರು.	ಮೈಸೂರು ಸಿಟಿ, ಮಂಡಿ ಮೊಹಲ್ಲಾ, ಪುಲಿಕೇಶಿ ರಸ್ತೆ, ಬಿ.ಬಿ ಕೇರಿ, 1ನೇ ಕ್ರಾಸ್, ಕಾರ್ಪೊರೇಶನ್ ಮನೆ ನಂ.3183/2ಸಿ, ಹೊಸ ಎಂ–2ಸಿ. **ವಿಸ್ತೀರ್ಣ:** ಪೂರ್ವ–ಪಶ್ಚಿಮ: 12½ ಅಡಿಗಳು ಮತ್ತು ಉತ್ತರ–ದಕ್ಷಿಣ: 27½ ಅಡಿಗಳು. **ಚಕ್ಕುಬಂಧಿ:– ಪೂರ್ವಕ್ಕೆ:** ಪುಟ್ಟರಾಜು ರವರ ಸ್ವತ್ತು, **ಪಶ್ಚಿಮಕ್ಕೆ:** ಹೈದರ್ ಖಾನ್ ರವರ ಸ್ವತ್ತು, **ಉತ್ತರಕ್ಕೆ:** ಅಫ್ರೋಜ್ ಪಾಷ ರವರ ಸ್ವತ್ತು, **ದಕ್ಷಿಣಕ್ಕೆ:** ಗಲ್ಲಿ.	24.10.2025 ಎನ್‌ಪಿಎ ದಿನಾಂಕ 02.12.2023	05.01.2026	ಖಾತೆ ಸಂಖ್ಯೆ ಹೆಚ್‌ಪಿ–7898 ರೂ.2,33,731/– + ದಿನಾಂಕ 16.10.2025 ರಿಂದ ಬಡ್ಡಿ ಇದರೊಂದಿಗೆ ಪ್ರಾಸಂಗಿಕ ಖರ್ಚು, ವೆಚ್ಚಗಳು, ಪ್ರಭಾರಗಳು ಇತ್ಯಾದಿ

ದಿನಾಂಕ: 10.01.2026
ಸ್ಥಳ: ಮೈಸೂರು

ಸಹಿ/– ಅಧಿಕೃತ ಅಧಿಕಾರಿ
ದಿ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಮೈಸೂರು